ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15, ಸಂಚಿಕೆ 21, ಮೇ 17–23, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕೆ.ಆರ್.ಗೌರಿ ಅಮ್ಮ – ರಂಜನಾ ನಿರುಲ
ಲಾಲ್ ಸಲಾಂ



ಉದ್ಧಟ ವ್ಯಾಕ್ಸಿನ್ ಅಫಿಡವಿಟ್



ಪಾಠ ಕಲಿಯಲು ನಿರಾಕರಿಸುವ ಈ ಸರ್ಕಾರ



ಕೋವಿಡ್ ಲಾಕ್‌ಡೌನ್ – ಸಿ.ಎಂ. ಬಾಯಿಗೂ!



ದಿನಗೂಲಿ ಕಾರ್ಮಿಕರಿಗೆ ಬೇಕು ವಿಶೇಷ ಕೋವಿಡ್ ಪ್ಯಾಕೇಜ್

ಕೋವಿಡ್–19 ಎರಡನೇ ಅಲೆ ಹಲವು ಪ್ರಶ್ನೆಗಳು

ಪ್ರಧಾನ ಮಂತ್ರಿಗಳಿಗೆ ಮತ್ತೊಮ್ಮೆ 12 ಪ್ರತಿಪಕ್ಷಗಳ ಮುಖಂಡರ ಜಂಟಿ ಪತ್ರ

"ದೇಶದ, ಜನಗಳ ಹಿತದೃಷ್ಟಿಯಿಂದ ಈಗಲಾದರೂ ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಿ"

ಕೊವಿಡ್ ಮಹಾಸೋಂಕನ್ನು ಎದುರಿಸಲು ಪ್ರತಿಪಕ್ಷಗಳ ಮುಖಂಡರು ಮತ್ತೊಮ್ಮೆ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಈ ಹಿಂದೆ ಈ ಮುಖಂಡರು ವೈಯಕ್ತಿಯವಾಗಿಯೂ, ಜಂಟಿಯಾಗಿಯೂ ಹಲವು ಬಾರಿ ವಿನಂತಿಸಿಕೊಂಡಿದ್ದರೂ ಏನೂ ಮಾಡಿರದಿದ್ದರೂ, ಈಗ ದೇಶದಲ್ಲಿ ಈ ಮಹಾಸೋಂಕು ಒಂದು ಮಾನವ ಅನಾಹುತದ ಅಭೂತಪೂರ್ವ ಆಯಾಮವನ್ನು ಪಡೆದುಕೊಂಡಿರುವ ಸನ್ನಿವೇಶದಲ್ಲಾದರೂ ದೇಶದ ಮತ್ತು ನಮ್ಮ ಜನತೆಯ ಹಿತದೃಷ್ಟಿಯಿಂದ ಕೇಂದ್ರ ಸರಕಾರ ಕೈಗೊಳ್ಳಲೇಬೇಕಾದ, ಜಾರಿಗೊಳಿಸಲೇ ಬೇಕಾದ ಕ್ರಮಗಳತ್ತ ಗಮನ ಸೆಳೆಯಲು ಜಂಟಿಯಾಗಿ ಮತ್ತೊಂದು ಪತ್ರವನ್ನು ಮೇ 12ರಂದು ಬರೆದಿದ್ದಾರೆ.

ಈ ಜಂಟಿ ಪತ್ರಕ್ಕೆ ಸೋನಿಯಾ ಗಾಂಧಿ(ಕಾಂಗ್ರೆಸ್), ಹೆಚ್.ಡಿ.ದೇವೇಗೌಡ(ಜೆಡಿ-ಎಸ್), ಶರದ್ ಪವಾರ್(ಎನ್.ಸಿ.ಪಿ.), ಉದ್ಧವ್ ಠಕ್ರೆ(ಶಿವಸೇನಾ), ಮಮತಾ ಬ್ಯಾನರ್ಜಿ(ಟಿಎಂಸಿ), ಎಂ ಕೆ ಸ್ಟಾಲಿನ್(ಡಿಎಂಕೆ). ಹೇಮಂತ್ ಸೋರೆನ್(ಜೆಎಂಎಂ), ಫಾರುಕ್ ಅಬ್ದುಲ್ಲ(ಜಮ್ಮು-ಕಾಶ್ಮೀರ ಜನತಾ ಮೈತ್ರಿಕೂಟ), ಅಖಿಲೇಶ್ ಯಾದವ್(ಎಸ್.ಪಿ.), ತೇಜಸ್ವಿ ಯಾದವ್(ಆರ್.ಜೆ.ಡಿ.) ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಮತ್ತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಸಹಿ ಮಾಡಿದ್ದಾರೆ.

ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಪ್ರಧಾನ ಮಂತ್ರಿಗಳೇ,

ನಮ್ಮ ದೇಶದಲ್ಲಿ ಕೊವಿಡ್ ಮಹಾಸೋಂಕು ಒಂದು ಮಾನವ ಅನಾಹುತದ ಅಭೂತಪೂರ್ವ ಆಯಾಮವನ್ನು ಪಡೆದುಕೊಂಡಿದೆ.

ನಾವು, ಈ ಹಿಂದೆ, ಮತ್ತೆ-ಮತ್ತೆ, ಸ್ವತಂತ್ರವಾಗಿಯೂ, ಜಂಟಿಯಾಗಿಯೂ, ಕೇಂದ್ರ ಸರಕಾರ ಅತ್ಯಗತ್ಯವಾಗಿ ಕೈಗೊಳ್ಳಲೇ ಬೇಕಾಗಿರುವ ಮತ್ತು ಜಾರಿಗೊಳಿಸಲೇ ಬೇಕಾಗಿರುವ ವಿವಿಧ ಕ್ರಮಗಳತ್ತ ನಿಮ್ಮ ಗಮನವನ್ನು ಸೆಳೆದಿದ್ದೇವೆ. ದುರದೃಷ್ಟವಶಾತ್, ನಿಮ್ಮ ಸರಕಾರ ಈ ಎಲ್ಲ ಸಲಹೆ-ಸೂಚನೆಗಳನ್ನು ಒಂದೋ ಉಪೇಕ್ಷಿಸಿದೆ ಅಥವ ನಿರಾಕರಿಸಿದೆ. ಇದು ಪರಿಸ್ಥಿತಿಯನ್ನು ಉಲ್ಬಣಗೊಳಿಸಿ ಇಂತಹ ಒಂದು ಪ್ರಳಯಾಂತಕಾರಿ ಮಾನವ ದುರಂತದ ಸನ್ನಿವೇಶವನ್ನು ತಲುಪುವಂತೆ ಮಾಡಿದೆ.

ದೇಶವನ್ನು ಇಂತಹ ದುರಂತಮಯ ಸ್ಥಿತಿಗೆ ತಂದ ಕೇಂದ್ರ ಸರಕಾರದ ಮಾಡಿದ ಮತ್ತು ಮಾಡದ ಎಲ್ಲ ಕೃತ್ಯಗಳ ವಿವರಕ್ಕೆ ಹೋಗದೆ, ನಾವು ಈ ಕೆಳಗಿನ ಕ್ರಮಗಳನ್ನು ನಿಮ್ಮ ಸರಕಾರ ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಾಗಿದೆ ಎಂಬ ದೃಢ ಅಭಿಪ್ರಾಯವನ್ನು ಹೊಂದಿದ್ದೇವೆ:

- ಲಸಿಕೆಗಳನ್ನು, ಜಗತ್ತಿನಲ್ಲಿ ಮತ್ತು ದೇಶದೊಳಗೂ ಎಲ್ಲೆಲ್ಲಿ ಲಭ್ಯ ಇವೆಯೋ ಅವೆಲ್ಲಾ ಮೂಲಗಳಿಂದ ಕೇಂದ್ರೀಯವಾಗಿ ಪಡೆಯಬೇಕು.
- ತಕ್ಷಣವೇ ಒಂದು ಉಚಿತ, ಸಾಮೂಹಿಕ, ಸಾರ್ವತ್ರಿಕ ಲಸಿಕೆ ಅಭಿಯಾನವನ್ನು ದೇಶಾದ್ಯಂತ ಆರಂಭಿಸಬೇಕು.
- ದೇಶದೊಳಗೆ ಲಸಿಕೆ ಉತ್ಪಾದನೆಯನ್ನು ವಿಸ್ತರಿಸಲು ಕಡ್ಡಾಯ ಲೈಸೆನ್ಸಿಂಗ್ ಅಧಿಕಾರವನ್ನು ಪ್ರಯೋಗಿಸಬೇಕು.
- ಬಜೆಟಿನಲ್ಲಿ ಲಸಿಕೆಗೆಂದು ಎತ್ತಿಟ್ಟಿರುವ ರೂ.35,000 ಕೋಟಿಯನ್ನು ಖರ್ಚು ಮಾಡಬೇಕು.
- ಸೆಂಟ್ರಲ್ ವಿಸ್ತಾ ನಿರ್ಮಾಣವನ್ನು ನಿಲ್ಲಿಸಬೇಕು. ಅದಕ್ಕೆ ಇಟ್ಟಿರುವ ಹಣವನ್ನು ಆಕ್ಸಿಜನ್ ಮತ್ತು ಲಸಿಕೆಗಳನ್ನು ಪಡೆಯಲು ಬಳಸಬೇಕು.
- ಲೆಕ್ಕ ಪರೀಕ್ಷಣೆಗಳಿಗೆ ಒಳಗಾಗದ ಖಾಸಗಿ ಟ್ರಸ್ಟ್ ನಿಧಿ ಪಿಎಂಕೇರ್ಸ್‌ನಲ್ಲಿರುವ ಎಲ್ಲ ಹಣವನ್ನು ಹೆಚ್ಚು ಲಸಿಕೆಗಳನ್ನು, ಆಕ್ಸಿಜನನ್ನು ಮತ್ತು ಅಗತ್ಯ ವೈದ್ಯಕೀಯ ಸಾಧನಗಳನ್ನು ಖರೀದಿಸಲು ಬಳಸಬೇಕು.
- ಎಲ್ಲ ಉದ್ಯೋಗಹೀನರಿಗೆ ಕನಿಷ್ಟ ತಿಂಗಳಿಗೆ ರೂ.6000 ಕೊಡಬೇಕು.
- ಅಗತ್ಯವಿರುವ ಎಲ್ಲರಿಗೂ ಆಹಾರಧಾನ್ಯಗಳ ಉಚಿತ ವಿತರಣೆ(ಕೇಂದ್ರೀಯ ಗೋದಾಮುಗಳಲ್ಲಿ ಒಂದು ಕೋಟಿ ಟನ್‌ಗಳಿಗಿಂತಲೂ ಹೆಚ್ಚು ಆಹಾರಧಾನ್ಯಗಳು ಕೊಳೆಯುತ್ತಿವೆ)
- ಕೃಷಿ ಕಾಯ್ದೆಗಳನ್ನು ರದ್ದುಮಾಡಬೇಕು, ಈ ಮೂಲಕ ನಮ್ಮ ಅನ್ನದಾತರು ಮಹಾಸೋಂಕಿಗೆ ಬಲಿಯಾಗದಂತೆ ರಕ್ಷಿಸಿ ಅವರು ಭಾರತೀಯ ಜನತೆಗೆ ಉಣಬಡಿಸಲು ಆಹಾರ ಉತ್ಪಾದಿಸುವುದನ್ನು ಮುಂದುವರೆಸಲು ಸಾಧ್ಯವಾಗುವಂತೆ ಮಾಡಬೇಕು.

ನಿಮ್ಮ ಕಚೇರಿಗೆ ಅಥವ ಸರಕಾರಕ್ಕೆ ನಮ್ಮ ಸಲಹೆ-ಸೂಚನೆಗಳಿಗೆ ಸ್ಪಂದಿಸುವ ಅಭ್ಯಾಸ ಇಲ್ಲದಿದ್ದರೂ, ಭಾರತದ ಮತ್ತು ನಮ್ಮ ಜನತೆಯ ಹಿತದೃಷ್ಟಿಯಿಂದ ಒಂದು ಸ್ಪಂದನೆ ದೊರೆತರೆ ನಮಗೆ ಸಂತೋಷವಾಗುತ್ತದೆ.

ಗೌರಿ ಅಮ್ಮ-ಕೇರಳದ ಜನತೆಯ ಆಂದೋಲನದ ಅಪ್ರತಿಮ ನೇತಾರರು: ಯೆಚುರಿ ಶ್ರದ್ಧಾಂಜಲಿ

ಕೆ.ಆರ್. ಗೌರಿ ಅಮ್ಮ ಅವರ ನಿಧನದ ಸುದ್ದಿ ನೋವು ಮತ್ತು ದುಃಖ ಉಂಟುಮಾಡಿದೆ, ಅವರು ಕೇರಳದ ಜನತೆಯ ಆಂದೋಲನದ ಅಪ್ರತಿಮ ನೇತಾರರಾಗಿದ್ದರು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದ್ದಾರೆ.

ಗೌರಿ ಅಮ್ಮ ಕೇರಳದ 1957ರ ಇಎಂಎಸ್ ನಂಬೂದಿರಿಪಾಡ್ ನೇತೃತ್ವದ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಲದಲ್ಲಿ ರೆವಿನ್ಯೂ, ಅಬಕಾರಿ ಮತ್ತು ದೇವಸ್ವಂ ಮಂತ್ರಿಯಾಗಿದ್ದರು. ಅವರು ಕೇರಳದ ಭೂಸುಧಾರಣೆಗಳ ಶಿಲ್ಪಿಗಳಲ್ಲಿ ಒಬ್ಬರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಈಗಿನ ಕೇರಳ ರಚನೆಯಾಗುವ ಮೊದಲೇ ಅವರು ತಿರುವಾಂಕೂರು-ಕೊಚ್ಚಿ ಶಾಸನ ಸಭೆಗೆ ಎರಡು ಬಾರಿ ಚುನಾಯಿತರಾಗಿದ್ದರು. ಅವರು ರಾಜ್ಯದ ವಿವಿಧ ಸಂಪುಟಗಳಲ್ಲಿ ಮಂತ್ರಿಯಾಗಿದ್ದರು, 1994 ರಲ್ಲಿ ಪಕ್ಷದಿಂದ ಉಚ್ಚಾಟನೆಗೊಂಡ ಮೇಲೆ ಯುಡಿಎಫ್ ಮಂತ್ರಿಮಂಡಲದಲ್ಲೂ ಸ್ವಲ್ಪ ಕಾಲ ಅವರು ಮಂತ್ರಿಯಾಗಿದ್ದರು. ಆದರೆ ಯುಡಿಎಫ್‌ನಂದ ಭ್ರಮನಿರಸನಗೊಂಡು ಅವರು ಕಳೆದ ಕೆಲವು ವರ್ಷಗಳಿಂದ ಎಲ್‌ಡಿಎಫ್ ಜತೆಗೆ ಸಹಕರಿಸುತ್ತಿದ್ದರು ಎಂದು ಯೆಚುರಿ ನೆನಪಿಸಿಕೊಂಡಿದ್ದಾರೆ.

ಕೇರಳದ ಕಮ್ಯುನಿಸ್ಟ್ ಆಂದೋಲನದ ಇನ್ನೊಬ್ಬ ಹಿರಿಯ ನೇತಾರ ಟಿ.ವಿ. ಥಾಮಸ್‌ರವರನ್ನು ಮದುವೆಯಾಗಿದ್ದ ಗೌರಿ ಅಮ್ಮ, 1964ರಲ್ಲಿ ಪಕ್ಷದ ವಿಭಜನೆಯಾದಾಗ ಥಾಮಸ್ ಅವರು ಸಿಪಿಐ ನಲ್ಲೇ ಉಳಿದರೂ, ಗೌರಿ ಅಮ್ಮ ಸಿಪಿಐ(ಎಂ) ಜತೆಗೆ ನಿಂತರು.

ಅವರ ನಿರ್ಗಮನದೊಂದಿಗೆ, 1957ರ ಇಎಂಎಸ್ ನಂಬೂದಿರಿಪಾಡ್ ನೇತೃತ್ವದ ಕಮ್ಯುನಿಸ್ಟ್ ಮಂತ್ರಿಮಂಡಲದ ಕೊನೆಯ ಸದಸ್ಯರನ್ನೂ ಕೇರಳ ಕಳೆದುಕೊಂಡಿದೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು "ಕೇರಳ ತನ್ನ ಖ್ಯಾತಿವೆತ್ತ ಮತ್ತು ವ್ಯಾಪಕ ಗೌರವ, ಪ್ರಶಂಸೆಗೆ ಪಾತ್ರವಾಗಿದ್ದ ತನ್ನ ಪುತ್ರಿಯೊಬ್ಬರನ್ನು ಕಳಕೊಂಡಿದೆ ಎನ್ನುತ್ತ ಗೌರಿ ಅಮ್ಮನ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ರಂಜನಾ ನಿರುಲ-ಸಿಐಟಿಯು ಶ್ರದ್ಧಾಂಜಲಿ

ಸಿಐಟಿಯುನ ಕಾರ್ಯಕಾರಿ ಸಮಿತಿಯ ಸದಸ್ಯರೂ, ಅಖಿಲ ಭಾರತ ಆಶಾ ಕಾರ್ಯಕರ್ತೆಯರ ಸಮನ್ವಯ ಸಮಿತಿಯ ಸಂಯೋಜಕರೂ ಆಗಿದ್ದ ರಂಜನಾ ನಿರುಲ ಮೇ 10ರಂದು ನಿಧನರಾಗಿದ್ದಾರೆ. ಬೇರೊಂದು ಕಾಯಿಲೆಗೆ ಶುಶ್ರೂಷೆ ಪಡೆಯುತ್ತಿದ್ದ ಅವರನ್ನು ಕೊವಿಡ್ ಸೋಂಕಿನಿಂದಾಗಿ ಎಪ್ರಿಲ್27 ರಂದು ಆಸ್ಪತ್ರೆಗೆ ಸೇರಿಸಲಾಗಿತ್ತು.

1945ರಲ್ಲಿ ದಿಲ್ಲಿಯ ಒಂದು ಶ್ರೀಮಂತ ಪಂಜಾಬಿ ಕುಟುಂಬದಲ್ಲಿ ಜನಿಸಿದ್ದ ಅವರು ಅಮೆರಿಕಾದಲ್ಲಿ ಉನ್ನತ ಶಿಕ್ಷಣ ಪಡೆಯುವಾಗ ವಿಯೆಟ್ನಾಂ ಯುದ್ಧ-ವಿರೋಧಿ ಹೋರಾಟದಲ್ಲಿ ಎಡಪಂಥದ ಸಂಪರ್ಕಕ್ಕೆ ಬಂದರು. ಅದರಿಂದ ಎಷ್ಟೊಂದು ಪ್ರಭಾವಿರಾದರೆಂದರೆ ಭಾರತಕ್ಕೆ ಮರಳಿದಾಗ ಇಲ್ಲಿ ಎಡಪಂಥದ ಚಳುವಳಿಯನ್ನು ಸೇರಿದರು. 1978ರಲ್ಲಿ ಸಿಐಟಿಯು ಪೂರ್ಣಕಾಲದ ಕಾರ್ಯಕರ್ತರಾದ ಅವರು ದಕ್ಷಿಣ ದಿಲ್ಲಿ ಮತ್ತು ಫರೀದಾಬಾದ್‌ನಲ್ಲಿ ಕಾರ್ಮಿಕರ ನಡುವೆ ಕೆಲಸ ಮಾಡಿದವರು, ಅವರ ನಡುವೆಯೇ ಇದ್ದವರು. ಅವರು ದಿಲ್ಲಿಯಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ಜನವಾದಿ ಮಹಿಳಾ ಸಂಘಟನೆಯ ಸ್ಥಾಪಕರಲ್ಲಿ ಒಬ್ಬರು ಕೂಡ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು.

ರಂಜನಾ ನಿರುಲ ರವರು ಸಿಐಟಿಯುವ ಮಹಿಳಾ ಕಾರ್ಮಿಕರ ಮುಖಪತ್ರಿಕೆಯಾದ 'ವೋಯ್ಸ್ ಆಫ್ ವರ್ಕಿಂಗ್ ವುಮೆನ್' ನ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. 2010ರಲ್ಲಿ ನಡೆದ ಸಿಐಟಿಯುನ 13ನೇ ಸಮ್ಮೇಳನದಲ್ಲಿ ಸಿಐಟಿಯುನ ಪ್ರಪ್ರಥಮ ಮಹಿಳಾ ಖಜಾಂಚಿಯಾಗಿ ಅವರು ಆಯ್ಕೆಯಾದರು. 2017ರ ವರೆಗೂ ಅವರು ಈ ಹುದ್ದೆಯಲ್ಲಿ ಕೆಲಸ ಮಾಡಿದರು.

ಮಹಿಳಾ ಹಕ್ಕುಗಳ ಕಟ್ಟಾ ಪ್ರತಿಪಾದಕರಾಗಿದ್ದ ಮತ್ತು ಕೋಮುವಾದಿ ಶಕ್ತಿಗಳ ನಿರ್ಭೀತ ವಿಮರ್ಶಕರೂ ಆಗಿದ್ದ ಅವರು, ಇನ್ನೊಂದೆಡೆಯಲ್ಲಿ ಕಾರ್ಯಕರ್ತರ ಪಾಲಿಗೆ ಅತ್ಯಂತ ಮಮತಾಮಯಿಯಾಗಿದ್ದರು ಎಂದಿರುವ ಸಿಐಟಿಯು ಅವರ ಸಾವು ಸಿಐಟಿಯುಗೆ ಮಾತ್ರವಲ್ಲ, ಭಾರತದ ಕಾರ್ಮಿಕ ಆಂದೋಲನಕ್ಕೂ ಒಂದು ದೊಡ್ಡ ನಷ್ಟ ಎಂದು ಶ್ರದ್ಧಾಂಜಲಿ ಅರ್ಪಿಸಿದೆ.

ಪ್ಯಾಲೆಸ್ತೀನಿಯನ್ನರ ಮೇಲೆ ಇಸ್ರೇಲಿ ದಾಳಿ -ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಇಸ್ರೇಲ್ ಗಾಝಾ ಪಟ್ಟಿಯ ಮೇಲೆ ನಡೆಸಿರುವ ವಿಮಾನ ದಾಳಿಗಳಿಂದ ಹಲವಾರು ಪ್ಯಾಲೆಸ್ತೀನ ನಾಗರಿಕರು ಸಾವನ್ನಪ್ಪಿದ್ದಾರೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.ಇಸ್ರೇಲ್ ಪೂರ್ವ ಜೆರುಸಲೇಂನ್ನು ಸಂಪೂರ್ಣವಾಗಿ ಆಕ್ರಮಿಸಿಕೊಳ್ಳುವತ್ತ ಸಾಗುತ್ತಿದೆ, ಯೆಹೂದಿಗಳನ್ನು ನೆಲೆಗೊಳಿಸಲಿಕ್ಕೆ ಅವಕಾಶ ಮಾಡಿಕೊಡಲು ಶೇಖ್ ಜರ್‍ರಾಹದ ಸುತ್ತಮುತ್ತಲ ನಿವಾಸಿಗಳನ್ನು ಬಲವಂತದಿಂದ ಓಡಿಸುವ ಪ್ರಯತ್ನಗಳನ್ನು ಪ್ರತಿಭಟಿಸುತ್ತಿದ್ದ ಪ್ಯಾಲೆಸ್ತೀನಿಯನ್ನರ ಮೇಲೆ ಅದು ದಾಳಿ ಮಾಡಿದೆ. ಇಸ್ರೇಲಿ ಪಡೆಗಳು ಮುಸ್ಲಿಮರ ಮೂರನೇ ಪವಿತ್ರ ಸ್ಥಳವೆನಿಸಿರುವ ಅಲ್ ಅಕ್ಸಾ ಮಸೀದಿಯ ಆವರಣದೊಳಕ್ಕೆ ನುಗ್ಗಿ ರಂಝಾನ್ ತಿಂಗಳ ಪ್ರಾರ್ಥನೆಯಲ್ಲಿ ತೊಡಗಿದ್ದವರನ್ನು ಗಾಯಗೊಳಿಸಿವೆ.

ಇಸ್ರೇಲಿ ಚುನಾವಣೆಗಳಲ್ಲಿ ಬಹುಮತ ಗಳಿಸಲು ಮತ್ತೆ-ಮತ್ತೆ ವಿಫಲವಾಗಿರುವ ನೆತನ್ಯಾಹು, ಕ್ಷುಲ್ಲಕ ರಾಜಕೀಯ ಪ್ರಯೋಜನಕ್ಕಾಗಿ ಮತ್ತು ಕೊವಿಡ್ ಮಹಾಸೋಂಕಿನ ಉಬ್ಬರದಿಂದ ಜನಗಳನ್ನು ರಕ್ಷಿಸಲು ಸರಕಾರ ವಿಫಲವಾಗಿರುವುದನ್ನು ಮುಚ್ಚಿಕೊಳ್ಳಲು ಈ ದಾಳಿಗಳನ್ನು ಹರಿಯ ಬಿಟ್ಟಿದ್ದಾರೆ. ಇಸ್ರೇಲಿನಲ್ಲಿರುವ ಪ್ಯಾಲೆಸ್ತೀನಿಯನ್ನರ ವಿರುದ್ಧ ಲಸಿಕೆ ಹಾಕುವಲ್ಲಿಯೂ ತಾರತಮ್ಯ ತೋರಲಾಗುತ್ತಿದೆ, ಇದು ಇಸ್ರೇಲ್ ಅನುಸರಿಸುತ್ತಿರುವ ಜನಾಂಗದ್ವೇಷದ ಧೋರಣೆಯನ್ನು ಬಿಂಬಿಸುತ್ತದೆ.

ಇಸ್ರೇಲಿನ ಈ ಕೃತ್ಯಗಳು ಮಾನವ ಹಕ್ಕುಗಳ ಮತ್ತು ವಿಶ್ವಸಂಸ್ಥೆ ಅಂಗೀಕರಿಸಿರುವ ಹಲವು ನಿರ್ಣಯಗಳ ಉಲ್ಲಂಘನೆಯಾಗಿದೆ ಎಂದಿರುವ ಸಿಪಿಐ(ಎಂ) ಇವನ್ನು ಖಂಡಿಸಿದೆ ಮತ್ತು ಭಾರತ ಸರಕಾರ ಹಾಗೂ ಭಾರತೀಯ ಜನತೆ ಪ್ಯಾಲೆಸ್ತೀನಿನ ಜನತೆಗೆ ತಮ್ಮ ಬೆಂಬಲದ ದನಿಯೆತ್ತಬೇಕು ಎಂದು ಕರೆ ನೀಡಿದೆ.

ತ್ರಿಪುರ: ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಮೇಲೆ ಹಲ್ಲೆ-ಪೊಲಿಟ್‌ಬ್ಯುರೊ ಖಂಡನೆ

ದಕ್ಷಿಣ ತ್ರಿಪುರಾದ ಶಾಂತಿಬರ್‍ಝಾರ್ ನಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಮಾಣಿಕ್ ಸರ್ಕಾರ್ ಮೇಲೆ ಬಿಜೆಪಿ ಗೂಂಡಾಗಳು ದಾಳಿ ಮಾಡಿರುವುದನ್ನು ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ತ್ರಿಪುರಾ ಪೋಲೀಸ್ ಮತ್ತು ಆಡಳಿತ ಅನುಮತಿ ನೀಡಿದ್ದ ಒಂದು ಕಾರ್ಯಕ್ರಮದಲ್ಲಿ ಮಾಣಿಕ್ ಸರ್ಕಾರ್ ಮತ್ತು ಪ್ರತಿಪಕ್ಷದ ತಂಡದ ಮೇಲೆ ದೈಹಿಕ ಹಲ್ಲೆ ನಡೆಸಿ ಅವರು ಈ ಮೊದಲು ಹಲ್ಲೆಗೊಳಗಾಗಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಬೆಂಬಲಿಗರ ಮನೆಗಳಿಗೆ ಭೇಟಿ ನೀಡುವುದನ್ನು ತಡೆದರು.

ತನ್ನ ನಿಜವಾದ ಬಣ್ಣವನ್ನು ಮತ್ತು ಚಾರಿತ್ರ್ಯವನ್ನು ತೋರಿಸುತ್ತಿರುವ ಬಿಜೆಪಿ ತ್ರಿಪುರಾದಲ್ಲಿ ಪ್ರತಿಪಕ್ಷದ ಪ್ರಜಾಸತ್ತಾತ್ಮಕ ಚಟುವಟಿಕೆಗೆ ಅವಕಾಶ ಕೊಡುತ್ತಿಲ್ಲ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಇದನ್ನು ಪ್ರತಿರೋಧಿಸಲಾಗುವುದು, ಹಿಮ್ಮೆಟ್ಟಿಸಲಾಗುವುದು ಎಂದು ಪೊಲಿಟ್ ಬ್ಯುರೊ ಎಚ್ಚರಿಸಿದೆ.

ಕೋವಿಡ್ ದಿನಗೂಲಿ ಕಾರ್ಮಿಕರಿಗೆ ಬೇಕು ವಿಶೇಷ ಪ್ಯಾಕೇಜ್

ಸಂಪಾದಕೀಯ

ಕೋವಿಡ್ ಎರಡನೇ ಅಲೆ ಭೀಕರವಾಗಿ ಹರಡುತ್ತಿದೆ. ಮೂರನೇ ಅಲೆಗೆ ಅದು ಕಾಲಿಡಲಿದ್ದು ಮುಗ್ಧ ಮಕ್ಕಳನ್ನು ಬಲಿ ತೆಗೆದುಕೊಳ್ಳಲಿದೆ ಎಂಬ ಆತಂಕ ಜನರಲ್ಲಿ ವ್ಯಾಪಕ ಭಯ ಭೀತಿ ಉಂಟುಮಾಡಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ದಿನದಿಂದಲೂ ಆರೋಗ್ಯ ಒಂದು ಮೂಲಭೂತ ಹಕ್ಕಾಗಲಿಲ್ಲ. ಇಲ್ಲಿ ಬದುಕುವ ಹಕ್ಕು ಒಂದು ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿ ಘೋಷಣೆಯಾಗಿದೆ. ಇಲ್ಲಿ ಪ್ರಜೆಗಳಿಗೆ ಬದುಕುವ ಹಕ್ಕನ್ನು ನೀಡಲಾಗಿದ್ದರೂ ಬದುಕಲು ಅವಶ್ಯವಾದ ಆರೋಗ್ಯದ ಹಕ್ಕು ಮೂಲ ಭೂತ ಹಕ್ಕಾಗಿ ಘೋಷಣೆಯಾಗಿಲ್ಲ. ಆರೋಗ್ಯದ ಹಕ್ಕು ಮೂಲಭೂತ ಹಕ್ಕಾಗದೆ ಕೇವಲ ಬದುಕುವ ಹಕ್ಕಾಗಿ ಏನು ಅರ್ಥವಿದೆ?

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಒಂದು ಸಾವಿರ ಜನರಿಗೆ ಒಬ್ಬ ವೈದ್ಯ ಮೂರು ಹಾಸಿಗೆಗಳು ಮತ್ತು ಮೂರು ದಾದಿಯರು ಅಥವ ಸೂಲಗಿತ್ತಿಯರು ಇರಬೇಕಾಗುತ್ತದೆ. ಆದರೆ ಭಾರತದಲ್ಲಿ ಪ್ರತಿ ಒಂದು ಸಾವಿರ ಜನರಿಗೆ 0.66 ವೈದ್ಯರು, 1.8 ರಷ್ಟು ದಾದಿಯರು/ಸೂಲಗಿತ್ತಿಯರು ಮಾತ್ರ ಸೇವೆ ಸಲ್ಲಿಸುತ್ತಾರೆ. ಜಗತ್ತಿನ ಇತರ ದೇಶಗಳನ್ನು ಹೋಲಿಸಿದರೆ ಭಾರತವು ಬಹಳಷ್ಟು ಕಡಿಮೆ ಸಂಖ್ಯೆಯಲ್ಲಿ ತೀವ್ರ ನಿಗಾಘಟಕಗಳನ್ನು ಭಾರತ ಹೊಂದಿದೆ.



ಕೋವಿಡ್ ನಿರ್ವಹಣೆಗೆ ಏನೇನು ಬೇಕು ಅದು ಯಾವುದನ್ನು ಪೂರೈಸಲು ಸರ್ಕಾರ ವಿಫಲವಾಗಿದೆ. ಆಸ್ಪತ್ರೆಗಳಿಲ್ಲ, ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ. ಆಮ್ಲಜನಕ ಇಲ್ಲ. ವೆಂಟಿಲೇಟರ್ ಇಲ್ಲ. ಔಷಧಿ ಇಲ್ಲ. ವ್ಯಾಕ್ಸಿನ್ ಇಲ್ಲ. ಅಂಬುಲೆನ್ಸ್ ಇಲ್ಲ. ಸೋಂಕಿತರು ಮಾತ್ರ ಎಲ್ಲೆಡೆ ಇದ್ದಾರೆ. ಅವರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಆದರೆ ಈ ವಿಷಯದಲ್ಲಿ ಯಾರೂ ಬೊಬ್ಬೆ ಹಾಕುವ ಅಗತ್ಯವಿಲ್ಲ ಎಂದು ಯಡಿಯೂರಪ್ಪ ಮೋದಿಯವರ ಬೆನ್ನು ತಟ್ಟುತ್ತಾರೆ. ಇದಕ್ಕಾಗಿ ಮೋದಿ ರಾಜೀನಾಮೆ ನೀಡಿದರೆ ಸೋಂಕು ಹರಡುವುದು ನಿಲ್ಲುವುದೇ ಎಂದು ಸಿ.ಟಿ. ರವಿ ಕೇಳುತ್ತಾರೆ. ಇವರಿಗೆ ಮಾಡಬೇಕಾದ್ದು ಏನು ಎಂಬುದು ತಿಳಿಯದಾಗಿದೆ. ಜನರನ್ನು ಸಾವಿನ ದವಡೆಯಿಂದ ತಪ್ಪಿಸಲು ಬೇಕಾಗಿರುವುದು ಒಂದು ವಿಶೇಷ ಪ್ಯಾಕೇಜ್. ಜನರ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸುವ ಬಲವಾದ ಕ್ರಮಗಳು ಹಾಗೂ ಅವರ ಆರೋಗ್ಯವನ್ನು ಬಲಪಡಿಸುವ ಕ್ರಮಗಳು. ತಿಂಗಳಿಗೆ ಕನಿಷ್ಠ ರೂ. 10,000 ದರದಲ್ಲಿ ಪರಿಹಾರ ಅವರವರ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಯಷ್ಟು ಅಕ್ಕಿ ಮತ್ತು ಇತರ ಅವಶ್ಯಕ ದಿನಸಿಗಳ ಪ್ಯಾಕೇಜ್ ಹಾಗೂ ಅಗತ್ಯ ಔಷಧಿಗಳ ಉಚಿತ ಪ್ಯಾಕೇಜ್ ನೀಡಬೇಕು. ಈ ಮೂರು ತರಹದ ಪರಿಹಾರ ಪ್ಯಾಕೇಜ್‌ಗಳನ್ನು ಎಲ್ಲಾ ಬಡವರಿಗೆ, ತೆರಿಗೆ ವ್ಯಾಪ್ತಿಯಿಂದ ಹೊರಗಿರುವವರೆಗೆ ತಕ್ಷಣದಿಂದ ಮುಂದಿನ ಕನಿಷ್ಠ 6 ತಿಂಗಳವರೆಗೆ ತಪ್ಪದೆ ಒದಗಿಸಬೇಕು.

ಲಸಿಕೆ ಕೊರತೆ ನೀಗಿಸಲು ಸರ್ಕಾರಿ ಔಷಧಿ ಕಂಪನಿಯಲ್ಲಿ ತಯಾರಿಸಲು ಸಿಪಿಐ(ಎಂ) ಒತ್ತಾಯ

ಲಸಿಕೆ ಕೊರತೆಯಿದೆ ಎಂದು ಕೈ ಚೆಲ್ಲಿ ಕೂರುವ ಬದಲು ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಂಟಿ ಒಡೆತನದ ಬೆಂಗಳೂರಿನಲ್ಲೇ ಇರುವ ಕರ್ನಾಟಕ ಆಂಟಿಬಯಾಟಿಕ್ಸ್ ಮತ್ತು ಫಾರಮಾಕ್ಯೂಟಿಕಲ್ಸ್ ಕಂಪನಿಯಲ್ಲಿ ಲಸಿಕೆ ತಯಾರಿಸಲು ಅಗತ್ಯ ಕ್ರಮ ವಹಿಸಿ ರಾಜ್ಯದ ಜನತೆಯ ಜೀವ ಉಳಿಸಲು ಮುಂದಾಗ ಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿದೆ.

ಲಸಿಕೆ ಕೊರತೆಯಿಂದಾಗಿ 18+ ರವರಿಗೆ ಮೇ 1 ರಂದು ಉದ್ಘಾಟನೆ ಮಾಡಲಾಗಿರುವ ಲಸಿಕೀಕರಣ ಮುಂದೂಡುತ್ತಾ ಬರಲಾಗುತ್ತಿದೆ. ಇದೀಗ 45 ವರ್ಷ ಮೇಲ್ಪಟ್ಟವರಿಗೂ ಲಸಿಕೆ ಇಲ್ಲದಾಗಿದೆ. 2ನೇ ಡೋಸಿಗೆ ಮಾತ್ರ ಲಸಿಕೆ ಹಾಕಲಾಗುತ್ತಿದೆ. ಅವರಿಗೂ ಇರುವ ಲಸಿಕೆ ಸಾಲದು ಎಂಬ ವರದಿಗಳಿವೆ. ಸಧ್ಯ ಬಿಬಿಎಂಪಿ ಬಳಿ ಕೇವಲ 40 ಲಕ್ಷ ಲಸಿಕೆ ದಾಸ್ತಾನು ಮಾತ್ರ ಇದೆ ಎಂಬ ವಾಸ್ತವಾಂಶವು ಜನತೆಯಲ್ಲಿ ಆತಂಕ ನಿರ್ಮಿಸಿದೆ. ಕೇಂದ್ರ ಸರ್ಕಾರವು ಸಹಾ ರಾಜ್ಯಕ್ಕೆ ಅಗತ್ಯ ಲಸಿಕೆ ಪೂರೈಸುತ್ತಿಲ್ಲ. ಇದು ಜನತೆಯಲ್ಲಿ ಆತಂಕ ಮೂಡಿಸಿದೆ. ರಾಜ್ಯ ಸರ್ಕಾರವು ಸ್ವಯಂ ಘೋಷಿಸಿದ್ದ 400 ಕೋಟಿ ರೂಗಳಲ್ಲಿ 1 ಕೋಟಿ ಲಸಿಕೆ ಖರೀದಿ ತೀರ್ಮಾನ ಕಾರ್ಯಗತವಾಗುತ್ತಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಒಡೆತನದ ಔಷಧಿ ಕಂಪನಿ ಬಳಸಿ ಲಸಿಕೆ ಉತ್ಪಾದಿಸಿ ಕೊರತೆ ನೀಗಿಸಲು ಕ್ರಮ ವಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಕೋರಿದೆ. ಅದಕ್ಕೆ ಕೇಂದ್ರ ಸರ್ಕಾರವು ಅನುವುಗೊಳಿಸಬೇಕೆಂದು ಒತ್ತಾಯಿಸಿದೆ.

ಕೋವಿಡ್ ಪರೀಕ್ಷೆ ಹೆಚ್ಚಿಸಿ ಶೀಘ್ರ ಪತ್ತೆಗೆ ಅನುವುಗೊಳಿಸಲು ಸಿಪಿಐ(ಎಂ) ಆಗ್ರಹ

ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೋಂಕು ನಿಯಂತ್ರಣಕ್ಕೆ ಬರುತ್ತಿದೆ ಎಂದು ಬಿಂಬಿಸಲು ಪರೀಕ್ಷೆಗಳನ್ನು ದಿನಂಪ್ರತಿ ಕಡಿಮೆ ಮಾಡುತ್ತಿರುವುದು ಅನಾಹುತಕಾರಿಯಾಗಲಿದೆ. ಆದಕಾರಣ ಪರೀಕ್ಷೆ ಪ್ರಮಾಣ ಹೆಚ್ಚಿಸಿ ಸೋಂಕಿತರ ಶೀಘ್ರ ಪತ್ತೆಗೆ ಅನುಗೊಳಿಸಲು ಸಿಪಿಐ(ಎಂ) ಒತ್ತಾಯಿಸಿದೆ.

ಹಲವೆಡೆ ರೋಗ ಲಕ್ಷಣ ಇದೆ ಎಂದು ಸರ್ಕಾರಿ ಆಸ್ಪತ್ರೆಗೆ ಹೋಗುವ ರೋಗಿಗಳಿಗೆ ಪರೀಕ್ಷೆ ಮಾಡದೆ ಮಾತ್ರೆ ನೀಡಿ 4 ದಿನ ಬಿಟ್ಟು ಬರಲು ಹೇಳಲಾಗುತ್ತಿದೆ. ಇದರಿಂದಾಗಿ ಸೋಂಕು ಹರಡಲು ಸರ್ಕಾರವೆ ಅನುಗೊಳಿಸಿದಂತಾಗಿದೆ.

ರಾಜ್ಯ ಸರ್ಕಾರವೆ ಪರೀಕ್ಷೆ ಕಡಿಮೆ ಮಾಡಲು ಹೇಳಿದೆ ಎಂಬುದಂತೂ ಅಕ್ಷಮ್ಯ ಎಂದು ಸಿಪಿಐ(ಎಂ) ಖಂಡಿಸಿದೆ.

ಬಿಬಿಎಂಪಿಯಲ್ಲಿ ಪರೀಕ್ಷಾ ಕಿಟ್‌ಗಳ ಕೊರತೆಯಿಲ್ಲಾ ಎಂದು ಮುಖ್ಯ ಆಯುಕ್ತರು ಹೇಳುವಾಗ ಪರೀಕ್ಷೆಗಳ ಪ್ರಮಾಣ ಏಕೆ ಇಳಿಮುಖವಾಗಿದೆ ಎಂಬುದು ಜನತೆಯ ಪ್ರಶ್ನೆಯಾಗಿದೆ. ಕೋವಿಡ್ ಸೋಂಕಿಗೆ ಇರುವ ಪರಿಹಾರ ಎಂದರೆ ಶೀಘ್ರ ಪತ್ತೆ, ಶೀಘ್ರ ಆರೈಕೆ, ಮನೆಯಲ್ಲೆ ಪ್ರತ್ಯೇಕ ವಾಸ ಎಂಬುದನ್ನು ಸರ್ಕಾರವೇ ಹೇಳಿ ಪರೀಕ್ಷೆ ಪ್ರಮಾಣ ಕಡಿಮೆ ಮಾಡುತ್ತಿರುವುದು ಜನತೆಗೆ ರಾಜ್ಯ ಬಿಜೆಪಿ ಸರ್ಕಾರವು ಮಾಡುವ ದ್ರೋಹವಾಗಿದೆ ಜನತೆಯ ಮತ್ತಷ್ಟು ಸಾವು ನೋವಿಗೆ ಕಾರಣವಾಗಲಿದೆ ಎಂದಿದೆ ಸಿಪಿಐ(ಎಂ).

ರಾಜಕೀಯ ಮೇಲಾಟ ನಿಲ್ಲಿಸಿ ಪರಿಣತಿ ಆಧಾರಿತ ವಾರ್ ರೂಂ ನಿರ್ವಹಿಸಿ: ಸಿಪಿಐ(ಎಂ)

ಕೋವಿಡ್ ವಾರ್ ರೂಂಗಳನ್ನು ಸುಧಾರಿಸುವ ನೆಪದಲ್ಲಿ ನಡೆದಿರುವ ರಾಜಕೀಯ ಮೇಲಾಟ ನಿಲ್ಲಿಸಿ ಪರಿಣತಿ ಆಧರಿಸಿ ನಿರ್ವಹಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಬಿಜೆಪಿಯ ಸಂಸದರು ಶಾಸಕರು ಕೋವಿಡ್ ವಾರ್ ರೂಂಗಳಿಗೆ ದಿಡೀರ್ ಭೇಟಿ ನೀಡಿ ಮಾಡಿದ್ದ ಬೆಡ್ ಬ್ಲಾಕಿಂಗ್ ಆರೋಪ ಮುಂತಾದ ಅಂಶಗಳು ಕೋವಿಡ್ ರೋಗಿಗಳಿಗೆ ಬೆಡ್ ಮುಂತಾದ ಸೌಲಭ್ಯಗಳನ್ನು ಒದಗಿಸಲು ಇರುವ ಸಧ್ಯದ ವ್ಯವಸ್ಥೆಯ ಮೇಲೆ ಜನರಲ್ಲಿ ಅಪನಂಬಿಕೆ ಅನುಮಾನವನ್ನು ಉಂಟು ಮಾಡಿದೆ. ಅದೇ ವೇಳೆ ಕೆಲವು ವಾರ್ ರೂಂಗಳು ಒಂದೆರಡು ದಿನ ಕಾರ್ಯನಿರ್ವಹಿಸದೆ ಜನ ಸಂಕಷ್ಟ ಎದುರಿಸಿದ್ದಾರೆ.

ಇದೀಗ 100 ಗಂಟೆಗಳಲ್ಲಿ ವಾರ್ ರೂಂಗಳ ವ್ಯವಸ್ಥೆ ಸುಧಾರಣೆ ಹೆಸರಲ್ಲಿ ಸಂಸದ ತೇಜಸ್ವಿ ಸೂರ್ಯ ನೀಡಿರುವ ಶಿಫಾರಸ್ಸು ಅಳವಡಿಸುವ ಪ್ರಯತ್ನವನ್ನು ಜಾರಿಮಾಡಿದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇದೆ ಎಂಬ ಆತಂಕವನ್ನು ಪರಿಣಿತರು ವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಆಡಳಿತವಿರುವಾಗಲೆ ಬಿಜೆಪಿ ಒಳಗಿನ ರಾಜಕೀಯ ಮೇಲಾಟಕ್ಕಾಗಿ ವ್ಯವಸ್ಥೆಯ ಸುಧಾರಣೆ ನೆಪದಲ್ಲಿ ಇರುವ ವಾರ್ ರೂಂ ವ್ಯವಸ್ಥೆಯು ಹದಗೆಡವಲು ಬಿಡದೆ ಪರಿಣತಿ ಆಧಾರಿತವಾಗಿ ಸಜ್ಜುಗೊಳಿಸಲು ಸಿಪಿಐ(ಎಂ) ಒತ್ತಾಯಿಸಿದೆ.

ಲಾಕ್ಡೌನ್ ಜಾರಿ ಪೋಲೀಸರ ದಬ್ಬಾಳಿಕೆಗೆ ಕಡಿವಾಣ ಹಾಕಲು ಸಿಪಿಐ(ಎಂ) ಒತ್ತಾಯ

ಲಾಕ್ಡೌನ್ ಜಾರಿಗೊಳಿಸಲು ಪೋಲೀಸರು ಮನಸ್ಸೋಯಿಚ್ಛೆ ಸಿಕ್ಕಸಿಕ್ಕವರ ಮೇಲೆ ಲಾಠಿ ಬೀಸಿರುವ ಕ್ರಮವು ಖಂಡನೀಯವಾಗಿದ್ದು ಮಾನವ ಹಕ್ಕುಗಳ ಉಲ್ಲಂಘನೆ ಯಾಗಿದೆ ಎಂದಿರುವ ಸಿಪಿಐ(ಎಂ) ಪೋಲೀಸರ ದಬ್ಬಾಳಿಕೆಗೆ ಕಡಿವಾಣ ಹಾಕ ಬೇಕೆಂದು ಒತ್ತಾಯಿಸಿದೆ.

ದಿನಕ್ಕೊಂದು ಗಂಟೆಗೊಂದು ಆದೇಶ ಮಾಡುತ್ತಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮವು ಇಂತಹ ದಯನೀಯ ಪರಿಸ್ಥಿತಿಗೆ ಜನತೆಯನ್ನು ದೂಡಿ ಅವರ ಮೇಲೆ ಪೋಲೀಸ್ ದಬ್ಬಾಳಿಕೆಗೆ ರಾಜ್ಯ ಸರ್ಕಾರವು ಅನುವುಗೊಳಿಸಿದೆ. ಜನತೆಯನ್ನು ಮನೆಯಲ್ಲೇ ಇರಲು ಮನ ಒಲಿಸಿ ಅವರಿಗೆ ಅಗತ್ಯ ನೆರವು ನೀಡಿದಲ್ಲಿ ಸಹಕರಿಸುತ್ತಾರೆ. ಆದ ಕಾರಣ ಕೂಡಲೆ ಜನತೆಗೆ ಅಗತ್ಯ ಪಡಿತರ ಮತ್ತು ಪರಿಹಾರ ಪ್ಯಾಕೇಜ್ ಪ್ರಕಟಿಸಿ ವಿಶ್ವಾಸ ಮೂಡಿಸಬೇಕೆಂದು ಸಿಪಿಐ(ಎಂ) ಕೋರಿದೆ.

ಕಾಂ. ಮಂಜುಳ ಹವಾಲ್ದಾರ್ ಇನ್ನಿಲ್ಲ



ವಿದ್ಯಾರ್ಥಿ ರಂಗದ ಮೂಲಕ ಚಳುವಳಿಗೆ ಬಂದ ಮಂಜುಳ ಬಳ್ಳಾರಿಯಲ್ಲಿ ಜನವಾದಿ ಮಹಿಳಾ ಸಂಘಟನೆಯನ್ನು ಕಟ್ಟಲು ಶ್ರಮಿಸಿದ ಮಂಜುಳ ಹವಾಲ್ದಾರ್ ರವರು ಕೋವಿಡ್ ಸೋಂಕಿಗೆ ಒಳಗಾಗಿ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ ಮೇ 5 ರಂದು ರಾತ್ರಿ 9.30 ಕ್ಕೆ ಅಗಲಿದ್ದಾರೆ. ಇವರ ನಿಧನ ಮಹಿಳಾ ಚಳುವಳಿ ತುಂಬ ಲಾರದ ನಷ್ಟವಾಗಿದೆ. ವಿದ್ಯಾರ್ಥಿ ರಂಗದ ಮೂಲಕ ಬಂದ ಮಂಜುಳ ನೊಂದ ಹೆಣ್ಣು ಮಕ್ಕಳ ಕಣ್ಣೀರ ಒರೆಸುತ್ತಾ ಮಹಿಳಾ ಚಳುವಳಿಯನ್ನು ಕಟ್ಟಲು ತೊಡಗಿಸಿಕೊಂಡರು. ಮಂಜುಳ ಅವರ ಕುಟುಂಬವೆಲ್ಲ ಚಳುವಳಿಯಲ್ಲಿರುವುದು ಹೆಮ್ಮೆ ಪಡುವಂತಹದ್ದಾಗಿದೆ. ಅವರು ಕುಟುಂಬ ಮತ್ತು ಚಳುವಳಿಗೆ ಯಾವುದೇ ರೀತಿಯಲ್ಲಿ ತೊಡಕಾಗದ ರೀತಿಯಲ್ಲಿ ತಮ್ಮ ಕೆಲಸ ಕಾರ್ಯಗಳು ನಿರ್ವಹಿಸುವ ಚಾಕಚಕ್ಯತೆ ಅವರಿಗಿತ್ತು. ಅವರ ಸರಳತೆ, ಸಂಘಟನಾ ಶಿಸ್ತು, ನಗು ಮುಖದ ಮಂಜುಳರವರ ಜೊತೆ ಒಮ್ಮೆ ಪರಿಚಯವಾದರೆ ದೂರ ಸರಿಯುವ ಮಾತೇ ಇಲ್ಲ. ಅಂತಹ ವ್ಯಕ್ತಿತ್ವ ಅವರದು. ಮಂಜುಳಾ ಅವರದ್ದು ಪ್ರಬುದ್ಧ ವ್ಯಕ್ತಿತ್ವವಾಗಿತ್ತು. ಪ್ರೈಮರಿ ಶಾಲೆ ಹೆಡ್ ಮಾಸ್ತರಾಗಿದ್ದು ಸರ್ಕಾರದ ಅನುದಾನುಕ್ಕೂ ಕಾಯದೆ ಮಕ್ಕಳಿಗೆ ಅನುಕೂಲವಾಗಲೆಂದು ತಮ್ಮ ಸ್ವಂತ ಹಣದಿಂದ ಶೌಚಲಯ ಕಟ್ಟಿದವರು ಮಂಜುಳ. ಇವರು ನಿವೃತ್ತಿ ನಂತರ ಜನವಾದಿ ಮಹಿಳಾ ಸಂಘಟನೆ ಕಟ್ಟಲು ತೊಡಗಿಸಿಕೊಳ್ಳುವ ಕನಸನ್ನು ಕಂಡಿದ್ದರು. ಇವರು ವೈಚಾರಿಕ ವೈಜ್ಞಾನಿಕ ಮತ್ತು ಜಾತ್ಯತೀತ ಮೌಲ್ಯಗಳನ್ನು ಅಳವಡಿಸಿಕೊಂಡು ಇಡೀ ಕುಟುಂಬ ಬದುಕಿದವರು. ಮೂರು ವರ್ಷದ ಹಿಂದೆ ಅವರ ಬಾಳ ಸಂಗಾತಿ ಕ್ಯಾನ್ಸರ್ ರೋಗದಿಂದ ನಿಧನರಾಗಿರುವರು. ಇವರ ನಿಧನದ ನಂತರ ಚಳುವಳಿಯ ಜೊತೆ ಕುಟುಂಬದ ಜವಾಬ್ದಾರಿಯು ಅವರ ಹೆಗಲಿಗೆ ಬಿತ್ತು. ಬಾಳ ಸಂಗಾತಿಯ ನಿಧನದಿಂದ ಚಳುವಳಿಗೆ ಮತ್ತು ವ್ಯಯಕ್ತಿಕ ಬದುಕಿಗೂ ತುಂಬಲಾರದ ಹಾನಿಯಾಗಿದ್ದು ಹೌದು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಅಳಿಯಂದಿರು ಇರುವರು. ಮಂಜುಳಾ ಅವರ ನಿಧನದಿಂದ ಚಳುವಳಿಗೆ ತುಂಬಾಲಾರದ ನಷ್ಟವಾಗಿದೆ. ಇವರ ಆದರ್ಶ ಗುಣಗಳನ್ನು ನಾವು ಮೈಗೂಡಿಸಿಕೊಳ್ಳೋಣ. ಸೈದ್ಧಾಂತಿಕ ಬದ್ಧತೆ, ಸಂಘಟನೆ ಕಟ್ಟುವ ಪ್ರಬುದ್ಧತೆ ಕಾರಣದಿಂದ ಮಂಜುಳಾ ವಿದ್ಯಾರ್ಥಿ ಚಳುವಳಿ ನಂತರ ಸರಕಾರಿ ನೌಕರರ ಒಕ್ಕೂಟ ಹಾಗೂ ಮಹಿಳಾ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಶೋಷಣೆಗೊಳಗಾದ ಸಮಸ್ತ ಜನತೆಯ ವಿಮೋಚನೆ ಯೊಂದಿಗೆ ಮಹಿಳಾ ವಿಮೋಚನೆ ಸಾಧ್ಯ ಎಂಬುದು ಮಂಜುಳಾ ಅವರ ಬಲವಾದ ನಂಬಿಕೆಯಾಗಿತ್ತು. ಆದ್ದರಿಂದಲೇ ಅವರು ಜನವಾದಿಯೊಂದಿಗೆ ತೊಡಗಿಸಿಕೊಂಡಿದ್ದರು. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಕಾಂ. ಅಶೋಕ್ ಮ್ಯಾಗೇರಿ ಇನ್ನಿಲ್ಲ



ಕಲಬುರಗಿ ಜಿಲ್ಲೆಯ ರೈತ, ಕಾರ್ಮಿಕ, ಕೃಷಿ ಕೂಲಿಕಾರರ ಧ್ವನಿಯಾಗಿದ್ದ, ಸದಾ ಜನ ಚಳುವಳಿಗಾಗಿ ಮಿಡಿಯುತ್ತಿದ್ದ ಅಶೋಕ್ ಮ್ಯಾಗೇರಿಯವರು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದ ಕಲಬುರಗಿ ಜಿಲ್ಲೆಯಲ್ಲಿ ಹಲವಾರು ರೈತರ ಜ್ವಲಂತ ಸಮಸ್ಯೆ ಪರಿಹಾರಕ್ಕಾಗಿ ಚಳುವಳಿ ಕಟ್ಟಿದವರು. ಆರೋಗ್ಯ ತಪಾಸಣೆಗಾಗಿ ಹೈದ್ರಾಬಾದಗೆ ಹೋಗುವ ಮಾರ್ಗ ಮಧ್ಯ ರಂಗಾರೆಡ್ಡಿ ಹತ್ತಿರ 04 ಎಪ್ರಿಲ್ 2021 ರಂದು ಬೆಳಗಿನ ಜಾವ ಕಾರು ಅಪಘಾತ ಸಂಭವಿಸಿ ಅನಿರೀಕ್ಷಿತ ಮರಣ ಹೊಂದಿದ್ದಾರೆ. ಅನಾರೋಗ್ಯದ ಕಾರಣ ಕಲಬುರಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಒಂದು ವಾರದಿಂದ ಚಿಕಿತ್ಸೆ ಪಡೆಯುತ್ತಿದ್ದರು. ಜಿಲ್ಲೆಯ ರೈತ, ಕೂಲಿ ಕಾರ್ಮಿಕರ ಧ್ವನಿಯೊಂದು ಕಳಚಿ ಚಳುವಳಿಗೆ ತುಂಬಲಾರದ ನಷ್ಟ ಉಂಟಾಗಿದೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಕೋವಿಡ್ ನಿಯಮಗಳನ್ನು ಪಾಲಿಸಿ ಬೀಡಿ ಕಾರ್ಮಿಕರಿಗೆ ಕೆಲಸ ನೀಡಲು ಸಿಐಟಿಯು ಒತ್ತಾಯ

ಕರ್ನಾಟಕ ರಾಜ್ಯದಲ್ಲಿ ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಬೀಡಿ ಕಾರ್ಮಿಕರಿದ್ದಾರೆ. ಕೊರೊನಾ ಒಂದನೇ ಅಲೆಯ ಸಂದರ್ಭದಲ್ಲಿ ಸರ್ಕಾರದ ಅವೈಜ್ಞಾನಿಕ ಲಾಕ್ಡೌನ್ನಿಂದಾಗಿ ಬೀಡಿ ಕಾರ್ಮಿಕರು ತಿಂಗಳುಗಟ್ಟಲೆ ಕೆಲಸವಿಲ್ಲದೆ ಉಪವಾಸ ಬೀಳುವಂತಾಗಿದೆ. ಇದೀಗ ಸ್ವಲ್ಪ ಚೇತರಿಕೆಯಾಗುವ ಸಂದರ್ಭದಲ್ಲಿ ಎರಡನೇ ಅಲೆಯು ಅವರನ್ನು ಅಪ್ಪಳಿಸಿ ಗಾಯದ ಮೇಲೆ ಬರೆ ಎಳೆದಂತಾಗಿದೆ.

ದ.ಕ ಮತ್ತು ಉಡುಪಿ ಜಿಲ್ಲೆಯ ಲಕ್ಷಾಂತರ ಬಡ ಕಾರ್ಮಿಕರು ಬೀಡಿ ಕೈಗಾರಿಕೆಯನ್ನೇ ನಂಬಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಬೀಡಿ ಕೈಗಾರಿಕೆ ಇಲ್ಲಿಯ ಜನರ ಜೀವನಾಡಿ ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿಯ ಜನ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಲು ಬೀಡಿ ಕೈಗಾರಿಕೆಯ ಕೊಡುಗೆ ಅಪಾರವಾದುದು. ನಮ್ಮ ಸರ್ಕಾರಗಳಿಗೆ ತೆರಿಗೆ ರೂಪದಲ್ಲಿ ಸಾವಿರಾರು ಕೋಟಿ ರೂಪಾಯಿ ಬೀಡಿ ಮಾಲಿಕರು ಸಂದಾಯ ಮಾಡುತ್ತಿದ್ದಾರೆ. ಈ ಕೈಗಾರಿಕೆಯ ಶೇಕಡಾ ತೊಂಬತ್ತು ಮಂದಿ ಮಹಿಳೆಯರು. ಇವರ ಒಂದು ದಿನದ ಸಂಪಾದನೆ ಸಾವಿರ ಬೀಡಿ ಕಟ್ಟಿದರೆ 215.22. ಇಷ್ಟು ಸಂಪಾದನೆ ಮಾಡಬೇಕಾದರೆ ಹನ್ನೆರಡು ಗಂಟೆ ದುಡಿಯಬೇಕು. ಬಂದ ಹಣದಿಂದ ಅವರ ಕುಟುಂಬವನ್ನು ಸಾಕಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬೀಡಿ ಕೆಲಸವನ್ನೇ ನಂಬಿ ಬದುಕುವ ಸಾವಿರಾರು ಕುಟುಂಬಗಳಿವೆ. ಕೊರೊನಾ ಎರಡನೇ ಅಲೆಯು ಬೀಡಿ ಕಾರ್ಮಿಕರ ಬದುಕನ್ನೇ ನಾಶ ಮಾಡಿದೆ. ಈ ಸಂದರ್ಭದಲ್ಲಿ ಅವರ ರಕ್ಷಣೆಗೆ ನಮ್ಮ ಸರ್ಕಾರಗಳು, ಜನಪ್ರತಿನಿಧಿಗಳು ಗಂಭೀರ ಚಿಂತನೆಯನ್ನು ಮಾಡಬೇಕಾಗಿದೆ. ಬೀಡಿ ಕಾರ್ಮಿಕರ ಕ್ಷೇಮ ನಿಧಿಯಲ್ಲಿ ಸಾವಿರಾರು ಕೋಟಿ ಹಣವಿದ್ದರೂ ಪ್ರತೀ ಕಾರ್ಮಿಕರಿಗೆ ಕನಿಷ್ಠ ಆರು ಸಾವಿರ ರೂಪಾಯಿಯನ್ನಾದರೂ ಕೊಡಿ ಎಂದು ಕೇಂದ್ರ ಸರಕಾರವನ್ನು ಕೇಳಿದರೆ ಯಾವುದೇ ಉತ್ತರವಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕೋವಿಡ್ ಪರಿಹಾರದ ಪ್ಯಾಕೇಜ್ನಲ್ಲಿ ಬೀಡಿ ಕಾರ್ಮಿಕರಿಗೆ ಯಾವುದೇ ಸೌಲಭ್ಯವಿಲ್ಲ. ಶ್ರೀಮಂತ ವರ್ಗಕ್ಕೆ ಮಾತ್ರ ಸರ್ಕಾರ ರಿಯಾಯಿತಿಯನ್ನು ಘೋಷಿಸಿದೆ. ಸಿಐಟಿಯು ಸಂಘಟನೆಗಳ ನೇತೃತ್ವದಲ್ಲಿ ಹಲವಾರು ಹೋರಾಟಗಳನ್ನು ನಡೆಸಿ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಿಲ್ಲ. ಕೇರಳ ಸರ್ಕಾರವು ಪ್ರತೀ ಕಾರ್ಮಿಕರಿಗೆ ಮೂರು ಸಾವಿರ ರೂಪಾಯಿಯಂತೆ ಪರಿಹಾರ ಧನವನ್ನು ನೀಡಿರುವುದು ಸ್ವಾಗತಾರ್ಹವಾಗಿದೆ.

ಕೋವಿಡ್ನಂತಹ ಸಾಂಕ್ರಾಮಿಕ ರೋಗವನ್ನು ಎದುರಿಸಬೇಕಾದರೆ ಆಳುವ ಸರ್ಕಾರಗಳು ಜನರ ಕಷ್ಟಕ್ಕೆ ಸ್ಪಂದಿಸಬೇಕಾಗಿದೆ. ಇಲ್ಲವಾದರೆ ಕಾರ್ಮಿಕರು ಕುಟುಂಬ ಸಮೇತ ಬೀದಿಗೆ ಬರುವ ದಿನ ದೂರವಿಲ್ಲ.

ಆದುದರಿಂದ ಸರ್ಕಾರ ಕೂಡಲೇ ಎಚ್ಚೆತ್ತು ಪ್ರತೀ ಬೀಡಿ ಕಾರ್ಮಿಕರಿಗೆ ಕನಿಷ್ಠ ಹತ್ತು ಸಾವಿರ ರೂಪಾಯಿಗಳಂತೆ ಆರ್ಥಿಕ ಸಹಾಯ ನೀಡಬೇಕು.

ಕೋವಿಡ್ ನಿಯಮವನ್ನು ಪಾಲಿಸಿ ಬೀಡಿ ಕಾರ್ಮಿಕರಿಗೆ ಕೂಡಲೇ ಕೆಲಸದ ವ್ಯವಸ್ಥೆ ಮಾಡಬೇಕು. ಎಲ್ಲಾ ಕಾರ್ಮಿಕರಿಗೆ ತಿಂಗಳಿಗೆ ಹತ್ತು ಕೆಜಿಯಂತೆ ಉಚಿತ ಆಹಾರ ಧಾನ್ಯ ನೀಡಬೇಕು. ಬೀಡಿ ಕಾರ್ಮಿಕರು ಕೋವಿಡ್ಗೆ ತುತ್ತಾದಲ್ಲಿ ಅವರಿಗೆ ಧರ್ಮಾರ್ತ ವೈದ್ಯಕೀಯ ಸೌಲಭ್ಯ ನೀಡಬೇಕು. ಬೀಡಿ ಕಾರ್ಮಿಕರ ಕ್ಷೇಮ ನಿಧಿಯಲ್ಲಿ ಇರುವ ಸಾವಿರಾರು ಕೋಟಿ ರೂಪಾಯಿಗಳನ್ನು ಅವರ ಕಲ್ಯಾಣಕ್ಕಾಗಿ ಉಪಯೋಗಿಸಬೇಕು.

ರಿಮಿಡಿಸಿವರ್ ಲಸಿಕೆ ಕಾಳಸಂತೆ ಕೊಲೆಗಡುಕ ದಂಧೆ ಪ್ರಕರಣ ವನ್ನು ನ್ಯಾಯಾಂಗ ತನಿಖೆಗೊಳಪಡಿಸಲು ಕುರುಗೋಡು ತಾಲೂಕು ಸಮಿತಿ ಸಿಪಿಐ(ಎಂ) ಒತ್ತಾಯ

ಬಳ್ಳಾರಿಯಲ್ಲಿ ಕೋವಿಡ್ 19 ಕರೋನ ತೀವ್ರವಾಗಿ ವ್ಯಾಪಿಸುತ್ತಿದ್ದು ಸೋಂಕು ಹಾಗೂ ಸಾವಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಜಿಲ್ಲೆಯ ಜನ ಇದರ ಪರಿಣಾಮದಿಂದ ಭಯ ಮತ್ತೆ ಆತಂಕ ದಿಂದ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಅಗತ್ಯವಾಗಿ ಬೇಕಾದ ವೆಂಟಿಲೇಟರ್ ಆಕ್ಸಿಜನ್ ಹಾಗೂ ಹಾಸಿಗೆ ಕೊರತೆ ಕಂಡು ಬಂದಿದೆ. ಇದರ ನಡುವೆ 18 ವರ್ಷ ಮೇಲ್ಪಟ್ಟವರು ಜೀವಸಂಜೀವಿನಿ ಆದ ಲಸಿಕೆಗಾಗಿ ಪರದಾಡುತ್ತಿದ್ದಾರೆ. ಅಲ್ಲದೇ, ಮೊದಲ ಡೋಸ್ ಹಾಕಿಸಿ ಕೊಂಡವರು ಎರಡನೇ ಡೋಸು ಗಾಗಿ ಪ್ರತಿದಿನ ಲಸಿಕೆ ಕೇಂದ್ರಗಳಿಗೆ ಅಲೆದಾಡಿ ಬೇಸತ್ತಿದ್ದಾರೆ ಹಾಗೂ ಲಸಿಕೆ ಸಿಗದ ಕಾರಣ ಜನ ಭಯಗೊಂಡಿದ್ದಾರೆ. ಇಲ್ಲಿಯವರೆಗೂ, ಜಿಲ್ಲೆಯಲ್ಲಿ ಸುಮಾರು 68000ಕ್ಕೂ, ಹೆಚ್ಚಿನ ಜನ ಸೋಂಕಿತ ರಾಗಿದ್ದಾರೆ ಪ್ರತಿದಿನ 1800 ರಿಂದ 2000 ಹೆಚ್ಚಿನ ಜನರು ಸೇರ್ಪಡೆಗೊಳ್ಳುತ್ತಿದ್ದಾರೆ. ಸೋಂಕಿತರು ಬಹುತೇಕರುಗಳಿಗೆ ಸರಿಯಾದ ಸಮಯಕ್ಕೆ ಅಗತ್ಯವಾಗಿ ಬೇಕಾಗಿರುವ ಆಮ್ಲಜನಕ ಹಾಸಿಗೆ ಹಾಗೂ ಲಸಿಕೆಗಳು ಸಿಗದೇ ಸಾವನ್ನಪ್ಪುತ್ತಿದ್ದಾರೆ. ಇಡೀ ಜನ ಸಾವಿನೊಂದಿಗೆ ಸೆಣಸುತ್ತಿರುವ ಸಂದರ್ಭದಲ್ಲಿ ರಿಮಿಡಿಸಿವರ್ ಲಸಿಕೆಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಈಗಾಗಲೇ ಬೆಳಕಿಗೆ ಬಂದಿದೆ.

ರಿಮಿಡಿ ಸಿವರ್ ಔಷಧಿ ಯನ್ನು 30 ಸಾವಿರಕ್ಕೆ ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವ ಅಂಶ ಬೆಳಕಿಗೆ ಬಂದಿದೆ. ಇದರ ಭಾಗವಾಗಿ ಮಲ್ಲಿಕಾರ್ಜುನ ಗೌಡ/ಪೊಲ ಪ್ರವೀಣ್ /ವೆಂಕಟೇಶ್ ಬಾಬು / ಕಿಶೋರ್ ಮುಂತಾದ ಆರೋಪಿ ಗಳನ್ನು ಪೊಲೀಸರು ಬಂಧಿಸಿದ್ದು ನ್ಯಾಯಾಂಗಕ್ಕೆ ಒಪ್ಪಿಸಿದ್ದಾರೆ.

ಕೆಲವರು ಆರೆಸ್ಸೆಸ್ಸಿನ ಅಂಗ ಸಂಸ್ಥೆಗಳಾದ ವಿಎಚ್ಪಿ ಮತ್ತು ಶ್ರೀರಾಮ ಸೇನೆಯಲ್ಲಿ ಗುರುತಿಸಿಕೊಂಡಿದ್ದಾರೆ ಎಂಬ ಆರೋಪವಿದೆ. ಜನಸಾಮಾನ್ಯರ ಪ್ರಾಣದೊಂದಿಗೆ ಆಟವಾಡುತ್ತಿರುವ ಈ ಕಾಳಸಂತೆ ಖದೀಮರ ತಂಡಕ್ಕೆ ಜಿಲ್ಲೆಯಲ್ಲಿರುವ ಕೆಲವು ರಾಜಕೀಯ ನಾಯಕರ ಬೆಂಬಲವಿದೆ ಎಂಬ ಆರೋಪಗಳಿವೆ. ಈ ಕಾಳಸಂತೆಕೋರರ ತಂಡದ ಹಿಂದೆ ರಾಜ್ಯಮಟ್ಟದ ಜಾಲ ಕೆಲಸ ಮಾಡುತ್ತಿದ್ದು, ಕಾಣದ ಕೈಗಳ ಜಾಲವಿದೆ ಎಂದು ಜನಸಾಮಾನ್ಯರು ಮಾತನಾಡಿಕೊಳ್ಳುತ್ತಿದ್ದಾರೆ. ಪೊಲೀಸ್ ಇಲಾಕೆ ಈ ದಂಧೆಯಲ್ಲಿ ತೊಡಗಿರುವ ಕೆಲವರನ್ನು ಈಗ ಬಂದಿಸಿದೆ. ಆದರೆ ಇನ್ನೂ ಕೆಲವರನ್ನು ಬಂದಿಸಬೇಕಾಗಿದೆ ಬಂಧಿಸಿದವರನ್ನು ಬಿಡುವಂತೆ ರಾಜಕೀಯ ಒತ್ತಡ ಬರುತ್ತಿದೆ ಈ ಕಾಳಸಂತೆಯಲ್ಲಿ ತೊಡಗಿರುವ ವ್ಯಕ್ತಿಗಳು ಬಲಾಢ್ಯ ರಾಜಕೀಯ ನಾಯಕರ ಬೆಂಬಲವಿದೇ ಮತ್ತೆ ಅವರ ಅಖಾಡದಲ್ಲಿ ಇದ್ದವ ರಾಗಿದ್ದಾರೆ. ಈ ಕುಕೃತ್ಯದ ತಂಡದ ಹಿಂದೆ ಕಾಣದ ಕೈಗಳ ಆಟ ಎಗ್ಗಿಲ್ಲದೆ ನಡೆಯುತ್ತಿದೆ. ಈ ತಂಡಕ್ಕೆ ಆಳುವ ಸರ್ಕಾರದ ಕೆಲ ಜನಪ್ರತಿನಿಧಿಗಳ ಮತ್ತು ಕೆಲವು ಉನ್ನತಾಧಿಕಾರಿಗಳ ಬೆಂಬಲ ಇದೆ



ಎಂಬ ಶಂಕೆ ಪ್ರಬಲವಾಗುತ್ತಿದೆ. ಇದರೊಂದಿಗೆ ಕೆಲ ಕೋಮುವಾದಿ ಸಂಘಟನೆಗಳು ಬೆಂಬಲ ಇದೆ ಎಂಬ ವಿಚಾರ ಜನರನ್ನು ಕಾಡುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ, ಈ ಕೊಲೆಪಾತಕ ಕಾಳಸಂತೆ ದಂಧೆಯನ್ನು ಸರ್ಕಾರ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಯನ್ನು ನಡೆಸಬೇಕೆಂದು ಮತ್ತು ಈ ಕಾಳಸಂತೆಯಲ್ಲಿ ಭಾಗಿಯಾಗಿರುವ ಎಲ್ಲರ ಮೇಲೆ ಕಠಿಣವಾದ ಕ್ರಮವನ್ನು ಜಾರಿಗೊಳಿಸಬೇಕು ಎಂದು ಸಿಪಿಎಂ ಪಕ್ಷ ಕುರುಗೋಡು ತಾಲೂಕು ಸಮಿತಿ ಒತ್ತಾಯಿಸುತ್ತದೆ.

ಜನಸಾಮಾನ್ಯರ ಸಾವಿನ ವ್ಯಾಪಾರವನ್ನು ತಡೆದು ಅಮಾಯಕ ಜನರ ಪ್ರಾಣವನ್ನು ಉಳಿಸಬೇಕೆಂದು ಆಗ್ರಹಿಸುತ್ತದೆ. ಕುರುಗೋಡು ತಾಶಿಲ್ದಾರರು ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ನೀಡಲಾಯಿತು. ಈ ಸಂದರ್ಭದಲ್ಲಿ ಸಿಪಿಐ–ಎಂ ಮುಖಂಡರುಗಳಾದ ಸಿಪಿಐ–ಎಂ ವಿ.ಎಸ್. ಶಿವಶಂಕರ್ ಗಾಳಿ ಬಸರಾಜ ಎನ್. ಸೋಮಣ್ಣ ಎನ್., ಹುಲೆಪ್ಪ ಕೆಂಚಪ್ಪ, ಯಂಕಮ್ಮಯು.ಶಿವಶಂಕರಪ್ಪ ಉಪಸ್ಥಿತರಿದ್ದರು.



ಕೋವಿಡ್ ಪರಿಹಾರ: ಬಾಯಿ ಮುಚ್ಚಿದ ಸಿಎಂ! – ಹಳ್ಳ ಹಿಡಿಯಿತೇ ಪಿಎಂ ಆತ್ಮನಿರ್ಭರ್!!

ಗುರುರಾಜ್ ದೇಸಾಯಿ

ಕೋವಿಡ್‌ನ ಎರಡನೆ ಅಲೆಯಿಂದಾಗಿ ಸೋಂಕಿತರ ಪ್ರಮಾಣ ಮತ್ತು ಸಾವಿನ ಪ್ರಮಾಣ ಹೆಚ್ಚಾಗುತ್ತಲೆ ಇದೆ. ಇದನ್ನು ನಿಯಂತ್ರಣ ಮಾಡಲಕ್ಕೆ ಅನೇಕ ರಾಜ್ಯಗಳು ಲಾಕ್ಡೌನ್ ಘೋಷಿಸಿವೆ. ಲಾಕ್ಡೌನ್ ನಿಂದ ಜನರು ಸಂಕಷ್ಟಗಳನ್ನು ಅನುಭವಿಸಬಾರದು ಎಂದು ವಿವಿಧ ರಾಜ್ಯಗಳು ಪರಿಹಾರವನ್ನು ನೀಡುತ್ತಿವೆ. ಆದರೆ ಕರ್ನಾಟಕ ರಾಜ್ಯ ಸರಕಾರ ಮಾತ್ರ ಪರಿಹಾರದ ವಿಚಾರದಲ್ಲಿ ಬಾಯಿಮುಚ್ಚಿ ಕುಳಿತಿದೆ. ಸರಕಾರದ ಬಳಿ ಹಣವಿಲ್ಲವೆ? ಪ್ರಧಾನಿ ಮೋದಿಯವರ ಆತ್ಮನಿರ್ಭರ್ ಭಾರತ್ ಪ್ಯಾಕೇಜ್ ಹಾಗೂ ಪಿಎಂ ಕೇರ್ಸ್ ಫಂಡ್ ನಲ್ಲೂ ಹಣವಿಲ್ಲವೆ? ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಪ್ರಧಾನಿ ಮೋದಿಯವರು ಬಾಯಿಗೆ ಹಾಕಿಕೊಂಡಿರುವ ಬೀಗವನ್ನು ಓಪನ್ ಮಾಡೋದು ಯಾವಾಗ? ಎಂಬ ಪ್ರಶ್ನೆಗಳೆದ್ದಿವೆ.

ಲಕ್‌ಡೌನ್‌ನ ಕಠಿಣ ನಿರ್ಬಂಧಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿಕೊಂಡವರಿಗೆ ಕೆಲ ರಾಜ್ಯಗಳು ಪರಿಹಾರ ಪ್ಯಾಕೇಜ್ ಘೊಷಿಸಿ, ಅವರ ಕಷ್ಟದಲ್ಲಿ ಭಾಗಿಯಾಗುವುದರ ಜೊತೆಗೆ ಹಸಿವನ್ನು ನೀಗಿಸುವ ಕೆಲಸ ಮಾಡುತ್ತಿವೆ. ಆ ರಾಜ್ಯಗಳು ಯಾವವು ಎನ್ನುವದಕ್ಕೆ ಇಲ್ಲೊಂದು ರಿಪೋರ್ಟ್ ಇದೆ ನೋಡೋಣ ಬನ್ನಿ.

ಕೊರೊನಾ ಎರಡನೇ ಅಲೆಯಿಂದಾಗಿ ಇದೀಗ ಕೇರಳದಲ್ಲಿ ಲಾಕ್‌ಡೌನ್ ಘೋಷಣೆ ಮಾಡಲಾಗಿದೆ. ಈ ವೇಳೆ ಯಾವುದೇ ಒಬ್ಬ ನಾಗರಿಕನಿಗೂ ಕೂಡ ಆಹಾರಕ್ಕೆ ಸಮಸ್ಯೆ ಆಗಬಾರೆಂಬ ನಿಟ್ಟಿನಲ್ಲಿ ಅಲ್ಲಿನ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ. ರಾಜ್ಯದಲ್ಲಿರುವ ವಲಸೆ ಕಾರ್ಮಿಕರು ಸೇರಿ ಪ್ರತಿಯೊಂದು ಕುಟುಂಬಕ್ಕೂ ಉಚಿತ ಆಹಾರ ಕಿಟ್ ವಿತರಣೆಗೆ ನಿರ್ಧರಿಸಲಾಗಿದೆ. ಸ್ಥಳೀಯ ಆಡಳಿತ ಆಹಾರ ಕಿಟ್‌ಗಳನ್ನು ತಲುಪಿಸುವ ಕಾರ್ಯ ಮಾಡಲಿದೆ ಎಂದು ಸಿಎಂ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಇದಲ್ಲದೆ ಸ್ಥಳೀಯ ಆಡಳಿತ ಯಾರಿಗೆ ಆಹಾರದ ಅವಶ್ಯಕತೆ ಇದೆ ಅಂತವರಿಗೆ ಕಮ್ಯೂನಿಟಿ ಕಿಚನ್ ತೆರೆದು ಆಹಾರ ಕೊಡುವಂತೆ ಸೂಚಿಸಿದ್ದಾರೆ. ಸರ್ಕಾರದಿಂದ ಬರುವ ಆಹಾರ ಕಿಟ್‌ನಲ್ಲಿ ಒಟ್ಟು 10 ಬಗೆಯ ಸಾಮಾಗ್ರಿಗಳಿರಲಿದ್ದು, 50 ಕೆಜಿ ಅಕ್ಕಿ ಸೇರಿದಂತೆ ಗೋದಿ ಹಿಟ್ಟು, ತೊಗರಿ ಬೇಳೆ, ಹೆಸರು ಕಾಳು, ಕಡಲೆ ಕಾಳು, ಸಕ್ಕರೆ, ಚಹ ಪುಡಿ, ಮೆಣಸಿನ ಪುಡಿ, ಅರಶಿನ ಪುಡಿ, ಉಪ್ಪು, ತೆಂಗಿನ ಎಣ್ಣೆ, ಬಟಾಟೆ, ಈರುಳ್ಳಿ ಸೇರಿದಂತೆ ಅನೇಕ ಪೌಷ್ಟಿಕಾಂಶಯುಕ್ತ ಕಿಟ್ ಇದಾಗಿರುತ್ತೆ ಎಂದು ತಿಳಿಸಿದ್ದಾರೆ. ಕೇರಳದಲ್ಲಿ ಈಗಾಗಲೇ ವಲಸೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದ್ದು, ಅವರಿಗೂ ಕೂಡ ಆಹಾರ ಕಿಟ್ ವಿತರಣೆ ಮಾಡಲು ಮುಂದಾಗಿರುವುದರಿಂದ ಹಲವರ ಹಸಿವನ್ನು ನೀಗಿಸುವ ಕಾರ್ಯಕ್ಕೆ ಕೇರಳ ಸರ್ಕಾರ ಮುಂದಾಗಿದೆ. ಎರಡು ತಿಂಗಳು ಕಾಲ ನೀರಿನ ಬಿಲ್ ಹಾಗೂ ವಿದ್ಯುತ್ ಬಿಲ್ ಗೆ ವಿನಾಯತಿಯನ್ನು ನೀಡಲಾಗಿದೆ. ಸರ್ಕಾರದ ನಡೆಗೆ ಜನ ಮೆಚ್ಚುಗೆಯನ್ನು ಸೂಚಿಸಿದ್ದಾರೆ.

ಇನ್ನೂ ತಮಿಳು ನಾಡಿನಲ್ಲಿ ಅಧಿಕಾರವನ್ನು ವಹಿಸಿಕೊಂಡ ಎಂಕೆ ಸ್ಟಾಲಿನ್ ಕೋವಿಡ್ ಪರಿಹಾರ ಪ್ಯಾಕೇಜ್ ನ್ನು ಘೋಷಿಸಿದ್ದಾರೆ. ಬಿಪಿಎಲ್ ಕುಟುಂಬಗಳಿಗೆ 4000 ರೂ ಹಣವನ್ನು ಮೂರು ತಿಂಗಳುಕಾಲ ನೀಡಲು ನಿರ್ಧಾರವನ್ನು ಮಾಡಲಾಗಿದೆ. ಹಾಲು, ಅಗತ್ಯ ವಸ್ತುಗಳ ದರವನ್ನು ಇಳಿಸುವುದಾಗಿ ಹೇಳಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾದ ಕೋವಿಡ್ ರೋಗಿಗಳ ಚಿಕಿತ್ಸೆಯ ವೆಚ್ಚವನ್ನು ತಮ್ಮ ಸರ್ಕಾರ ಭರಿಸಲಿದೆ ಎಂದು ಘೋಷಣೆಯನ್ನು ಮಾಡಿದ್ದಾರೆ. ಕೋವಿಡ್ ಸೋಂಕಿತರ ಆರೈಕೆಯಲ್ಲಿ ತೊಡಗಿರುವ ಸರ್ಕಾರಿ ವೈದ್ಯರಿಗೆ ತಿಂಗಳಿಗೆ 10 ಸಾವಿರದಂತೆ 30 ಸಾವಿರ ಹಣವನ್ನು ಪ್ರೋತ್ಸಾಹ ಧನವಾಗಿ ನೀಡುವುದಾಗಿ ತಿಳಿಸಿದ್ದಾರೆ. ಇದೇ ವೇಳೆ ನರ್ಸ್‌ಗಳಿಗೆ ಮೂರು ತಿಂಗಳಿಗೆ 20 ಸಾವಿರ, ಕೋವಿಡ್ ವಾರ್ಡ್‌ನಲ್ಲಿ ಕರ್ತವ್ಯ ನಿರ್ವಹಿಸುವ ಇತರೆ ಸಿಬ್ಬಂದಿಗಳಿಗೆ ತಲಾ 15 ಸಾವಿರ ನೀಡಲಾಗುವುದು ಎಂದು ತಿಳಿಸಿದ್ದಾರೆ. ಇದೇ ವೇಳೆ ಟ್ರೈನಿ ವೈದ್ಯರು ಮತ್ತು ಪಿ ಜಿ ವಿದ್ಯಾರ್ಥಿಗಳಿಗೂ ಅವರನ್ನು ಪ್ರೋತ್ಸಾಹಿಸಲು 20 ಸಾವಿರ ಹಣವನ್ನು ಘೋಷಣೆ ಮಾಡಿದ್ದಾರೆ.

ಇನ್ನೂ ಹರ್ಯಾಣದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 5 ಸಾವಿರ ರೂಪಾಯಿ ನೀಡಲು ಹರಿಯಾಣ ಸರ್ಕಾರ ನಿರ್ಧರಿಸಿದೆ ಎಂದು ಆರೋಗ್ಯ ಸಚಿವ ಅನಿಲ್ ವಿಜ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಅಟೋ, ಟ್ಯಾಕ್ಸಿ ಚಾಲಕರಿಗೆ 5000 ರೂ ನಗದು ಮತ್ತು ಪ್ರತಿ ಮನೆಗೆ ಉಚಿತ ಆಹಾರದ ಕಿಟ್‌ನ್ನು ಘೋಷಣೆ ಮಾಡಲಾಗಿದೆ. ಆಂದ್ರ ಪ್ರದೇಶದಲ್ಲಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲಾಗಿದೆ. ಎಲ್ಲಾ ಕೋವಿಡ್ ರೋಗಿಗಳ ಶುಲ್ಕವನ್ನು ಭರಿಸುವುದಾಗಿ ಸಿಎಂ ಜಗಮೋಹನ್ ರೆಡ್ಡಿ ತಿಳಿಸಿದ್ದಾರೆ.

ಲಾಕ್ಡೌನ್ ಹಾಗೂ ಕೊರೊನಾ ಸಂಕಷ್ಟದಲ್ಲಿ ಸಲುಕಿಕೊಂಡಿರುವವರ ಬಗ್ಗೆ ಅನೇಕ ರಾಜ್ಯಗಳಲ್ಲಿ ಅವರ ಸಂಕಷ್ಟವನ್ನು ಸ್ವಲ್ಪವಾದರೂ ನಿವಾರಿಸುವ ನಿಟ್ಟಿನಲ್ಲಿ ತೊಡಗಿದ್ದರೆ ರಾಜ್ಯದಲ್ಲಿ ಮಾತ್ರ ಪರಿಯಾರದ ವಿಚಾರಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ತಲೆ ಕೆಡಸಿಕೊಳ್ಳುತ್ತಿಲ್ಲ. ಮಾತೆತ್ತಿದರೆ ಆರ್ಥಿಕ ಕಷ್ಟ ಆರ್ಥಕ ಸಮಸ್ಯೆ ಎಂದೆಲ್ಲ ಸಮಜಾಯಿಷಿ ಕೊಡುತ್ತಾ ಕಾಲಹರಣ ಮಾಡುತ್ತಿದ್ದರೆ. ಇನ್ನೂ ಸಚಿವರ ಹೇಳಿಕೆಗಳಂತೂ ಹೇಸಿಗೆ ತರಿಸುತ್ತಿವೆ, ನಾವೇನು ನೋಟ್ ಪ್ರಿಂಟ್ ಮಾಡ್ತೀವಾ ಅಂತಾ ಒಬ್ಬ ಸಚಿವ ಹೇಳಿದರೆ, ಅನ್ನ ಇಲ್ಲಾ ಅಂದ್ರೆ ಬದೋಕೋಕೆ ಆಗಲ್ಲ ಅಂತ ಜನ ಕೇಳಿದ್ರೆ ಸತ್ತೋಗಿ ಅಂತಾ ಮತ್ತೊಬ್ಬ ಸಚಿವ ಹೇಳ್ತಾನೆ. ಇದು ಸರಕಾರದ ಜನಪರ ಕಾಳಜಿ ಹೇಗಿದೆ ಎಂಬುದನ್ನು ತೋರಿಸುತ್ತದೆ. ಸರಕಾರದ ನಡೆಗೆ ಜನ ಆಕ್ರೋಶವ್ಯಕ್ತಪಡಿಸುತ್ತಿದ್ದಾರೆ.

ಇನ್ನೂ ರಾಜ್ಯದಲ್ಲಿ ಲಾಕ್ಡೌನ್ ಹೇರಿ ಇಂದಿಗೆ 17 ದಿನಗಳು ಕಳೆದಿವೆ. ದಿನನಿತ್ಯ ದುಡಿದು ತಿನ್ನುತ್ತಿದ್ದ ಜನ ಸಂಕಷ್ಟದಲ್ಲಿದ್ದಾರೆ. ಕಟ್ಟಡ ಕಾರ್ಮಿಕರೂ, ದಿನಗೂಲಿ ನೌಕರರು, ಅಟೋ ರೀಕ್ಷಾ ಚಾಲಕರು, ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಅನೇಕರು ಆವತ್ತಿನ ದುಡಿಮೆಯಲ್ಲೆ ಜೀವನ ಸಾಗಿಸಬೇಕು. ಈಗ 17 ದಿನದಿಂದ ಕೆಲಸ ಇಲ್ಲಾ ಅಂದ್ರೆ ಆ ಕುಟುಂಬದ ಸ್ಥಿತಿಯನ್ನು ಒಂದು ಬಾರಿ ನೆನಪಿಸಿಕೊಳ್ಳಿ. ಇನ್ನೂ ಕೃಷಿ ಕೆಲಸಕ್ಕೆ ತೊಂದರೆ ಕೊಡೋದಿಲ್ಲ ಅಂತಾ ರಾಜ್ಯ ಸರಕಾರ ಹೇಳಿತ್ತು. ಆದರೆ ಉದ್ಯೋಗ ಖಾತ್ರಿಯೋಜನೆಯಲ್ಲಿ ನಡೆಯುತ್ತಿದ್ದ ಕಾಮಗಾರಿಗಳನ್ನು ನಿಲ್ಲಿಸಲಾಗಿದೆ. ಕೂಲಿ ಕಾರ್ಮಿಕರು ಸಿಗದೆ ರೈತರ ಬೆಳೆಗಳು ಹಾಳಾಗುತ್ತಿವೆ. ಅವರಿಗೆ ಆಗುತ್ತಿರುವ ನಷ್ಟದ ಪರಿಹಾರವನ್ನು ಕೋಡುವವರು ಯಾರು ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ.

ರಾಜ್ಯದಲ್ಲಿ ಘೊಷಣೆ ಮಾಡಿರುವುದು ಲಾಕ್‌ಡೌನ್ ಅಲ್ಲ, ಅಂತಾ ಪದೇ ಪದೇ ಸಿಎಂ ಸಮರ್ತಿಸಿಕೊಳ್ಳುತ್ತಿದ್ದಾರೆ, ಯಾಕೋ ಅವರಿಗೆ ಲಾಕ್‌ಡೌನ್ ಅಂತಾ ಕರಿಯೋಕೆ ಇಷ್ಟಾ ಇಲ್ಲ, ಅನ್ಸುತ್ತೆ. ಇರ್ಲಿ ಅವರ ಪ್ರಕಾರ ಕಠಿಣ ನಿರ್ಬಂಧಗಳನ್ನು ಹೇರಲಾಗಿದೆ ಅಂತಾನೇ ಹೇಳೋಣ, ಕಠಿಣ ನಿರ್ಭಂದಗಳ ಸಂಕಷ್ಟಕ್ಕೆ ಸಿಲುಕಿಕೊಂಡವರಿಗೆ ಪರಿಹಾರ ಪ್ಯಾಕೇಜ್ ಘೊಷಿಸುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ, ಅಂತಾ ಕಡ್ಡಿ ತುಂಡಾಗುವಂತೆ ಹೇಳಿದ್ದೀರಿ, ಕಠಿಣ ನಿಯಮ ಜಾರಿ ಮಾಡಿರುವುದು ಕರೊನಾ ಸೋಂಕು ಸಂಪರ್ಕ ಕಡಿತಗೊಳಿಸಲೆಂದು ಮಾಡಲಾಗಿದೆ. ವಿಶೇಷ ಪ್ಯಾಕೇಜ್ ಘೋಷಿಸಲು ಆಗುವುದಿಲ್ಲ ಅಂತಾ ಹೇಳಿದ್ದಾರೆ. ಸರಕಾರದಲ್ಲಿ ದುಡ್ಡಿಲ್ಲ, ಅನ್ನೋದು ಸಿಎಂ ವಾದ, ಆದರೆ ಎಲ್ಲರಿಗೂ ಗೊತ್ತಿರುವಂತೆ ಸರಕಾರಕ್ಕೆ ಬಹಳಷ್ಟು ಜನಗಳು ಮುಂಖ್ಯಮಂತ್ರಿ ಪರಿಹಾರ ನಿಧಿಗೆ ದಾನ ಮಾಡುತ್ತಿದ್ದಾರೆ. ಸರಕಾರಿ ನೌಕರರ ವೇತನ ಕಡಿತ ಮಾಡಲು ನಿರ್ಧಾರ ಮಾಡಲಾಗಿದೆ. ಆದರೂ ದುಡ್ಡಿಲ್ಲ, ದುಡ್ಡಿಲ್ಲ, ಚುನಾವಣೆಗಳನ್ನು ನಡಿಸುವುದಕ್ಕೆ ಮಾತ್ರ ಸರಕಾರದ ಬಳಿ ದುಡ್ಡು ಇದ್ದಹಾಗೆ ಕಾಣಿಸುತ್ತದೆ.

ಸರಕಾರ ದುಡ್ಡು ಇಲ್ಲ ದುಡ್ಡು ಇಲ್ಲ ಅಂತಾ ಹೇಳ್ತಾ ಇದೆ ಹಾಗಂತ ಶ್ವೇತ ಪತ್ರವನ್ನು ಹೊರಡಿಸಬೇಕು ಎಂದು ವಿಪಕ್ಷ ನಾಯಕ ಸಿದ್ಧರಾಮಯ್ಯ ಆಗ್ರಹಿಸಿದ್ದಾರೆ. ಕಳೆದ ವರ್ಷ ಕೋವಿಡ್ ನಿರ್ವಹಣೆಗಾಗಿ 69 ಸಾವಿರ ಕೋಟಿ ಸಾಲಮಾಡಿದ್ದಿರಿ.ಕೋವಿಡ್ ನಿರ್ವಹಣೆಗೆ 5400 ಕೋಟಿ ಮಾತ್ರ ಖರ್ಚಾಗಿದೆ. ಉಳಿದ ಸಾಲದ ಹಣ ಎಲ್ಲಿಗೆ ಹೋಯ್ತು? ಎಂದು ಸಿದ್ಧರಾಮಯ್ಯ ಪ್ರಶ್ನಿಸಿದ್ದಾರೆ. ಸಂಕಷ್ಟದಲ್ಲಿರುವ ಜನರಿಗೆ ಕೂಡಲೆ ಆರ್ಥಿಕ ಪರಿಹಾರವನ್ನು ಘೋಷಣೆ ಮಾಡಿ ಎಂದು ಸಿದ್ಧರಾಮಯ್ಯ ಆಗ್ರಹಿಸಿದ್ದಾರೆ. ಸಂಕಷ್ಟದಲ್ಲಿರುವ ಕಟ್ಟಡ ಕಾರ್ಮಿಕರ ಆರ್ಥಿಕ ಸಹಾವನ್ನು ಮಾಡಬೇಕು. ಕೋವಿಡ್ ನಿಂದಾಗಿ ಮೃತಪಟ್ಟ ಕಟ್ಟಡ ಕಾರ್ಮಿಕರಿಗೆ 10 ಲಕ್ಷ ರೂ ಗಳ ಪರಿಹಾರವನ್ನು ನೀಡಬೇಕು ಎಂದು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಮೇ 15 ರಂದು ಪ್ರತಿಭಟನೆ ನಡೆಸುತ್ತಿದೆ.

ಇನ್ನೂ ಪ್ರಧಾನಿಯರು ಘೋಷಿಸಿದ, ಲೆಕ್ಕವೆ ಇಡಲಾಗದಷ್ಟು ಆತ್ಮನಿರ್ಭರ್ ಪ್ಯಾಕೇಜ್ ನೆನೆಗುದಿಗೆ ಬಿದ್ದಿದೆ. ಪಿಎಂ ಕೇರ್ಸ್ ಗೆ ಬಂದ ದುಡ್ಡು ಪಂಚರಾಜ್ಯ ಚುನಾವಣೆಯಲ್ಲಿ ಖರ್ಚಾದಂತೆ ಕಾಣುತ್ತದೆ. ಯಾಕೆ ಅಂದ್ರೆ ಅವರು ಕೂಡ ದುಡ್ಡಿಲ್ಲ ದುಡ್ಡಿಲ್ಲ ಅಂತಿದ್ದಾರೆ. ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಉಚಿತ ಲಸಿಕೆ ಎಂದು ಶಂಖ ಊದಿದ ಪ್ರಧಾನಿ ಮತ್ತು ಸಚಿವರ ತಂಡ ಈಗ ಸೋಲುಂಡ ನಂತರ ಕೊಟ್ಟಿದ್ದ ಘೋಷಣೆಗಳನ್ನೆ ಮರೆತಿದ್ದಾರೆ. ಲಸಿಕೆ, ಆಕ್ಸಿಜನ್ ಹಾಹಾಕಾರ ಎಲ್ಲಡೆ ಶುರುವಾಗಿದ್ದರೂ ಚುನಾವಣೆಯಲ್ಲಿ ದಣಿದಿರುವ ಪ್ರಧಾಣಿಯವರ ದೇಹ ತಣ್ಣನೆಯ ಗಾಳಿಯಲ್ಲಿ ನಿದ್ರೆ ಮಾಡುತ್ತಿದೆ. ಪ್ರಧಾನಿ ಮೋದಿ ಮತ್ತವರ ತಂಡ ಬಾಯಿಗೆ ಹಾಕೊಕೊಂಡಿರುವ ಬೀಗವನ್ನು ತೆರೆದು ಮಾತನಾಡಬೇಕಿದೆ. ಜನರ ಜೀವವನ್ನು ಉಳಿಸಬೇಕಿದೆ.

ಹಾಗಾದ್ರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ತುರ್ತಾಗಿ ಮಾಡಬೇಕಿರುವ ಕೆಲಸಗಳೇನು ಎನ್ನುವನ್ನು ನೋಡ್ತಾ ಹೋಗೋಣ.

ತಕ್ಷಣವೇ ಕೇಂದ್ರ ಮತ್ತು ರಾಜ್ಯ ಸರಕಾರ ಮಾಡಬೇಕಿರುವ ಮೊದಲ ಕೆಲಸ ವೇನು ಅಂದ್ರೆ, ಉಚಿತ, ಸಾಮೂಹಿಕ, ಸಾರ್ವತ್ರಿಕ ಲಸಿಕೆ ಅಭಿಯಾನವನ್ನು ದೇಶಾದ್ಯಂತ ಆರಂಭಿಸಬೇಕು. ಆಗ ಮಾತ್ರ ಸೋಂಕನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

ದೇಶದೊಳಗೆ ಲಸಿಕೆ ಕೊರತೆ ಎದ್ದು ಕಾಣುತ್ತಿದ್ದು, ಲಸಿಕೆ ಉತ್ಪಾದನೆಯನ್ನು ವಿಸ್ತರಿಸಲು ಕಡ್ಡಾಯ ಲೈಸೆನ್ಸಿಂಗ್ ಅಧಿಕಾರವನ್ನು ಪ್ರಯೋಗಿಸಬೇಕು.

ಬಜೆಟಿನಲ್ಲಿ ಲಸಿಕೆಗೆಂದು ಎತ್ತಿಟ್ಟಿರುವ 35,000 ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕು. ಜನ ಆಕ್ಸಿಜನ್, ಲಸಿಕೆ ಇಲ್ಲದೆ ಸಾಯುತ್ತಿದ್ದಾರೆ. ಮೋದಿಯವರು ಈಗಲಾದರೂ ನಿಜವಾದ ಆತ್ಮನಿರ್ಬರ ಕೆಲಸ ಮಾಡಬೇಕು ಅಂದರೆ ಹಣ ಬಿಡುಗಡೆ ಮಾಡಿ ಜನರ ಪ್ರಾಣವನ್ನು ಉಳಿಸಬೇಕು.

ಸೆಂಟ್ರಲ್ ವಿಸ್ತಾ ನಿರ್ಮಾಣವನ್ನು ನಿಲ್ಲಿಸಬೇಕು. ಅದಕ್ಕೆ ಇಟ್ಟಿರುವ ಹಣವನ್ನು ಆಕ್ಸಿಜನ್ ಮತ್ತು ಲಸಿಕೆಗಳನ್ನು ಪಡೆಯಲು ಬಳಸಬೇಕು. ಸೆಂಟ್ರೆಲ್ ವಿಸ್ತಾ ಅಂದ್ರೆ ಪ್ರಧಾನಮಂತ್ರಿಯವರ ನೂತನ ಸರಕಾರಿ ನಿವಾಸ. 20 ಸಾವಿರ ಕೋಟಿ ರೂ ಖರ್ಚು ಮಾಡಿ ಅದನ್ನು ಕಟ್ಟಿಸಲಾಗುತ್ತಿದೆ. ಇದರಲ್ಲಿ 32 ಕೋಟಿ ಡೋಸ್ ಲಸಿಕೆಯನ್ನು ಪಡೆಯಬಹುದು. 22 ಕೋಟಿ ರೆಮ್ಡೆಸೀವಿರ್ ವಯಲ್ಸ್ ಖರೀದಿಸಬಹುದು, 3 ಕೋಟಿ ಲೀಟರ್ ಸಾಮರ್ಥ್ಯದ ಆಕ್ಸಿಜನ್ ಖರೀದಿಸಬಹುದು. 12 ಸಾವಿರ ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ತುರ್ತಾಗಿ ನಿರ್ಮಾಣ ಮಾಡಬಹುದು. ಹಾಗಾಗಿ ಸಂಟ್ರೆಲ್ಲ ವಿಸ್ತಾ ನಿರ್ಮಾಣಕ್ಕೆ ಬ್ರೇಕ್ ಹಾಕಬೇಕಿದೆ.

ಲೆಕ್ಕ ಪರೀಕ್ಷಣೆಗಳಿಗೆ ಒಳಗಾಗದ ಖಾಸಗಿ ಟ್ರಸ್ಟ್ ನಿಧಿ ಪಿಎಂಕೇರ್ಸ್ ನಲ್ಲಿರುವ ಎಲ್ಲ ಹಣವನ್ನು, ಹೆಚ್ಚು ಲಸಿಕೆಗಳನ್ನು, ಆಕ್ಸಿಜನನ್ನು ಮತ್ತು ಅಗತ್ಯ ವೈದ್ಯಕೀಯ ಸಾಧನಗಳನ್ನು ಖರೀದಿಸಲು ಬಳಸಬೇಕು. ಎಲ್ಲ ಉದ್ಯೋಗಹೀನರಿಗೆ ಕನಿಷ್ಟ ತಿಂಗಳಿಗೆ ರೂ.6000 ಕೊಡಬೇಕು.

ಅಗತ್ಯವಿರುವ ಎಲ್ಲರಿಗೂ ಆಹಾರಧಾನ್ಯಗಳ ಉಚಿತ ವಿತರಣೆಗೆ ಮುಂದಾಗಬೇಕು (ಕೇಂದ್ರೀಯ ಗೋದಾಮುಗಳಲ್ಲಿ ಒಂದು ಕೋಟಿ ಟನ್ ಗಳಿಗಿಂತಲೂ ಹೆಚ್ಚು ಆಹಾರಧಾನ್ಯಗಳು ಕೊಳೆಯುತ್ತಿವೆ)

ಕೃಷಿ ಕಾಯ್ದೆಗಳನ್ನು ರದ್ದು ಮಾಡಬೆಕು, ಈ ಮೂಲಕ ನಮ್ಮ ಅನ್ನದಾತರುಮಹಾಸೋಂಕಿಗೆ ಬಲಿಯಾಗದಂತೆ ರಕ್ಷಿಸಬೇಕು ಭಾರತೀಯ ಜನತೆಗೆ ಉಣಬಡಿಸಲು ಆಹಾರ ಉತ್ಪಾದಿಸುವುದನ್ನು ಮುಂದುವರೆಸಲು ಸಾಧ್ಯವಾಗುವಂತೆ ಮಾಡಬೇಕು.

ಈ ಅಂಶಗಳು ಸಧ್ಯಕ್ಕೆ ಸರಕಾರ ಆಯ್ಕೆ ಮಾಡಬೇಕಿರುವ ಮತ್ತು ಕಡ್ಡಾಯವಾಗಿ ಜಾರಿ ಮಾಡಬೇಕಾಗಿರುವ ವಿಷಯಗಳಾಗಿವೆ. ಆ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರ ದೃಢವಾದ ಹೆಜ್ಜೆಯನ್ನಿಟ್ಟು ಜನರನ್ನು ಉಳಿಸುವ ಕೆಲಸಕ್ಕೆ ಮುಂದಾಗಬೇಕಿದೆ. ■

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇತ್ತೀಚಿನ ಕೆಲವು ದಿನಗಳಲ್ಲಿ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ನ್ಯಾಯಾಲಯವು ಸರಕಾರದ ನೀತಿಗಳನ್ನು, ತೀರ್ಮಾನಗಳನ್ನು ಕಠಿಣವಾಗಿ ಪ್ರಶ್ನಿಸಿವೆ. ಹೀಗಾಗಿ ಈ ವರೆಗೆ ಇದೇ ನ್ಯಾಯಾಲಯದ ಬೆಂಬಲದಿಂದ ತನ್ನ ಸರ್ವಾಧಿಕಾರಿ ಧೋರಣೆಗಳನ್ನು ಚಲಾಯಿಸುತ್ತಿದ್ದ ಕೇಂದ್ರ ಸರಕಾರಕ್ಕೆ ಇದು ಬಹುದೊಡ್ಡ ಅಪಾಯವಾಗಿ ಕಂಡಿದೆ. ಅಲ್ಲದೆ ಸರ್ವೋಚ್ಚ ನ್ಯಾಯಾಲಯವೇ ಕ್ರಿಯಾ ಸಮಿತಿಗಳನ್ನು ರಚಿಸುವ ಮೂಲಕ ಸರಕಾರದ ಅಸಾಮರ್ಥ್ಯವನ್ನು ಜಗಜ್ಜಾಹೀರು ಮಾಡಿದೆ ಎನ್ನುವ ಆತಂಕವೂ ಅದಕ್ಕಿದೆ. ಹೀಗಾಗಿ ಉದ್ದೇಶಪೂರ್ವಕವಾಗಿ ನ್ಯಾಯಾಂಗ ಮತ್ತು ಶಾಸಕಾಂಗಗಳ ಮಧ್ಯ ಸಾರ್ವಜನಿಕ ವಿವಾದವನ್ನು ಹುಟ್ಟಿಸಿ ಅದರ ಮೂಲಕ ನ್ಯಾಯಾಂಗವು "ಸ್ವಲ್ಪ ಮೆತ್ತಗಾಗಲಿ" ಎಂದು ಪ್ರಯತ್ನಿಸುತ್ತಿದೆ.



ಉದ್ಧಟ ವ್ಯಾಕ್ಸೀನ್ ಅಫಿಡವಿಟ್

ಭಾರತದ ಸರ್ವೋಚ್ಚ ನ್ಯಾಯಾಲಯವು ಕೊರೋನಾ ವ್ಯಾಕ್ಸೀನ್ ಕುರಿತು ಕೇಂದ್ರಕ್ಕೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿತ್ತಲ್ಲದೆ ಸಂಬಂಧಪಟ್ಟ ಆಕ್ಸಿಜನ್ ವಿತರಣೆ ಇತ್ಯಾದಿಗಳ ಬಗ್ಗೆ ಒಂದು ರಾಷ್ಟ್ರೀಯ ಕ್ರಿಯಾ ಸಮಿತಿಯನ್ನೂ ರಚಿಸಿತ್ತು. ಈ ಬಗ್ಗೆ ಕೋರ್ಟಿನಲ್ಲಿ ತನ್ನ ವಿರೋಧವನ್ನು ಸೂಚಿಸಿದ ಕೇಂದ್ರವು ಶನಿವಾರ 9 ರಂದು ಒಂದು ಅಫಿಡಾವಿಟ್ ಸಲ್ಲಿಸಿದೆ. ಇದರ ವಿವರಗಳನ್ನು ನಂಬಲರ್ಹವಾದ ತಾಣಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಕೂಲಂಕಷವಾಗಿ ಓದಿದಾಗ ನನಗೆ ಆಶ್ಚರ್ಯವಾಯಿತು. ಭಾರತೀಯ ಸಂವಿಧಾನದ ಚೌಕಟ್ಟಿನಲ್ಲಿ ಚುನಾಯಿತವಾದ ಒಂದು ಕೇಂದ್ರ ಸರಕಾರವು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಹೇಳಿಕೆಯಲ್ಲಿ ಇಂಥ ಉದ್ಧಟತನದ, ಧಾರ್ಷ್ಟ್ಯದ ಭಾಷೆಯನ್ನು ಬಳಸಬಹುದೆ ಎನ್ನುವುದೇ ಈ ಆಶ್ಚರ್ಯಕ್ಕೆ ಕಾರಣ. ಕೇಂದ್ರದ ಹೇಳಿಕೆಯು ಕೆಲವು ವಾಕ್ಯಗಳ ಅನುವಾದವನ್ನು ನೋಡಿ.

"ಜಾಗತಿಕ ಮಟ್ಟದ ಪಿಡುಗಿನ ಸಂದರ್ಭದಲ್ಲಿ ರಾಷ್ಟ್ರದ ಪ್ರತಿಕ್ರಿಯೆ ಮತ್ತು ತಂತ್ರೋಪಾಯಗಳು ಪರಿಣಿತ ಮತ್ತು ವೈಜ್ಞಾನಿಕ ಅಭಿಪ್ರಾಯದಿಂದ ರೂಪಿತವಾಗಿರುವುದರಿಂದಾಗಿ ನ್ಯಾಯಾಂಗದ ಹಸ್ತಕ್ಷೇಪಕ್ಕೆ ಹೆಚ್ಚಿನ ಅವಕಾಶವಿರುವುದಿಲ್ಲ. ಸದುದ್ದೇಶವನ್ನು ಹೊಂದಿದ್ದರೂ ಅತಿ ಉತ್ಸಾಹದ ನ್ಯಾಯಾಂಗದ ಪ್ರವೇಶವು ಊಹಿಸಲಾಗದ ಮತ್ತು ಉದ್ದೇಶಿತವಲ್ಲದ ಪರಿಣಾಮಗಳನ್ನು ಉಂಟುಮಾಡಬಹುದು."


ಈ ವಾಕ್ಯಗಳಲ್ಲಿ ಮೊದಲು ಬಳಸಲಾದ ಪದವು 'interference' ಅಂದರೆ ಅನಪೇಕ್ಷಿತ ಹಸ್ತಕ್ಷೇಪ, ಸರಕಾರದ ಕ್ರಿಯೆಗಳಿಗೆ ಅಡ್ಡಿಯಾಗುವುದು ಎನ್ನುವ ಅರ್ಥಗಳಿವೆ. ಇದು ಇಂಗ್ಲಿಷ್‌ನಲ್ಲಿ ಸಂಪೂರ್ಣವಾಗಿ ಋಣಾತ್ಮಕ (negative) ಅರ್ಥವನ್ನು ಹೊಂದಿದೆ. ಎರಡನೇಯ ಪದವು intervention. ಇದರ ಅರ್ಥವು ಮಧ್ಯಪ್ರವೇಶವಾಗಿದೆ. ಕೇಂದ್ರದ ಹೇಳಿಕೆಯಲ್ಲಿ ಮತ್ತೆ ಬಳಕೆಯಾಗುವುದು interference ಎನ್ನುವ ಪದ. ವಾಕ್ಯದ ಶೈಲಿ ಮತ್ತು ಧ್ವನಿ ಸರ್ವೋಚ್ಚ ನ್ಯಾಯಾಲಯಕ್ಕೆ ಎಚ್ಚರಿಸುವ ಬಗೆಯದಾಗಿದೆ. ನ್ಯಾಯಾಲಯವು ಸ್ಪಷ್ಟವಾಗಿಯೇ ಹೇಳಿದ್ದೆಂದರೆ "ದೇಶದ ಈ ಮಹಾ ಸಂಕಷ್ಟದಲ್ಲಿ ನಾವು ಮೂಕ ಸಾಕ್ಷಿಗಳಾಗಿ ಇರಲಾರೆವು" ಎಂದು. ಇದನ್ನು ಕೇಂದ್ರವು ಹಸ್ತಕ್ಷೇಪವೆಂದು ತಳ್ಳಿಹಾಕುತ್ತದೆ. ಈ ಧಾರ್ಷ್ಟ್ಯ ಹಾಗೂ ಸುಳ್ಳಿನ ಹಿಂದೆ ಇರುವ ಸಂಗತಿಗಳನ್ನು ಗಮನಿಸೋಣ.

ಕೇಂದ್ರದ ಹೇಳಿಕೆಯ ಪ್ರಕಾರ ಕೊರೋನಾ ಪಿಡುಗಿನಲ್ಲಿ ದೇಶದ ನೀತಿಯು ಪರಿಣಿತರು, ವೈದ್ಯಕೀಯ ಪರಿಣಿತರು ಹಾಗೂ ವಿಜ್ಞಾನಿಗಳಿಂದ ರೂಪಿತವಾಗಿರಬೇಕು. ಹೌದಲ್ಲವೆ? ಹಾಗಿದ್ದರೆ ಕೇಂದ್ರವೇ ರಚಿಸಿದ ಪರಿಣಿತರ ಸಮಿತಿಯು ಕೊರೋನಾ ಎರಡನೇ ಅಲೆಗೆ ಕೇಂದ್ರದ ನೀತಿ, ಕಾರ್ಯಗಳನ್ನೇ ಯಾಕೆ ತಪ್ಪಿತಸ್ಥವಾಗಿಸಿದೆ? ದೇಶದ ಭಾರತೀಯ ವೈದ್ಯಕೀಯ ಸಂಘ (IMA) ಯಾಕೆ ಅತ್ಯಂತ ಕಟುವಾದ ಮಾತುಗಳಲ್ಲಿ ಮೋದಿಯವರ, ಕೇಂದ್ರದ ನೀತಿಯನ್ನು, ಕಾರ್ಯಗಳನ್ನು ಟೀಕಿಸಿದೆ? ಸರ್ವೋಚ್ಚ ನ್ಯಾಯಾಲಯದ ಮುಖ್ಯ ಪ್ರಶ್ನೆ ವ್ಯಾಕ್ಸೀನ್‌ಗಳ ತಾರತಮ್ಯದ ದರ ನಿಗದಿಯ ಬಗ್ಗೆ ಇತ್ತು (differential pricing). ಇಂಥ ದರನೀತಿಯನ್ನು ಯಾವ ಪರಿಣಿತರು ಕೇಂದ್ರಕ್ಕೆ ಸೂಚಿಸಿದರು? ಈ ಪರಿಣಿತರ ಅಭಿಪ್ರಾಯದ ದಾಖಲೆ ಎಲ್ಲಿದೆ? ಈ ಪ್ರಶ್ನೆಗೆ ಸುಳ್ಳನ್ನು ಬಿಟ್ಟರೆ ಉತ್ತರವಿಲ್ಲದ್ದರಿಂದ ಕೇಂದ್ರವು ನ್ಯಾಯಾಂಗ ಹಸ್ತಕ್ಷೇಪದ ಬಗ್ಗೆ ಮಾತನಾಡುತ್ತಿದೆ.

ಇದು ಅವಸರದ ಹೇಳಿಕೆಯಲ್ಲ. ಇತ್ತೀಚಿನ ಕೆಲವು ದಿನಗಳಲ್ಲಿ ಉಚ್ಚ ನ್ಯಾಯಾಲಯಗಳು ಹಾಗೂ ಸರ್ವೋಚ್ಚ ನ್ಯಾಯಾಲಯವು ಸರಕಾರದ ನೀತಿಗಳನ್ನು, ತೀರ್ಮಾನಗಳನ್ನು ಕಠಿಣವಾಗಿ ಪ್ರಶ್ನಿಸಿವೆ. ಹೀಗಾಗಿ ಈ ವರೆಗೆ ಇದೇ ನ್ಯಾಯಾಲಯದ ಬೆಂಬಲದಿಂದ ತನ್ನ ಸರ್ವಾಧಿಕಾರಿ ಧೋರಣೆಗಳನ್ನು ಚಲಾಯಿಸುತ್ತಿದ್ದ ಕೇಂದ್ರ ಸರಕಾರಕ್ಕೆ ಇದು ಬಹುದೊಡ್ಡ ಅಪಾಯವಾಗಿ ಕಂಡಿದೆ. ಅಲ್ಲದೆ ಸರ್ವೋಚ್ಚ ನ್ಯಾಯಾಲಯವೇ ಕ್ರಿಯಾ ಸಮಿತಿಗಳನ್ನು ರಚಿಸುವ ಮೂಲಕ ಸರಕಾರದ ಅಸಾಮರ್ಥ್ಯವನ್ನು ಜಗಜ್ಜಾಹೀರು ಮಾಡಿದೆ ಎನ್ನುವ ಆತಂಕವೂ ಅದಕ್ಕಿದೆ. ಹೀಗಾಗಿ ಉದ್ದೇಶಪೂರ್ವಕವಾಗಿ ನ್ಯಾಯಾಂಗ ಮತ್ತು ಶಾಸಕಾಂಗಗಳ ಮಧ್ಯ ಸಾರ್ವಜನಿಕ ವಿವಾದವನ್ನು ಹುಟ್ಟಿಸಿ ಅದರ ಮೂಲಕ ನ್ಯಾಯಾಂಗವು "ಸ್ವಲ್ಪ ಮೆತ್ತಗಾಗಲಿ" ಎಂದು ಪ್ರಯತ್ನಿಸುತ್ತಿದೆ. ನನ್ನ ಊಹೆಯೆಂದರೆ ಇನ್ನು ಒಂದು ರಾಷ್ಟ್ರ, ಒಂದು ಚುನಾವಣೆಯ ಬದಲು ಜನಪ್ರತಿನಿಧಿ ಕಾರ್ಯಾಂಗ/ಶಾಸಕಾಂಗ Vs ನ್ಯಾಯಾಂಗ ಹಸ್ತಕ್ಷೇಪವೆನ್ನುವ ವಿಷಯವೇ ನಮ್ಮ ಸಾರ್ವಜನಿಕ ಚರ್ಚೆಯ ವಿಷಯವಾಗುತ್ತದೆ. ಅಲ್ಲದೆ ಸಂವಿಧಾನದ ಬಗ್ಗೆ ಮೂಲತಃ ನಂಬಿಕೆಯೇ ಇಲ್ಲದ ಕೇಂದ್ರ ಸರಕಾರವು ಇನ್ನು ಮೇಲೆ ಸಂವಿಧಾನವು ಶಾಸಕಾಂಗ/ಕಾರ್ಯಾಂಗಗಳ ಸ್ವಾಯತ್ತತೆಯ ಪರವಾಗಿದೆ ಎಂದು ವಾದಿಸತೊಡಗುತ್ತದೆ. ಸರ್ವೋಚ್ಚ ನ್ಯಾಯಾಲಯವನ್ನು ಚುನಾವಣಾ ಪ್ರಚಾರದಲ್ಲಿ ಪ್ರಧಾನಿಗಳು ಪ್ರತಿಪಕ್ಷಗಳ ಬಗ್ಗೆ ಬಳಸುವ ವ್ಯಂಗ್ಯದ ಧಾಟಿಯಲ್ಲಿ ಈ ಹೇಳಿಕೆಯಲ್ಲಿ "The wisdom of the executive should be trusted" ಎಂದು ಛೇಡಿಸುತ್ತದೆ. ನಿಜವಾದ ವ್ಯಂಗ್ಯವೆಂದರೆ ಸರ್ವೋಚ್ಚ ನ್ಯಾಯಾಲಯವು ಪ್ರಶ್ನೆ ಮಾಡುತ್ತಿರುವುದು ಈ "wisdom of the executive" ಅನ್ನುವುದನ್ನೇ. ಅದರ ಅದಕ್ಷತೆಯಿಂದಾಗಿ ಲಕ್ಷಾನುಗಟ್ಟಲೆ ಸಾವುಗಳು, ನೋವು, ಸಂಕಟ, ದುರಂತಗಳು ನಮ್ಮ ಎದುರಿಗಿವೆ.

ಈ ಹೇಳಿಕೆಯ ಇನ್ನೊಂದು ಭಾಗವೆಂದರೆ ವ್ಯಾಕ್ಸೀನ್‌ನ ದರವನ್ನು ಸ್ಪರ್ಧಾತ್ಮಕ ಮಾರುಕಟ್ಟೆ, ಖಾಸಗಿ ಭಾಗಿದಾರರು (players), ವಿದೇಶೀ ಕಂಪನಿಗಳು ಇವೆಲ್ಲ ಸೇರಿ ತೀರ್ಮಾನಿಸಬೇಕು. ಆಗ ಮಾತ್ರ ಉತ್ಪಾದನೆ ಜಾಸ್ತಿಯಾಗಿ, ವ್ಯಾಕ್ಸೀನ್‌ಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತವೆ. ಅಂದರೆ ಕೊರೋನಾ ಮತ್ತು ವ್ಯಾಕ್ಸೀನ್‌ಗಳು ಮಾರುಕಟ್ಟೆಯ ಸಂಗತಿಗಳು. ಈ ಮಾರುಕಟ್ಟೆಯೇ ಸರಕಾರದ ನೀತಿಯನ್ನು ರೂಪಿಸಬೇಕು. ಹೇಳಿಕೆಯ ಈ ಭಾಗಕ್ಕೆ ಬರುವ ಹೊತ್ತಿಗೆ ಪರಿಣಿತರು, ವೈದ್ಯರು ಎಲ್ಲರೂ ಕಣ್ಮರೆಯಾಗಿದ್ದಾರೆ. ಮುಕ್ತ, ಸ್ಪರ್ಧಾತ್ಮಕ ಮಾರುಕಟ್ಟೆಯೇ ನಿರ್ಧಾರಕವಾಗುತ್ತದೆ. ಈ ವಾದವು ಎಷ್ಟು ಕ್ರೂರವಾಗಿದೆಯೆಂದರೆ ಕೊರೋನಾ ಅದರೆದುರಿಗೆ ದಯಾಳುವಾಗಿ ಕಾಣುತ್ತದೆ. ಇಷ್ಟೆಲ್ಲ ಟೀಕೆಗಳ ಮಧ್ಯ ಕೇಂದ್ರ ಸರಕಾರವು ಯಾಕೆ ತನ್ನ ನಿಲುವನ್ನು ಬದಲಾಯಿಸುತ್ತಿಲ್ಲ ಎನ್ನುವುದಕ್ಕೆ ಉತ್ತರ ಈ ಹೇಳಿಕೆಯಲ್ಲಿ ಸ್ಪಷ್ಟವಾಗಿದೆ. ಭಾರತವೇ ಸ್ಮಶಾನವಾದರೂ ಕೇಂದ್ರ ಸರಕಾರವು ಬಂಡವಾಳಶಾಹಿಗೆ, ಮಾರುಕಟ್ಟೆಗೆ ಬದ್ಧವೇ ಹೊರತು ಪ್ರಜೆಗಳಿಗೆ ಅಲ್ಲ. ಚುನಾವಣೆಯ ಮೊದಲು ಪ್ರಧಾನಿಗಳು ಮುಳುಗೆದ್ದ ಗಂಗಾ ನದಿಯಲ್ಲಿ ಈಗ ಕೋವಿಡ್ ಮೃತರ ಹೆಣಗಳೇ ತೇಲುತ್ತಿವೆ.

ಈ ಲೇಖನವನ್ನು ಬರೆದು ಮುಗಿಸುವಷ್ಟರಲ್ಲಿ Scroll ನಲ್ಲಿ ಪ್ರಕಟವಾದ ಖಿಖಖಖ ಸಂಸ್ಥೆಯ ಸಂಶೋಧಕರೊಬ್ಬರ ಲೇಖನವು ನೋಡಲು ಸಿಕ್ಕಿತು. ಇದರಲ್ಲಿ ಕೇಂದ್ರ ಸರಕಾರದ ಅಫಿಡಾವಿಟ್‌ನಲ್ಲಿರುವ ಇನ್ನೊಂದು ಆಘಾತಕಾರಿ ವಿಷಯದ ಚರ್ಚೆ ಇದೆ. ಇಲ್ಲಿಯವರೆಗೆ ಕೇಂದ್ರವು ಶೇಕಡಾ 50 ರಷ್ಟು ವ್ಯಾಕ್ಸೀನ್‌ಗಳನ್ನು ರಾಜ್ಯ ಸರಕಾರಗಳು ನೇರವಾಗಿ ಕೊಳ್ಳಬಹುದು ಎಂದು ಹೇಳುತ್ತ ಬಂದಿತ್ತು. ಆದರೆ ಈ ಹೇಳಿಕೆಯಲ್ಲಿ ಸತ್ಯವು ಹೊರಬಂದಿದೆ. ಕೇಂದ್ರ ಸರಕಾರವು ಶೇ. 50 ರಷ್ಟು ವ್ಯಾಕ್ಸೀನ್ ಪಡೆದರೆ ಉಳಿದ ಶೇ. 50ರಲ್ಲಿ ಕೇವಲ ಶೇಕಡಾ 25 ಮಾತ್ರ ರಾಜ್ಯ ಸರಕಾರಗಳಿಗೆ, ಇನ್ನುಳಿದ 25% ಖಾಸಗಿ ಆಸ್ಪತ್ರೆಗಳಿಗೆ! ಲೇಖಕರ ಲೆಕ್ಕದ ಪ್ರಕಾರ ವಾಸ್ತವವಾಗಿ ರಾಜ್ಯ ಸರಕಾರಗಳಿಗೆ ದೊರೆಯುವುದು 23% ಮತ್ತು ಖಾಸಗಿ ಆಸ್ಪತ್ರೆಗಳು ಈಗಾಗಲೇ ವ್ಯಾಕ್ಸೀನ್‌ಗಳಿಗೆ ವಿಧಿಸುತ್ತಿರುವ ಶುಲ್ಕವು ರೂ. 1500 ರಿಂದ 1800ರವರೆಗೂ ದಾಟಿದೆ ಎನ್ನುವುದು ನಮ್ಮಲ್ಲಿ ಬಹಳ ಜನರಿಗೆ ಗೊತ್ತಿಲ್ಲ. ಸಾಮಾಜಿಕ ತಾಣಗಳಲ್ಲಿ ಹುಡುಕಿ ನೋಡಿದರೆ ಖಾಸಗಿ ಆಸ್ಪತ್ರೆಗಳು ರಾಜಾರೋಷವಾಗಿ ವ್ಯಾಕ್ಸೀನ್ ಶುಲ್ಕವನ್ನು ಪ್ರಕಟಿಸಿವೆ. ಆದರೆ ಕೇಂದ್ರದ ಅಫಿಡಾವಿಟ್ equitable and differential pricing ಎಂದು ಸರ್ವೋಚ್ಚ ನ್ಯಾಯಾಲಯಕ್ಕೇ ಮೋಸ ಮಾಡುತ್ತಿವೆ. ಇದು ಕ್ರಿಮಿನಲ್ ನಡುವಳಿಕೆ ಅಲ್ಲವೆ?



ಕೃಪೆ: ಪಿ. ಮಹಮ್ಮದ್, ವಾ.ಭಾ.

ಈ ಅಫಿಡಾವಿಟ್‌ನ ಇನ್ನೊಂದು ಭಾಗವು ಅತ್ಯಂತ ಕುತೂಹಲಕಾರಿಯಾಗಿದೆ. ಕೊರೋನಾ ಪಿಡುಗಿನ ರಾಷ್ಟ್ರೀಯ ವಿಪತ್ತಿನ ಸಂದರ್ಭದಲ್ಲಿ Patents Act ನ ಕೆಲವು ಅಂಶಗಳನ್ನು ಯಾಕೆ ಬಳಸಿಕೊಂಡು ವ್ಯಾಕ್ಸೀನ್ ಸಮಸ್ಯೆಗೆ ಪರಿಹಾರ ಹುಡುಕಬಾರದು ಎಂದು ನ್ಯಾಯಾಲಯವು ಕೇಳಿತ್ತು. ಇದಕ್ಕೆ ಕೇಂದ್ರದ ಉತ್ತರವೆಂದರೆ Patents Act ಅಥವಾ ತುರ್ತು ಅಧಿಕಾರ ಇವುಗಳ ಚರ್ಚೆ ಇರಲಿ ಆ ಪದಗಳ ಬಳಕೆಯೇ ಅಪಾಯಕಾರಿಯಂತೆ! (Even a mention ಎನ್ನುವುದು ಮೂಲದಲ್ಲಿದೆ). ಏಕೆಂದರೆ ಕೇಂದ್ರದ ಪ್ರಕಾರ TRIPS ಹಾಗೂ ಬೌದ್ಧಿಕ ಆಸ್ತಿ, WTO ಇವುಗಳ ಚರ್ಚೆ ನಡೆಯುತ್ತಿರುವಾಗ ಇಂಥ ಪ್ರಸ್ತಾಪದಿಂದಾಗಿ ಅತ್ಯಂತ ಪ್ರತಿಕೂಲ ಪರಿಣಾಮವಾಗಬಹುದು. ಇಂದು ಬುಧವಾರ ಶ್ರೀಮಂತ ರಾಷ್ಟ್ರಗಳು ವ್ಯಾಕ್ಸೀನ್‌ಗೆ ಸಂಬಂಧಿಸಿದ ಹಾಗೆ ಪೇಟೆಂಟ್ ವಿಷಯವನ್ನು ಚರ್ಚಿಸಲಿವೆ. ಅಮೇರಿಕವು Corona ವ್ಯಾಕ್ಸೀನ್‌ಗೆ ಸಂಬಂಧಿಸಿದ ಹಾಗೆ ಮಾತ್ರ ಪೇಟೆಂಟ್ ನೀತಿಯನ್ನು ತಾತ್ಕಾಲಿಕವಾಗಿ ಕೈಬಿಡುವುದಕ್ಕೆ ತನ್ನ ನಿಬಂಧನೆ ನೀಡಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ವಿಶ್ವದ ಬಹುರಾಷ್ಟ್ರೀಯ ಕಂಪನಿಗಳು ಇದನ್ನು ಪ್ರಬಲವಾಗಿ ವಿರೋಧಿಸುತ್ತಿವೆ. ಈ ಸಂದರ್ಭದಲ್ಲಿ Patent ಕೈಬಿಡುವ ಬಗ್ಗೆ ಜಾಗತಿಕವಾಗಿ ಮಾತನಾಡಲು ಹೊರಟ ಕೇಂದ್ರ ಸರಕಾರವು ತನ್ನ ಇಡೀ ಅಫಿಡಾವಿಟ್ ಅನ್ನು TRIPS, WTO ಗಳ ಭಾಷೆಯಲ್ಲಿಯೇ ಸಿದ್ಧಪಡಿಸಿದೆ. ಅಲ್ಲದೆ ಭಾರತದಲ್ಲಿ ವ್ಯಾಕ್ಸೀನ್ ಉತ್ಪಾದನೆ ಮಾಡುವ ಸಂಸ್ಥೆಗಳಿಗೆ ವ್ಯಾಕ್ಸೀನ್‌ಗಳಿಂದ 2000% ರಿಂದ 2500% ಲಾಭ ಬರುವಂತೆ ಈಗಾಗಲೇ ನೋಡಿಕೊಂಡಿದೆ. (ಇಲ್ಲಿಯ ಸಂಖ್ಯೆ ಮುದ್ರಣ ದೋಷವಲ್ಲ!) ಇದು ಸಾಲದೆಂಬಂತೆ ಅಫಿಡಾವಿಟ್‌ನಲ್ಲಿ "ಖಾಸಗಿ ಹಿತಾಸಕ್ತಿಗಳು ಶ್ರೀಮಂತಗೊಳ್ಳದಂತೆ" ನಮ್ಮ ನೀತಿಯಿದೆ ಎಂದು ಹೇಳಿಕೊಂಡಿದ್ದು ಸ್ಪರ್ಧಾತ್ಮಕ ಮಾರುಕಟ್ಟೆಯೆಂದರೆ ಏನು ಎಂದು ಈಗ ಗೊತ್ತಾಯಿತಲ್ಲವೆ?

ಇನ್ನೊಂದು ಕ್ರೂರವಾದ ವ್ಯಂಗ್ಯ ಕೇಂದ್ರದ ಹೇಳಿಕೆಯಲ್ಲಿದೆ. ಅದೇನೆಂದರೆ ಹೇಗಿದ್ದರೂ ಎಲ್ಲಾ ರಾಜ್ಯಗಳು ಪ್ರಜೆಗಳಿಗೆ ಉಚಿತವಾಗಿ ವ್ಯಾಕ್ಸೀನ್ ಕೊಡುತ್ತಿರುವುದರಿಂದ ಯಾವ ನಾಗರೀಕರಿಗೂ ತೊಂದರೆ ಇಲ್ಲ! ಹೇಗಿದೆ ವರಸೆ? ರಾಜ್ಯಗಳಿಗೆ ಬರಬೇಕಾದ ಆರ್ಥಿಕ ಪಾಲನ್ನು ಕೊಡದ ಕೇಂದ್ರ ರಾಜ್ಯಗಳೇ ಈ ಖರ್ಚನ್ನು ಭರಿಸಲಿ ಎನ್ನುತ್ತದೆ. ಅಲ್ಲದೆ ವ್ಯಾಕ್ಸೀನ್ ಕೊರತೆಯನ್ನು ತಾನೇ ಸೃಷ್ಟಿಸಿ ಜನರು ಖಾಸಗಿ ಆಸ್ಪತ್ರೆಗಳಲ್ಲಿ ಖರೀದಿ ಮಾಡಿ ಮತ್ತೆ ಖಾಸಗಿ ಹಿತಾಸಕ್ತಿಗಳ ಬೊಕ್ಕಸವನ್ನು ತುಂಬುತ್ತದೆ. ಒಟ್ಟು 218 ಪುಟಗಳ ಅಫಿಡಾವಿಟ್‌ನ ಕೆಲಸಕ್ಕೆ ಬಾರದ ಬೊಗಳೆಗಳ ನಡುವೆ ಪ್ರಭುತ್ವದ ಕ್ರೌರ್ಯವು ಅಡಗಿ ಕುಳಿತಿದೆ. ಸರ್ವೋಚ್ಚ ನ್ಯಾಯಾಲಯವು ಈ ಹೇಳಿಕೆಯನ್ನು ಮನ್ನಿಸಿದರೆ ಭಾರತವು ಜೀವಂತ ನರಕವಾಗುವುದರಲ್ಲಿ ಸಂಶಯವೇ ಇಲ್ಲ.







ಪಾಠ ಕಲಿಯಲು ನಿರಾಕರಿಸುವ ಈ ಸರ್ಕಾರ
ಜನತೆಯ ಮತ್ತು ದೇಶದ ದುರಂತ

* ಪ್ರಕಾಶ್ ಕಾರಟ್

ಕೋವಿಡ್ ಸಾಂಕ್ರಾಮಿಕತೆ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಹಲವು ಸಮಂಜಸವಾದ ಪ್ರಶ್ನೆಗಳನ್ನು ಎತ್ತಿದೆ, ಲಸಿಕೆ ನೀತಿಯ ಪರುಪರಿಶೀಲನೆಯ ಅಗತ್ಯವಿದೆ ಎಂದೂ ಹೇಳಿದೆ. ಈ ವಿವೇಚನಾಪೂರ್ಣ ಸಲಹೆಗೆ ಕೇಂದ್ರ ಸರ್ಕಾರದ ಸ್ಪಂದನೆಯೆಂದರೆ, ತನ್ನ ನಡೆಗಳನ್ನು ಸಮರ್ಥಿಸಿಕೊಳ್ಳುವ ಅಫಿಡವಿಟ್‌ನಲ್ಲಿ ಪ್ರಕಟಿಸಿರುವ ಸುಳ್ಳುಬುರುಕತನ. ನವ-ಉದಾರವಾದಿ ಮತ್ತು ಹಿಂದುತ್ವ ಯುಕ್ತಿಗಳಿಂದ ಕುರುಡಾಗಿರುವ ಈ ಆಡಳಿತದ ಅಮಾನವೀಯ ಹಿಂದುತ್ವ ನಾಟಕದ ಪರ್ಯವಸಾನವೆಂದರೆ ಉತ್ತರ ಪ್ರದೇಶದ ವಿವಿಧ ಭಾಗಗಳಲ್ಲಿ ಗಂಗಾನದಿಯಲ್ಲಿ ಕೋವಿಡ್‌ಗೆ ಬಲಿಯಾದವರ ನೂರಾರು ಶವಗಳು ತೇಲುತ್ತಿರುವ ಕರಾಳ, ಯಾತನೆ ಉಂಟು ಮಾಡುವ ದೃಶ್ಯಗಳು. ಈ ಸರ್ಕಾರ ಪಾಠ ಕಲಿಯುವುದೂ ಇಲ್ಲ ಅಥವಾ ತನ್ನ ನಡೆಗಳನ್ನು ಸರಿಪಡಿಸಿಕೊಳ್ಳುವುದೂ ಇಲ್ಲ. ಇದುವೇ ಜನತೆಯ ಮತ್ತು ದೇಶದ ದುರಂತ.

ವಿನಾಶಕಾರೀ ಎರಡನೆ ಕೋವಿಡ್-19 ಅಲೆ ಅನಾವರಣಗೊಂಡು ಅದಾಗಲೇ ಎರಡು ವಾರಗಳು ಕಳೆದಿವೆ. ಆದರೆ, ನರೇಂದ್ರ ಮೋದಿ ಸರ್ಕಾರ ತನ್ನ ತಿಳಿಗೇಡಿ ನಡೆಗಳನ್ನು ಅರಿಯಲು ಮತ್ತು ನೀತಿಗಳನ್ನು ಸರಿಪಡಿಸಿಕೊಳ್ಳಲು ನಿರಾಕರಿಸುತ್ತಿದೆ.

ಕೋವಿಡ್ ಸಾಂಕ್ರಾಮಿಕತೆ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಹಲವು ಸಮಂಜಸವಾದ ಪ್ರಶ್ನೆಗಳನ್ನು ಎತ್ತಿದೆ. ಅಲ್ಲದೆ ಕೇಂದ್ರ ಸರ್ಕಾರದ ಲಸಿಕೆ ನೀತಿ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದೆ. ಪ್ರಸ್ತುತ ವ್ಯಾಕ್ಸಿನ್ ನೀತಿಯನ್ನು ಮರುಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿರುವ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, ರಾಜ್ಯಗಳಿಗೆ ಲಸಿಕೆ ಹಂಚಿಕೆ ಮತ್ತು ಬಟವಾಡೆ ವೇಳಾಪಟ್ಟಿಯನ್ನು ಕೇಂದ್ರ ಸರಕಾರ ನಿರ್ಧರಿಸಬೇಕು, ಲಸಿಕೆ ಪಡೆಯಲು ರಾಜ್ಯ ಸರ್ಕಾರಗಳು ಲಸಿಕೆ ಉತ್ಪಾದಕ ಕಂಪೆನಿಗಳೊಂದಿಗೆ ಮಾತುಕತೆಗೆ ಬಿಟ್ಟುಬಿಡುವುದು ಸರಿಯಲ್ಲ ಎಂದಿದೆ. ಹಾಗೆ ಮಾಡಿದರೆ 'ಅರಾಜಕತೆ ಮತ್ತು ಅನಿಶ್ಚಿತತೆ ಉಂಟಾಗುತ್ತದೆ' ಎಂದು ಪೀಠ ಹೇಳಿದೆ.

ಲಸಿಕೆ ಬೆಲೆ ನೀತಿ ಬಗ್ಗೆಯೂ ನ್ಯಾಯಾಲಯ ಅತೃಪ್ತಿ ದಾಖಲಿಸಿರುವುದು ಇನ್ನೂ ಮಹತ್ವದ ಸಂಗತಿಯಾಗಿದೆ. ಬೇರೆ ಬೇರೆ ಬೆಲೆ ನಿರ್ಧರಿಸುವುದರಿಂದ 18ರಿಂದ 44 ವರ್ಷದೊಳಗಿನವರಿಗೆ ಅದರಲ್ಲೂ ವಿಶೇಷವಾಗಿ ಅನುಕೂಲ-ವಂಚಿತ ವಿಭಾಗಗಳ ವಿರುದ್ಧ ತಾರತಮ್ಯಕ್ಕೆ ಕಾರಣವಾಗುತ್ತದೆ ಎನ್ನುವುದು ಕೋರ್ಟ್ ಕಳವಳವಾಗಿದೆ. ಆರೋಗ್ಯದ ಹಕ್ಕನ್ನೂ ಒಳಗೊಂಡಂತೆ ಜೀವಿಸುವ ಹಕ್ಕನ್ನು ಪ್ರತಿಪಾದಿಸುವ ಸಂವಿಧಾನದ 21ನೇ ವಿಧಿಯ ಅನ್ವಯ ಕೇಂದ್ರ ಸರ್ಕಾರ ಎಲ್ಲ ಲಸಿಕೆಯನ್ನು ಖರೀದಿಸುವುದು ಮತ್ತು ವ್ಯಾಕ್ಸಿನ್ ತಯಾರಕರೊಂದಿಗೆ ಬೆಲೆ ಕುರಿತು ಮಾತುಕತೆ ನಡೆಸುವುದು ತರ್ಕಬದ್ಧ ವಿಧಾನ ಎಂಬುದು ಮೇಲ್ನೋಟಕ್ಕೇ ಕಾಣುತ್ತದೆ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ಪಟ್ಟಿದ್ದಾರೆ. ಒಮ್ಮೆ ಕೇಂದ್ರ ಸರ್ಕಾರ ಕೇಂದ್ರೀಕೃತ ಖರೀದಿ ಮಾಡಿಯಾದ ಮೇಲೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಲಸಿಕೆ ವಿತರಿಸುವುದನ್ನು ವಿಕೇಂದ್ರೀಕರಿಸಬಹುದಾಗಿದೆ.

ಈ ವಿವೇಚನಾಪೂರ್ಣ ಸಲಹೆಗೆ ಕೇಂದ್ರ ಸರ್ಕಾರದ ಸ್ಪಂದನೆಯೆಂದರೆ, ತನ್ನ ಲಸಿಕೆ ನೀತಿಯನ್ನು ಸಮರ್ಥಿಸಿ ಕೊಂಡಿರುವುದು. ಇದು ಕಾರ್ಯಾಂಗವು ನಿರ್ಧಾರ ಕೈಗೊಳ್ಳಬೇಕಾದ ವಿಚಾರ, ಇದನ್ನು ನ್ಯಾಯಾಲಯದ ಹಸ್ತಕ್ಷೇಪಕ್ಕೆ ಒಳಪಡಿಸಬಾರದು ಎಂದು ಅದು ಒತ್ತಿ ಹೇಳಿದೆ. ತನ್ನ ಲಸಿಕೆ ನೀತಿ "ನ್ಯಾಯಸಮ್ಮತವಾಗಿದೆ, ಸಮತ್ವದಿಂದ ಕೂಡಿದೆ, ತಾರತಮ್ಯತೆ ಇಲ್ಲ ಹಾಗೂ ಎರಡು ವಯೋಗುಂಪುಗಳ ನಡುವಿನ ವಿವೇಕಪೂರ್ಣ ಭಿನ್ನತೆಯ ಅಂಶದ ಮೇಲೆ ಇದು ಆಧರಿತವಾಗಿದೆ' ಎಂದಿದೆ.

ಅಫಿಡವಿಟ್‌ನಿಂದ ಸುಳ್ಳುಬರುಕತನ ಬಯಲು

ಸರ್ವೋನ್ನತ ನ್ಯಾಯಾಲಯಕ್ಕೆ ಸಲ್ಲಿಸಿರುವ ಕೇಂದ್ರ ಸರ್ಕಾರದ ಅಫಿಡವಿಟ್ ಅದರ ಸುಳ್ಳುಬುರುಕತೆಯನ್ನು ಪ್ರಕಟ ಪಡಿಸುವಂತಿದೆ. 18-44 ವಯೋಗುಂಪಿನ ಎಲ್ಲರಿಗೂ ಉಚಿತವಾಗಿ ಲಸಿಕೆ ಹಾಕುವುದಾಗಿ ರಾಜ್ಯ ಸರ್ಕಾರಗಳು ಘೋಷಿಸಿರುವುದರಿಂದ ಲಸಿಕೆ ಉಚಿತವಾಗಿರುತ್ತದೆ ಎಂದು ಅಫಿಡವಿಟ್‌ನಲ್ಲಿ ಕೇಂದ್ರ ಹೇಳಿಕೊಂಡಿದೆ. ಲಸಿಕೆ ಖರೀದಿಯ ಹೊರೆಯನ್ನು ರಾಜ್ಯ ಸರ್ಕಾರಗಳ ಮೇಲೆ ಕೇಂದ್ರ ಹೇರಿದೆ. ಎರಡು ವ್ಯಾಕ್ಸಿನ್ ತಯಾರಿಕೆ ಕಂಪೆನಿಗಳಿಂದ ಹೆಚ್ಚಿನ ಬೆಲೆಗಳಲ್ಲಿ ಲಸಿಕೆ ಖರೀದಿಸುವಂತೆ ಬಲವಂತ ಮಾಡಲಾಗಿದ್ದು ಇದು ಲಾಭಕೋರತನವಲ್ಲದೆ ಬೇರೇನೂ ಅಲ್ಲ. ಲಸಿಕೆಗಾಗಿ ಕೇಂದ್ರ ಬಜೆಟ್‌ನಲ್ಲಿ 35,000 ಕೋಟಿ ರೂಪಾಯಿ ಹಂಚಿಕೆ ಆಗಿದ್ದರೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಲಸಿಕೆಗಾಗಿ ಯಾವುದೇ ನೆರವು ನೀಡುವುದಿಲ್ಲ. ರಾಜ್ಯಗಳು ತಮ್ಮ ಆರೋಗ್ಯ ಬಜೆಟ್‌ನ ಒಂದು ಭಾಗವನ್ನು ಲಸಿಕೆಗಾಗಿ ವ್ಯಯಿಸಬೇಕಾಗುತ್ತದೆ. ಇದರಿಂದ ಸಾರ್ವಜನಿಕ ಆರೋಗ್ಯ ವೆಚ್ಚಕ್ಕೆ ಅಡ್ಡಿಯುಂಟಾಗುತ್ತದೆ. ಈ ಮೂಲಕ ತಾರತಮ್ಯದ ಬೆಲೆ ನೀತಿಯನ್ನು ರಾಜ್ಯಗಳು ಒಪ್ಪಿ ಆ ನಂತರ ಲಸಿಕೆಯನ್ನು ಉಚಿತವಾಗಿ ವಿತರಿಸುವ ಬಲವಂತಕ್ಕೆ ಒಳಗಾಗುತ್ತವೆ.

ಅಲ್ಲದೆ ಪ್ರೊ.ಆರ್. ರಾಮಕುಮಾರ್ ಸ್ಕ್ರಾಲ್.ಇನ್‌ನಲ್ಲಿ ಪ್ರಕಟವಾದ ಲೇಖನದಲ್ಲಿ ತಿಳಿಸಿರುವಂತೆ, ರಾಜ್ಯಗಳು ಮತ್ತು ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆಯಾಗಿರುವ 50% ಲಸಿಕೆಯನ್ನು 50:50 ಅನುಪಾತದಲ್ಲಿ ಹಂಚಿಕೊಳ್ಳಬೇಕು. ಅಂದರೆ, ರಾಜ್ಯಗಳಿಗೆ ಕೇವಲ 25% ಲಸಿಕೆ ದೊರಕುತ್ತದೆ ಎಂದಾಯಿತು. ಅಷ್ಟೇ ಪ್ರಮಾಣದ, ಅಂದರೆ 25% ಲಸಿಕೆ ಮಾರುಕಟ್ಟೆ ಮತ್ತು ಖಾಸಗಿ ಆಸ್ಪತ್ರೆಗಳ ಪಾಲಾಗಿ ದುಬಾರಿ ದರಗಳನ್ನು ವಿಧಿಸಲಾಗುತ್ತದೆ. ಸಾರ್ವಜನಿಕ ಹಿತಕ್ಕಿಂತ ಖಾಸಗಿ ಲಾಭಕ್ಕೆ ಆದ್ಯತೆ ನೀಡುವ ಸ್ಪಷ್ಟ ದೃಷ್ಟಾಂತ ಇದಾಗಿದೆ.

ವಿವೇಚನಾಶೂನ್ಯ ಸರ್ಕಾರ

ವ್ಯಾಕ್ಸಿನ್ ಹಂಚಿಕೆ ಗೊಂದಲ ಮತ್ತು ಕಳೆದ 15 ದಿನಗಳಲ್ಲಿ ರಾಜ್ಯಗಳಲ್ಲಿ ಲಸಿಕೆ ಹಾಕುವ ಪ್ರಕ್ರಿಯೆ ಶೇಕಡ 60ರಷ್ಟು ಕುಸಿದಿರುವುದನ್ನು ಕಂಡರೆ, ವಿವೇಚನೆ ಇರುವ ಯಾವುದೇ ಸರ್ಕಾರವಾದರೂ ಲಸಿಕೀಕರಣ ಕಾರ್ಯಕ್ರಮವನ್ನು ಪುನರ್‌ರೂಪಿಸಲು ಸುಪ್ರೀಂ ಕೋರ್ಟ್ ನೀಡಿದ ಅವಕಾಶವನ್ನು ಬಳಸಿಕೊಳ್ಳುತ್ತಿತ್ತು. ಆದರೆ ಇದೊಂದು ವಿವೇಚನೆ ಇರುವ ಸರ್ಕಾರ ಅಲ್ಲವೇ ಅಲ್ಲ. ತನ್ನ ನವ-ಉದಾರವಾದಿ ಮತ್ತು ಹಿಂದುತ್ವ ಯುಕ್ತಿಗಳಿಂದ ಕುರುಡಾಗಿರುವ ಆಡಳಿತ ಇದಾಗಿದೆ.

ಸಂವಿಧಾನದ 14 ಮತ್ತು 21ನೇ ವಿಧಿಗಳಲ್ಲಿ ಪ್ರದತ್ತವಾಗಿರುವ ಪ್ರಜೆಗಳ ಜೀವನದ ಹಕ್ಕಿಗೆ (ಹಾಗೂ ಆರೋಗ್ಯದ ಹಕ್ಕಿಗೆ) ಅನುಗುಣವಾಗಿ ಸರ್ಕಾರ ತನ್ನ ಲಸಿಕೆ ನೀತಿಯನ್ನು ಬದಲಾಯಿಸಿಕೊಳ್ಳುವಂತೆ ಸರ್ಕಾರಕೆ ನಿರ್ದೇಶನ ನೀಡುವ ಇಚ್ಛಾಶಕ್ತಿಯನ್ನು ಸುಪ್ರೀಂ ಕೋರ್ಟ್ ಪಡೆಯುತ್ತೆಂದು ಆಶಿಸಬೇಕಷ್ಟೇ.

ಕೊವಿಡ್ ಅಲೆಯನ್ನು ನಿಭಾಯಿಸುವಲ್ಲಿ ಸರಕಾರದ ವಿನಾಶಕಾರೀ ನಡೆಗೆ ಇನ್ನೊಂದು ಕಾರಣ, ತನ್ನ ಹಿಂದುತ್ವ ಕಣ್ಣೋಟದಿಂದಾಗಿ ವಿಜ್ಞಾನವನ್ನು ಅವಲಂಬಿಸಲಾರದ ಅದರ ಅಸಮರ್ಥತೆ. ಕೇಂದ್ರ ಆರೋಗ್ಯ ಮತ್ತು ವಿಜ್ಞಾನ-ತಂತ್ರಜ್ಞಾನ ಸಚಿವ ಹರ್ಷವರ್ಧನ್‌ರ ನಡೆಯನ್ನು ಬೇರಾವ ರೀತಿಯಲ್ಲಿ ತಾನೇ ವಿವರಿಸಲು ಸಾಧ್ಯ?

ಹಿಂದುತ್ವ ಮುಂದಕ್ಕೆ, ವಿಜ್ಞಾನ ಹಿಂದಕ್ಕೆ

ಏಪ್ರಿಲ್ ಮಧ್ಯ ಭಾಗದಲ್ಲಿ ಕೋವಿಡ್ ಪ್ರಕರಣಗಳು ಅತೀವವಾಗಿ ಹಬ್ಬುತ್ತಿದ್ದಾಗ ಸಚಿವ ಹರ್ಷವರ್ಧನ್ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ದೇಶೀಯ ಹಸುಗಳ ಮೇಲೆ ಸಂಶೋಧನೆ ನಡೆಸುವ ವಿಚಾರವನ್ನು ಚರ್ಚಿಸುತ್ತಿದ್ದರು. 'ದೇಶೀಯ ಹಸುಗಳ ಪ್ರಮುಖ ಉತ್ಪನ್ನಗಳ ಸಂಶೋಧನೆಯ ಹೆಚ್ಚಳದ ಮೂಲಕ ವೈಜ್ಞಾನಿಕ ಬಳಕೆ '(ಎಸ್‌ಯುಪಿಆರ್‌ಎ-ಪಿಐಸಿ) ಎಂಬ ತೀರಾ ಅಸಂಬದ್ಧ ಶೀರ್ಷಿಕೆಯ ಈ ಕಾರ್ಯಕ್ರಮದಡಿ ಪಂಚಗವ್ಯದ (ಸೆಗಣಿ, ಗೋಮೂತ್ರ, ಹಾಲು, ಮೊಸರು ಮತ್ತು ತುಪ್ಪದ ಮಿಶ್ರಣ) ವೈಜ್ಞಾನಿಕ ಪ್ರಮಾಣೀಕರಣ ಮುಂತಾದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ವಿವಿಧ ಪ್ರಾಜೆಕ್ಟ್‌ಗಳಿಗೆ 100 ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ.

ಈ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾಗುತ್ತಿದೆ ಎಂದು ಸಚಿವರು ಅತೃಪ್ತಿ ವ್ಯಕ್ತಪಡಿಸಿದರು, ಮಿಷನ್‌ನ ನಿಧಾನಗತಿಯ ಅನುಷ್ಠಾನಕ್ಕೆ ಕೊರೊನಾ ಸಾಂಕ್ರಾಮಿಕ ಒಂದು ನೆಪವಾಗಬಾರದು ಎಂದರು. ಅದು ಕೂಡ ಆಮ್ಲಜನಕದ ಕೊರತೆಯಿಂದ ಜನರು ಸಾಯುತ್ತಿದ್ದ ಈ ಸಂದರ್ಭದಲ್ಲಿ.

150 ಜಿಲ್ಲಾ ಆಸ್ಪತ್ರೆಗಳಲ್ಲಿ, ಅದು ಕೂಡ ಕೇವಲ 200 ಕೋಟಿ ರೂಪಾಯಿ ವೆಚ್ಚದಲ್ಲಿ ಆಮ್ಲಜನಕ ಸ್ಥಾವರಗಳನ್ನು ಸ್ಥಾಪಿಸಲು ಈ ಮಂತ್ರಿ ಕಳೆದ ವರ್ಷ ಇದೇ ಸಮಯವನ್ನು ವ್ಯಯಿಸಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು.

ವೈಜ್ಞಾನಿಕ ಮತ್ತು ತಜ್ಞರ ಅಭಿಪ್ರಾಯಗಳನ್ನು ತಾನು ಅವಲಂಬಿತವಾಗಿರುವುದಾಗಿ ಕೇಂದ್ರ ಸರ್ಕಾರ ಅಫಿಡವಿಟ್‌ನಲ್ಲಿ ಹೇಳಿರುವುದನ್ನು ಗಂಭೀರವಾಗಿ ಪ್ರಶ್ನಿಸಬೇಕಾಗಿದೆ. ಹಾಗಲ್ಲವಾದರೆ ಹೈಡ್ರಾಕ್ಸಿಕ್ಲೋರೋಕ್ವಿನ್, ರೆಮ್‌ಡಿಸಿವಿರ್ ಮತ್ತು ಐವರ್‌ಮೆಕ್ಟಿನ್ ಔಷಧಿಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಈಗಲೂ ತನ್ನ ಮಾರ್ಗಸೂಚಿಯಲ್ಲಿ ಶಿಫಾರಸು ಮಾಡುತ್ತಿರುವುದಾದರೂ ಹೇಗೆ? ಈ ಔಷಧಿಗಳನ್ನು ಕೋವಿಡ್-19 ರೋಗಿಗಳ ಚಿಕಿತ್ಸೆಗೆ ಬಳಸಬಾರದೆಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಇತರ ವೈದ್ಯಕೀಯ ತಜ್ಞರು ಸಲಹೆ ಮಾಡಿದ್ದಾರೆ. ರೋಗಿಗಳ ಒಂದು ಸಣ್ಣ ಉಪ-ಗುಂಪಿಗಷ್ಟೇ ರೆಮ್‌ಡಿಸಿವಿರ್ ಬಳಸಬೇಕೆಂದು ಹೇಳಿದ್ದಾರೆ. ಆದರೆ ಭಾರತದಲ್ಲಿ ಈ ಔಷಧಿಗಳನ್ನು ವ್ಯಾಪಕವಾಗಿ ಸಲಹೆ ಮಾಡಲಾಗುತ್ತಿದೆ. ಈ ಮೂಲಕ ಔಷಧಿ ಕಂಪೆನಿಗಳಿಗೆ ಅಪಾರ ಲಾಭ ಮಾಡಿಕೊಡಲಾಗುತ್ತಿದೆ, ಅಲ್ಲದೆ ಕಾಳಸಂತೆಗೆ ಅವಕಾಶ ಸೃಷ್ಟಿಸಲಾಗುತ್ತಿದೆ.



ಸಗಣಿ ಮಹಾತ್ಮೆ
ಪಕ್ಷದಲ್ಲಿ ಪ್ರತಿಯೊಬ್ಬರೂ ಸಗಣಿ ಬಳಸಬೇಕು,
ಇದು ಪಿಪಿಇ ಕಿಟ್‌ಗಿಂತ ಹೆಚ್ಚು ಶಕ್ತಿಶಾಲಿ!

Everyone in the party should use cow dung, which is more powerful than a PPE Kit!

ವ್ಯಂಗ್ಯಚಿತ್ರ:
ಸುಭಾನಿ, ಡೆಕ್ಕನ್ ಕ್ರಾನಿಕಲ್

ಇನ್ನು, ಕೋವಿಡ್-19 ಕುರಿತ ರಾಷ್ಟ್ರೀಯ ಕಾರ್ಯಪಡೆ, ಎರಡನೇ ಕೊವಿಡ್ ಅಲೆ ರೂಪುಗೊಳ್ಳುತ್ತಿದ್ದ ಈ ವರ್ಷದ ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಒಮ್ಮೆಯೂ ಸಭೆ ಸೇರಿರಲಿಲ್ಲ ಎಂದ ಮೇಲೆ ಸರ್ಕಾರ ವೈಜ್ಞಾನಿಕ ಮತ್ತು ತಜ್ಞರ ಸಲಹೆ ಮೇಲೆ ಅವಲಂಬಿಸಿದೆ ಎನ್ನುವುದಕ್ಕೆ ಏನನ್ನೋಣ?

ಹಿಂದುತ್ವ ಗೀಳಿನ ಘೋರ ಫಲಿತಾಂಶ

ಹಸುಗಳ ಕುರಿತ ಹಿಂದುತ್ವದ ಗೀಳು ಎಂಥ ಪರಿಣಾಮ ಬೀರಿದೆ ನೋಡಿ. ಗುಜರಾತ್‌ನಲ್ಲಿ ಜನರು ಗೋಶಾಲೆಗಳಿಗೆ ಹೋಗಿ,ಅಲ್ಲಿ ಹೋದ ಜನರು ವೈರಸ್‌ನಿಂದ ರಕ್ಷಣೆ ಪಡೆಯಲೆಂದು ಸೆಗಣಿ ಮತ್ತು ಗೋಮೂತ್ರ ಮತ್ತು ಸಗಣಿ ಮೆತ್ತಿಸಿಕೊಂಡು ಬರುತ್ತಿರುವ ಹಾಸ್ಯಾಸ್ಪದ ದೃಶ್ಯಗಳು ಕಾಣಬರುತ್ತಿವೆ.

ಉತ್ತರ ಪ್ರದೇಶದ ಆದಿತ್ಯನಾಥ ಸರ್ಕಾರದ ಆದ್ಯತೆಗಳು ಕೂಡ ಸ್ಪಷ್ಟವಾಗಿವೆ. ಗೋವುಗಳ ರಕ್ಷಣೆಗೆ ಪ್ರತಿ ಜಿಲ್ಲೆಯಲ್ಲಿ "ಹೆಲ್ಪ್ ಡೆಸ್ಕ್' ಆರಂಭಿಸುವಂತೆ ಸರ್ಕಾರ ಕಳೆದ ವಾರ ನಿರ್ದೇಶನ ನೀಡಿದೆ. ಗೋಶಾಲೆಗಳಲ್ಲಿ ಅಲ್ಲಿನ ಸಿಬ್ಬಂದಿಗಾಗಿ ಆಕ್ಸಿಮೀಟರ್ ಮತ್ತು ಥರ್ಮಲ್ ಸ್ಕ್ಯಾನರ್‌ಗಳನ್ನು ಅಳವಡಿಸಲಾಗುತ್ತದೆ. ರಾಜ್ಯದಾದ್ಯಂತ ಹಳ್ಳಿಗಳಲ್ಲಿ ವೈದ್ಯಕೀಯ ನೆರವು ಅಥವಾ ಆರೈಕೆ ದೊರೆಯದೆ ಸಾವಿರಾರು ಜನರು ಸಾಯುತ್ತಿರುವಾಗ ರಾಜ್ಯ ಸರ್ಕಾರ ಮಾಡುತ್ತಿರುವುದು ಇದನ್ನು!

ಈ ಅಮಾನವೀಯ ಹಿಂದುತ್ವ ನಾಟಕದ ಪರ್ಯವಸಾನವೆಂದರೆ ಉತ್ತರ ಪ್ರದೇಶದ ವಿವಿಧ ಭಾಗಗಳಲ್ಲಿ ಗಂಗಾನದಿಯಲ್ಲಿ ಕೋವಿಡ್‌ಗೆ ಬಲಿಯಾದವರ ನೂರಾರು ಜನರ ಶವಗಳು ತೇಲುತ್ತಿರುವ ಕರಾಳ, ಮನಕಲಕುವ ದೃಶ್ಯಗಳು.

ಈ ಸರ್ಕಾರ ಪಾಠ ಕಲಿಯುವುದೂ ಇಲ್ಲ ಅಥವಾ ತನ್ನ ನಡೆಗಳನ್ನು ಸರಿಪಡಿಸಿಕೊಳ್ಳುವುದೂ ಇಲ್ಲ. ಇದುವೇ ಜನತೆಯ ಮತ್ತು ದೇಶದ ದುರಂತ.

ಅನು: ವಿಶ್ವ

ಉಕ್ಕಿನ ಮಹಿಳೆ: ಕೆ.ಆರ್. ಗೌರಿ ಅಮ್ಮ



ಕೇರಳದ ಹಿರಿಯ ಕಮ್ಯುನಿಸ್ಟ್ ನೇತಾರರಾಗಿದ್ದ ಕೆ.ಆರ್. ಗೌರಿ ಅಮ್ಮ ಮೇ 11ರ ಮುಂಜಾನೆ ತಿರುವನಂತಪುರದಲ್ಲಿ ನಿಧನರಾಗಿದ್ದಾರೆ. ವಯಸ್ಸಿಗೆ ಸಂಬಂಧಪಟ್ಟ ಕಾಯಿಲೆಗಳಿಂದಾಗಿ ಕೊನೆಯುಸಿರೆಳೆದಾಗ ಅವರಿಗೆ 102 ವರ್ಷವಾಗಿತ್ತು.



ವಿದ್ಯಾರ್ಥಿ ಆಂದೋಲನದಿಂದ ಆರಂಭವಾಗಿ, ಕಾರ್ಮಿಕ ಆಂದೋಲನದಲ್ಲಿ, ರೈತ ಮತ್ತು ಮಹಿಳಾ ನೇತಾರರಾಗಿ, ಎಡ-ನೇತೃತ್ವದ ಸರಕಾರಗಳಲ್ಲಿ ಮಂತ್ರಿಯಾಗಿ ಒಂದು ದೀರ್ಘವಾದ ಮತ್ತು ಉತ್ಸಾಹಭರಿತ ರಾಜಕೀಯ ಜೀವನ ನಡೆಸಿರುವ ಅವರ ಬದುಕು ಆಧುನಿಕ ಕೇರಳದ ಇತಿಹಾಸವೇ ಆಗಿದೆ. ತನ್ನ ಬದುಕಿನಾದ್ಯಂತ ಒಬ್ಬ ಕ್ರಾಂತಿಕಾರಿಯಾಗಿ ಅವರು ತೋರಿದ ಧೈರ್ಯ ಅಸಾಧಾರಣ.

ಕೇರಳ ರಾಜ್ಯ ರಚನೆಯ ಮೊದಲು ತಿರುವಾಂಕೂರಿನಲ್ಲಿ 1948ರಲ್ಲಿ ವಯಸ್ಕ ಮತದಾನದ ಅಡಿಯಲ್ಲಿ ನಡೆದ ಮೊದಲ ಚುನಾವಣೆ ಮತ್ತು 1977 ಮತ್ತು 2006ರ ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಬಿಟ್ಟು 1952 ಮತ್ತು 1954ರ ತಿರುವಾಂಕೂರು-ಕೊಚ್ಚಿ ಶಾಸನ ಸಭೆಯೂ ಸೇರಿದಂತೆ ತಾನು ಸತತವಾಗಿ ಸ್ಪರ್ಧಿಸಿದ್ದ ಎಲ್ಲ ಚುನಾವಣೆಗಳಲ್ಲೂ ಗೆದ್ದಿರುವ ಅಪೂರ್ವ ದಾಖಲೆ ಇವರದ್ದು.



ಜಗತ್ತಿನಲ್ಲೇ ಚುನಾವಣೆಗಳ ಮೂಲಕ ರಚನೆಗೊಂಡ ಮೊದಲ ಕಮುನಿಸ್ಟ್ ಸರಕಾರ ಎನಿಸಿಕೊಂಡ ಇಎಂಎಸ್ ನಂಬೂದಿರಿಪ್ಪಾಡ್ ನೇತೃತ್ವದ ಐತಿಹಾಸಿಕ ಸಂಪುಟದಲ್ಲಿ ರೆವಿನ್ಯೂ, ಅಬಕಾರಿ ಮತ್ತು ದೇವಸ್ವಂ ಮಂತ್ರಿಯಾಗಿ ಕೇರಳದ ಜನತೆಗೆ ಇವರ ಮಹಾನ್ ಸೇವೆಯೆಂದರೆ ಒಕ್ಕಲೆಬ್ಬಿಸುವುದನ್ನು ನಿಷೇಧಿಸಿದ ಮಸೂದೆ, ಭೂಸುಧಾರಣಾ ಮಸೂದೆ ಮತ್ತು ಕೃಷಿ ಸಂಬಂಧಗಳ ಮಸೂದೆ. ಮಹಿಳಾ ಸಮಾನತೆ ಕುರಿತ ಅವರ ವಿಚಾರಗಳಿಂದಾಗಿ ಕೇರಳ ಮಹಿಳಾ ಅಯೋಗ ಮಸೂದೆ ಮಂಡಿಸುವಂತಾಯಿತು.

ಮುಂದೆ ಅವರು ರೆವಿನ್ಯೂ ಮಾತ್ರವಲ್ಲ, ವಿಜಿಲೆನ್ಸ್, ಕೈಗಾರಿಕೆ, ಆಹಾರ, ಕೃಷಿ, ಅಬಕಾರಿ, ಸಾಮಜಿಕ ಕಲ್ಯಾಣ, ದೇವಸ್ವಂ, ಮತ್ತು ಪಶುಪಾಲನೆ ವಿಭಾಗಗಳಿಗೂ ಮಂತ್ರಿಯಾಗಿ ನೇತೃತ್ವ ನೀಡಿದರು.

ಗೌರಿ ಅಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ್ದು 1946ರಲ್ಲಿ ತಿರುವಾಂಕೂರು ಸಂಸ್ಥಾನ ಭಾರತ ಸಂಘವನ್ನು ಸೇರಬೇಕು ಎಂಬ ಚಳುವಳಿಯ ವಿದ್ಯಾರ್ಥಿ ಕಾರ್ಯಕರ್ತೆಯಾಗಿ. ಕ್ವಿಟ್ ಇಂಡಿಯಾ ಚಳುವಳಿಯಲ್ಲೂ ಭಾಗವಹಿಸಿದ ಅವರು ಹಿಂದುಳಿದ ಎಳವ ಸಮುದಾಯದ ಮೊತ್ತಮೊದಲ ಮಹಿಳಾ ಕಾನೂನು ಪದವೀಧರೆ.

ಕಾನೂನು ವಿದ್ಯಾರ್ಥಿಯಾಗಿದ್ದಾಗ ಕಮುನಿಸ್ಟ್ ಆಂದೋಲನದ ಭಾಗವಾದ ಅವರಿಗೆ ಪಕ್ಷದ ಸದಸ್ಯತ್ವವನ್ನು ಕೊಟ್ಟವರು ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಪಿ.ಕೃಷ್ಣ ಪಿಳ್ಳೆಯವರು. 1948ರಲ್ಲಿ ಇವರು ಪಕ್ಷ ಸೇರಿದ ಸಂದರ್ಭದಲ್ಲಿ ಪಕ್ಷದ ಮೇಲೆ ನಿಷೇಧ ಬಂದುದರಿಂದ ಆರಂಭದಲ್ಲೇ ಅವರು ಜೈಲು ಸೇರಬೇಕಾಯಿತು. ಮುಂದೆಯೂ ಅವರು ಹಲವು ಬಾರಿ ಜೈಲುವಾಸ ಕಾಣಬೇಕಾಯಿತು. ತೀವ್ರ ಪೋಲೀಸ್ ಹಿಂಸಾಚಾರವನ್ನು ಸಹಿಸಬೇಕಾಗಿ ಬಂತು.

ಮುಂದೆ ಅವರು ಇಎಂಎಸ್, ಎಕೆಜಿ ಮತ್ತು ಇ ಕೆ ನಯನಾರ್ ಮುಂತಾದ ಪ್ರತಿಷ್ಠಿತ ನಾಯಕರೊಂದಿಗೆ ಪಕ್ಷದ ಬುನಾದಿ ಕಟ್ಟಲು ಶ್ರಮಿಸಿದರು.



1957ರ ಮೊದಲ ಇಎಂಎಸ್ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದ ಟಿ.ವಿ.ಥಾಮಸ್‌ರನ್ನು ಅವರು ಮದುವೆಯಾದರು. 1964ರಲ್ಲಿ ಕಮುನಿಸ್ಟ್ ಪಕ್ಷ ವಿಭಜನೆಗೊಂಡಾಗ ಥಾಮಸ್ ಸಿಪಿಐನಲ್ಲೇ ಉಳಿದರು, ಗೌರಿ ಅಮ್ಮ ಸಿಪಿಐ(ಎಂ) ಮುಖಂಡರಾದರು.

ಅವರು 1960ರಿಂದ 1984 ರವರೆಗೆ ಕೇರಳ ಕರ್ಷಕ ಸಂಘಂ(ಎಐಕೆಎಸ್)ನ ಅಧ್ಯಕ್ಷರಾಗಿದ್ದರು, 1967ರಿಂದ 1976ರ ವರೆಗೆ ಕೇರಳ ಮಹಿಳಾ ಸಂಘಂನ ಅಧ್ಯಕ್ಷರಾಗಿದ್ದರು.

1980ರ ದಶಕದ ವೇಳೆಗೆ ಅವರೊಬ್ಬ ಧೀರ ಮಹಿಳೆ, ದಕ್ಷ ಆಡಳಿತಗಾರ್ತಿ ಎಂದು ಪ್ರಖ್ಯಾತರಾದರು. ಆದರೆ 1994ರಲ್ಲಿ ಅವರು ಪಕ್ಷ-ವಿರೋಧಿ ಚಟುವಟಿಕೆಗಳ ಆರೋಪದಿಂದಾಗಿ ಪಕ್ಷದಿಂದ ಉಚ್ಚಾಟಿತರಾದರು. ಅವರು ಆಗ ಕೇರಳ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದರು.

ಉಚ್ಚಾಟನೆಗೊಂಡಾಗ ಅವರು ಜೆಎಸ್‌ಎಸ್ ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದರು. ಇದು ಯುಡಿಎಫ್ ಸೇರಿತು. ಇದರಿಂದಾಗಿ ಅವರು ಎಕೆ ಆಂಟನಿ ಮತ್ತು ಒಮನ್ ಚಾಂಡಿಯವರ ಸಂಪುಟಗಳಲ್ಲಿಯೂ ಮಂತ್ರಿಯಾಗಿಯೂ ಕೆಲಸ ಮಾಡಿದರು.

ಆದರೆ 2016ರಲ್ಲಿ ಅವರು ಯುಡಿಎಫ್ ನೊಂದಿಗೆ ಸಂಬಂಧಗಳನ್ನು ಮುರಿದುಕೊಂಡು ಎಲ್‌ಡಿಎಫ್ ಬೆಂಬಲಕ್ಕೆ ನಿಂತರು.

ಡಾ. ಕೆ. ಷರೀಫಾ

ಕೇರಳದ ಹಿರಿಯ ರಾಜಕಾರಣಿ ಕೆ.ಆರ್.ಗೌರಿಯಮ್ಮ ಕೇರಳದ ಚರಿತ್ರೆಯಲ್ಲಿ ಐತಿಹಾಸಿಕ ಹೆಗ್ಗುರುತುಗಳನ್ನು ಉಳಿಸಿ ಹೋಗಿರುವವರು. ಅವರು ಆಧುನಿಕ ಕೇರಳದ ರೂವಾರಿಗಳಲ್ಲೊಬ್ಬರು. ಸ್ತ್ರೀವಾದಿ, ಒಬ್ಬ ಅಸಾಧಾರಣ ಮಾನಸಿಕ ಸ್ಥೈರ್ಯವುಳ್ಳ ಮಹಿಳೆಯಾಗಿದ್ದರು.



ಅವರು ತುರ್ತು ಪರಿಸ್ಥಿತಿಯಲ್ಲಿ (1975ರಲ್ಲಿ) ಜೈಲು ಸೇರಬೇಕಾಯಿತು. ಆ ಸಮಯದಲ್ಲಿ ಪೋಲೀಸರು ಅವರನ್ನು ಅತ್ಯಂತ ಕ್ರೂರವಾಗಿ ಹಿಂಸಿಸುತ್ತಾರೆ. 1978ರಲ್ಲಿ ಆಗಿನ ಮದ್ರಾಸಿನಲ್ಲಿ ನಡೆದ ಅಖಿಲ ಭಾರತ ಪ್ರಜಾಸತ್ತಾತ್ಮಕ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಮಾವೇಶದಲ್ಲಿ ನಾನು ಗುಲಬರ್ಗಾದಿಂದ ಭಾಗವಹಿಸಿದ್ದೆ. ಅಂದು ವೇದಿಕೆಯಿಂದ ಮಾತನಾಡಿದ ಗೌರಿಯಮ್ಮ ತಮ್ಮ ಜೈಲುವಾಸ, ಹೋರಾಟಗಳ ಬಗ್ಗೆ ಹೇಳುತ್ತಾ ಪೋಲೀಸ್ ದೌರ್ಜನ್ಯದ ಬಗ್ಗೆ ಹೀಗೆ ಹೇಳುತ್ತಾರೆ: “ಪೋಲೀಸರು ನನ್ನನ್ನು ಬಹಳ ಕ್ರೂರವಾಗಿ ಹಿಂಸಿಸಿದರು ಮತ್ತು ನನ್ನ ಖಾಸಗಿ ಭಾಗಗಳಲ್ಲಿ ಲಾಠಿ ಕೂಡ ಸೇರಿಸುತ್ತಿದ್ದರು. ಆ ಲಾಠಿಗಳು ವೀರ್ಯವನ್ನು ಹೊಂದಿದ್ದರೆ, ನಾನು ಸಾವಿರ ಲಾಠಿ ಶಿಶುಗಳಿಗೆ ಜನ್ಮ ನೀಡುತ್ತಿದ್ದೆ” ಎಂದು ಅವರು ಹೇಳಿದಾಗ ನನ್ನ ಮೈ ಜುಂ ಎಂದಿತ್ತು. ಆಗಿನ್ನೂ ಕಾಲೇಜು ಓದುತ್ತಿದ್ದ ನಮಗೆ ಗೌರಿಯಮ್ಮನ ಮಾತುಗಳು ಮನಸಿಗೆ ನಾಟಿದವು. ಅದೆಂತಹ ದಿಟ್ಟ ಹೋರಾಟದ ನಿಲುವು ಸಂಗಾತಿಯದು. ಅಂದಿನಿಂದಲೂ ನಾನು ಗೌರಿಯಮ್ಮನ ಆದರ್ಶ, ಗುರಿಗಳನ್ನು, ಹೋರಾಟದ ಕೆಚ್ಚು, ಕಾರ್ಯಗಳನ್ನು ಗಮನಿಸುತ್ತಲೇ ಬೆಳೆದಿರುವೆ.

ಬಾಲ್ಯದಲ್ಲಿ ಗೌರಿಯಮ್ಮ

ಇವರು ಒಂದು ಶ್ರೀಮಂತ ಹಿಂದು ಕುಟುಂಬದಲ್ಲಿ ಹುಟ್ಟಿದವರು. ಜುಲೈ 14, 1919ರಲ್ಲಿ ಕೇರಳದ ಆಲಪ್ಪುಳ ಜಿಲ್ಲೆಯ ಪಟ್ಟನಕ್ಕಾಡ್ ಗ್ರಾಮದಲ್ಲಿ ಕೆ.ಎ.ರಮಣನ್ ಮತ್ತು ಪಾರ್ವತಿ ಅಮ್ಮಾ ದಂಪತಿಗಳಿಗೆ ಏಳನೆಯ ಮಗಳಾಗಿ ಜನಿಸಿದವರು. ಆ ಸಮಯದಲ್ಲಿ ಇವರ ಕುಟುಂಬಕ್ಕೆ ಸುಮಾರು 132 ಎಕರೆಗೂ ಹೆಚ್ಚು ಜಮೀನುಗಳಿದ್ದವು. ಅವರ ಹಿರಿಯ ಸಹೊದರ ಕೆ.ಆರ್.ಸುಕುಮಾರನ್ ಅವರು ಟ್ರೇಡ್ ಯೂನಿಯನ್ ನಾಯಕರಾಗಿದ್ದರು. ಅವರು ಗೌರಿಯುವರು ಸಾರ್ವಜನಿಕ ಜೀವನಕ್ಕೆ ಪ್ರವೇಶ ಪಡೆಯಲು ಕಾರಣರಾದರು.

ಅವರು ತಮ್ಮ ಹೈಯರ್ ಸೆಕೆಂಡರಿ ಶಾಲೆಯನ್ನು ಕಂಡಂಮಂಗಲಂ, ತಿರುಮಲ ದೇವಸ್ವಂ ಹೈಯರ್ ಸೆಕೆಂಡರಿ ಶಾಲೆಯಲ್ಲಿಯೂ ಹಾಗೂ ಎರ್ನಾಕುಲಂನ ಮಹಾರಾಜ ಕಾಲೇಜಿನಿಂದ ಮತ್ತು ಸೇಂಟ್ ತೆರೇಸಾ ಕಾಲೇಜು, ಎರ್ನಾಕುಲಂನಿಂದ ಪದವಿಯನ್ನು ಪಡೆದರು. ಅನಂತರದಲ್ಲಿ ತಿರುವನಂತಪುರಂನ ಸರ್ಕಾರಿ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದ ನಂತರವೇ ಅವರು ರಾಜಕಾರಣಕ್ಕೆ ಧುಮುಕಿದರು. ಆಗಿನ ಕಾಲದಲ್ಲಿ ಗೌರಿಯವರ ಈಳವಾ (ಈಡಿಗ) ಸಮುದಾಯದಲ್ಲಿ ಮಹಿಳೆಯರು ಉನ್ನತ ಶಿಕ್ಷಣ ಪಡೆಯುವುದು ಮತ್ತು ರಾಜಕೀಯವನ್ನು ಪ್ರವೇಶಿಸುವುದು ಆಕ್ಷೇಪಾರ್ಹವಾಗಿತ್ತು. ಕೆಳಜಾತಿಯ ಹುಡುಗಿಯರು ಶಾಲೆಯ ಮುಖವನ್ನೇ ನೋಡುತ್ತಿರಲಿಲ್ಲ. ಗೌರಿಯವರು ಈಳವಾ ಸಮುದಾಯದಿಂದ ಬಂದು ಕಾನೂನು ಪದವಿ ಪಡೆದ ಮೊಟ್ಟ ಮೊದಲ ಮಹಿಳೆ ಆಗಿದ್ದರು.

ಸಂಪ್ರದಾಯವಾದಿ ಸಮಾಜವು ಮಹಿಳೆಯರಿಗೆ ಉನ್ನತ ಶಿಕ್ಷಣ, ರಾಜಕೀಯ ಪ್ರವೇಶವನ್ನು ನಿಷೇಧಿಸಿದ್ದ ಕಾಲ ಅದಾಗಿತ್ತು. ಆದರೂ ಅಮ್ಮನವರ ತಂದೆಯವರು ತಮ್ಮ ಜೀವನದುದ್ದಕ್ಕೂ ಮಗಳಿಗೆ ಪ್ರೇರಣೆಯಾಗಿದ್ದರು. ಮುಂದೆ ಗೌರಿಯವರು ತಮ್ಮ 132 ಎಕರೆ ಜಮೀನನ್ನು ಕೇರಳ ಸರ್ಕಾರಕ್ಕೆ ನೀಡಿದರು. ಅಮ್ಮನವರ ಕಾರಣದಿಂದ ದಕ್ಷಿಣದ ರಾಜ್ಯದಲ್ಲಿ ರಾಜಕೀಯ ಬದಲಾವಣೆಯ ಚಂಡಮಾರುತ ಬೀಸುವುದಕ್ಕೆ ಆರಂಭವಾಯಿತು.


ಕೇರಳದ ಮೊದಲ ಸ್ತ್ರೀವಾದಿ

“ಮಹಿಳೆಯರ ಸಬಲೀಕರಣಕ್ಕಾಗಿ ನನ್ನ ಕೊನೆಯ ಉಸಿರಿನವರೆಗೂ ನಾನು ಧ್ವನಿ ಎತ್ತುತ್ತೇನೆ”ಎಂದು ಕೇರಳದ ಈ ಮಹಾನ್ ಮಹಿಳಾ ನಾಯಕಿ ಹೇಳುತ್ತಿದ್ದರು. ಎಲ್ಲಾ ವಯಸ್ಸಿನ ಮಹಿಳೆಯರಿಗೆ ಶಬರಿಮಲೈಗೆ ಪ್ರವೇಶಿಸಲು ಅನುಮತಿ ನೀಡುವ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಲಿಂಗ ಸಮಾನತೆಗಾಗಿ “ಮಹಿಳಾ ಗೋಡೆ”ಗೆ ಮತ್ತು 2019ರ ಜನವರಿಯಲ್ಲಿ ನವೋದಯ ಮೌಲ್ಯಗಳನ್ನು ರಕ್ಷಿಸಲು ಬೆಂಬಲವನ್ನು ಘೋಷಿಸಿದವರಲ್ಲಿ ಅವರು ಮೊಟ್ಟ ಮೊದಲಿಗರು. 2019ರ ಜೂನ್ ತಿಂಗಳಲ್ಲಿ ಆಲಪ್ಪುಳದಲ್ಲಿ ನಡೆದ ಅವರ 100ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ತನ್ನ ಕಥೆಯನ್ನು ಹೇಳುತ್ತ “ನಾನು ಇನ್ನೊಂದು ಜನ್ಮದಿನವನ್ನು

ಪುಟ 10 ನೋಡಿ



ಕೋವಿಡ್–19 ಎರಡನೆಯ ಅಲೆ – ಹಲವು ಪ್ರಶ್ನೆಗಳು



ಕೋವಿಡ್ ನ ಎರಡನೆಯ ಅಲೆ ದೇಶದಲ್ಲಿ ಹಾಹಾಕಾರ ಎಬ್ಬಿಸಿದ್ದು, ಇದರಿಂದ ಭಯಭೀತರಾದ ಜನರಲ್ಲಿ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಈ ಪ್ರಶ್ನೆಗಳಿಗೆ ದೀರ್ಘ ಕಾಲ ಕರ್ನಾಟಕದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸದ ಅಪಾರ ಅನುಭವವಿರುವ ಹಿರಿಯ ವೈದ್ಯರಾದ ಡಾ.ಕೆ. ಸುಶೀಲಾ ಈ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.

1. ಎರಡನೆಯ ಅಲೆ ಎಂದರೇನು ? ಇದು ಬರಿಯ ಅಂಕೆಸಂಖ್ಯೆಯ ಏರು–ಪೇರು ಮಾತ್ರವೇ? ಅಥವಾ ಇದಕ್ಕೆ ವೈಜ್ಞಾನಿಕ ಆಧಾರಗಳಿವೆಯೇ?

ಯಾವುದೇ ಸೋಂಕು ಪ್ರಾರಂಭದಲ್ಲಿ ಕೆಲವೇ ಜನರಲ್ಲಿ ಕಾಣಿಸಿಕೊಂಡು ಮೆಲ್ಲಗೆ ತನ್ನ ರೋಗಿಗಳ ನೇರ, ಪರೋಕ್ಷ ಸಂಪರ್ಕಕ್ಕೆ ಬರುವ ಇತರರಲ್ಲಿ ಹರಡುತ್ತದೆ. ದಿನ ಕಳೆದಂತೆ ರೋಗಿಗಳ ಸಂಖ್ಯೆ ಜಾಸ್ತಿಯಾದಂತೆ ಈ ಸೋಂಕು ಸಮಾಜದ ಜನರಲ್ಲಿ ಹರಡುವ ವೇಗ ಹೆಚ್ಚುತ್ತದೆ.

ಅದಾಗಲೇ ಸೋಂಕು ಇಲ್ಲದವರ ದೇಹದಲ್ಲಿನ ಉತ್ಪತ್ತಿಯಾಗುವ ರೋಗ ನಿರೋಧಕ ಶಕ್ತಿ ಹಾಗೂ ರೋಗ ತಡೆಗಟ್ಟುವ ವಿಧಾನಗಳ ತುರ್ತು ಅನುಷ್ಟಾನಗಳಿಂದ ರೋಗದ ಮೇಲ್ಮುಖ ಓಟಕ್ಕೆ ತಡೆ ಉಂಟಾಗುತ್ತದೆ. ಪರಿಸ್ಥಿತಿಗೆ ಹೊಂದಿಕೊಂಡು ಸ್ವಲ್ಪ ಕಾಲದ ತನಕ ಈ ಸೋಂಕಿನ ಪ್ರಮಾಣ ಒಂದೇ ಮಟ್ಟದಲ್ಲಿ ಇರುತ್ತದೆ. ಮುಂದಿನ ದಿನಗಳಲ್ಲಿ ಸೋಂಕು ಹರಡುವ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ. ಆದರೆ ಈ ಸೋಂಕು ಸಮಾಜದಿಂದ ನಿರ್ಮೂಲನಗೊಳ್ಳದು. ಈ ಕ್ರಿಯೆಯನ್ನು ಚಿತ್ರದ ಮೂಲಕ ನೋಡಿದಾಗ ಇದು ಅಲೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಕೆಲ ಕಾಲದ ನಂತರ–ಜನರು ರೋಗ ತಡೆಗಟ್ಟುವ ವಿಧಾನಗಳ ಅನುಷ್ಟಾನಗಳನ್ನು ನಿರ್ಲಕ್ಷಿಸಿದಾಗ, ಜನರಲ್ಲಿ ರೋಗ ನಿರೋಧಕ ಶಕ್ತಿ ಕುಸಿದಾಗ ತನ್ನ ಹರಡುವಿಕೆಗೆ ಬೇಕಾದ ಸೂಕ್ತ ಪರಿಸರ ದೊರೆತಾಗ ಅಥವಾ ಹಳೆಯ ರೋಗಾಣುವಿನ ಮುಂದಿನ ಪೀಳಿಗೆಯಲ್ಲಿ ಹುಟ್ಟಿಕೊಂಡ 'ರೂಪಾಂತರ' ಪೀಳಿಗೆ ಪ್ರಬಲವಾದಾಗ – ಅಂದರೆ ತನ್ನ ಮರು ದಾಳಿಗೆ ಸೂಕ್ತ ಪರಿಸ್ಥಿತಿ ನಿರ್ಮಿತವಾದಾಗ ಇನ್ನೊಮ್ಮೆ ಜನರಲ್ಲಿ ಶೀಘ್ರವಾಗಿ ಹರಡಿ, ಮೊದಲ ಅಲೆಯಂತೆಯೇ ಮುಂದಿನ ಅಲೆಗಳನ್ನು ನಿರ್ಮಿಸುತ್ತದೆ.

ಎಲ್ಲಿಯ ತನಕ ತಡೆಗಟ್ಟುವ ಸೂಕ್ತ ಕ್ರಮಗಳ ಪರಿಣಾಮಕಾರೀ ಅನುಷ್ಟಾನದ ಮುಂದಿನ ಕಾಲದಲ್ಲಿ ಈ ಸೋಂಕು ಸಾಮೂಹಿಕ ಆರೋಗ್ಯದ ಮಟ್ಟ ಮೇಲೆ ದುಷ್ಪರಿಣಾಮ ಬೀರಲು ಸಾಧ್ಯವಾಗದ 'ಹತೋಟಿ'ಯ ಹಂತಕ್ಕೆ ಒಳಗಾಗುವುದಿಲ್ಲವೋ ಅಲ್ಲಿಯ ತನಕ ಈ ಸೋಂಕು ಕಾಲಕಾಲಕ್ಕೆ ಅಲೆಗಳ ರೂಪದಲ್ಲಿ ಸಮಾಜದಲ್ಲಿ ಕಾಣಿಸಿಕೊಳ್ಳುವುದು. ಪರಿಸ್ಥಿತಿಗೆ ಅನುಗುಣವಾಗಿ ಈ ಅಲೆಗಳು ಬಹಳ ಪ್ರಬಲವಾಗಿದ್ದು ಸಮಾಜದಲ್ಲಿ ಅಪಾರ ನಾವು ನೋವಿಗೆ ಕಾರಣವಾಗಬಹುದು. ಕೆಲವೊಮ್ಮೆ ಸ್ವಲ್ಪ ದುರ್ಬಲವಾಗಿದ್ದು ಅಲೆಗಳ ನಡುವೆ ಅಂತರ ಹೆಚ್ಚಿರಬಹುದು. ಒಮ್ಮೆ ಸೋಂಕು ಹತೋಟಿಗೆ ಬಂದ ಮೇಲೆ ಅದು ಸಮಾಜದಿಂದ ಮಾಯವಾಗದಿದ್ದರೂ, ಪರಿಸ್ಥಿತಿಗನುಗುಣವಾಗಿ ಬಹಳ ಕಾಲದ ಅಂತರದಲ್ಲಿ, ಅತೀ ದುರ್ಬಲ ಹಾಗು ಚಿಕ್ಕ ಅಲೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಆದರೆ ಇದು ಸಮಾಜದಲ್ಲಿ ಹೆಚ್ಚಿನ ದುಷ್ಪರಿಣಾಮ ಬೀರಲಾರದು. ಸೋಂಕಿನ ನಿರ್ಮೂಲನದಿಂದ ಮಾತ್ರ ಅಲೆಗಳ ಶಾಶ್ವತ ನಿರ್ಮೂಲನೆ ಸಾಧ್ಯ. ಇಲ್ಲಿಯ ತನಕ, ಪ್ರಪಂಚಕ್ಕೆ ಹೆಮ್ಮಾರಿಯಾಗಿ ಕಾಡಿದ್ದ 'ಸಿಡುಬು' ಮಾತ್ರ ನಿರ್ಮೂಲನೆಗೊಳಗಾದ ಸೋಂಕು ಕಾಯಿಲೆ.

2. ಎರಡನೆಯ ಅಲೆ ರೂಪಾಂತರಗೊಂಡ ವೈರಸ್ ನಿಂದಾಗಿ ಬರುತ್ತಿದೆ ಅಂತಾರೆ. ಏನಿದು ರೂಪಾಂತರಗೊಂಡ ವೈರಸ್?

2019 ರಲ್ಲಿ ಪ್ರಥಮ ಬಾರಿಗೆ ಪ್ರಪಂಚ ಬಾರಿಗೆ ಪ್ರಪಂಚ ಪ್ರವೇಶಿಸಿದ ಕೋವಿಡ್–19 ಸೋಂಕುರೋಗ ಭಾರತದಲ್ಲಿ ತನ್ನ ಮೊದಲ ಅಲೆಯನ್ನು ಪೂರೈಸಿ 2 ನೇ ಅಲೆಯ ರೂಪದಲ್ಲಿ ಬಂದು ದೇಶವನ್ನು ಅಪಾರ ಸಂಕಷ್ಟಕ್ಕೀಡು ಮಾಡುತ್ತಿದೆ.

ಮೊದಲನೆಯ ಅಲೆಯಲ್ಲಿ ಕೋವಿಡ್–19 ಸೋಂಕಿಗೆ ಕಾರಣೀಭೂತವಾದ ವೈರಸ್‌ನೊಂದಿಗೆ ಈ ಅಲೆಯ ಸೋಂಕಿಗೆ ಕೆಲವು ರೂಪಾಂತರಗಳೂ ಸೇರಿಕೊಂಡಿವೆ.

ಪ್ರತೀ ಜೀವಿಯೂ ವಂಶಾಭಿವೃದ್ಧಿಗೆ ಒಳಗಾಗಿ ಅವುಗಳ ಸಂಖ್ಯೆ ಏರಿದಂತೆ, ನಡುನಡುವೆ ಕೆಲವೊಂದರ ವಂಶವಾಹಿನಿಯ ಡಿ.ಎಸ್.ಐ.ಗಳಲ್ಲಿ ಬದಲಾವಣೆಗಳಾಗಿ ಅದು ಅವುಗಳ ಮುಂದಿನ ಪೀಳಿಗೆಗೆ ರವಾನಿಸಲ್ಪಡುತ್ತದೆ. ಈ ಬದಲಾವಣೆಗಳಿಗೆ ಒಳಗಾದ ಪೀಳಿಗೆಗಳ ಗುಣಲಕ್ಷಣದಲ್ಲೂ ಅಲ್ಪ ಬದಲಾವಣೆಗೊಳಗಾದ ಪೀಳಿಗೆಗಳಿಗೆ 'ರೂಪಾಂತರಿ'ಗಳೆಂದು ತೆರೆಯುತ್ತಾರೆ. ಅದೇ ರೀತಿ ಸಾರ್ಸ್–ಕೋವ್–2 ವೈರಸ್‌ನ ಪೀಳಿಗೆಗಳೂ ಕೆಲವು ಬದಲಾವಣೆಗಳಿಗೆ ಒಳಪಟ್ಟಿವೆ ಮತ್ತು ಇವುಗಳ ಬದಲಾದ ಗುಣಲಕ್ಷಣಗಳ ತೀವ್ರತೆಗನುಗುಣವಾಗಿ ಇವುಗಳಿಂದ ಸೋಂಕಿತಗೊಂಡ ರೋಗಿಗಳ ರೋಗದ ಗುಣಲಕ್ಷಣ ಹಾಗೂ ತೀವ್ರತೆಗಳಲ್ಲಿ ಬದಲಾವಣೆಗಳಾಗಬಹುದು.

3. ಎರಡನೆಯ ಅಲೆಯಲ್ಲಿ ರೋಗ ವೇಗವಾಗಿ ಹರಡುವ, ಯುವಜನರಲ್ಲೂ ಬಾಧಿಸುವ ಮತ್ತು ಸಾವಿನ ಸಾಧ್ಯತೆ ಹೆಚ್ಚಾಗಿದೆಯೇ?

ನಮ್ಮ ದೇಶದ 2ನೇ ಅಲೆಯ ಸೋಂಕಿಗೂ ಕೂಡಾ ಕೆಲವು ರೂಪಾಂತರಗಳು ಕಾರಣವಾದರೂ ಇವುಗಳಲ್ಲಿ ಪ್ರಮುಖವಾದವು–ಯು.ಕೆ. (ಬಿ.1.1.7) ಹಾಗೂ ಭಾರತದಲ್ಲಿ ಕಾಣಿಸಿಕೊಂಡ ಡಬಲ್ ಮ್ಯುಟೆಂಟ್ (ಬಿ.1.167) ಇವು ದೇಶದ ಹಲವು ರಾಜ್ಯಗಳ ಸೋಂಕಿನಲ್ಲಿ, ಮಹತ್ವದ ಪಾತ್ರ ವಹಿಸುತ್ತಿವೆ. ಇವುಗಳು

(1) ಮೂಲ ವೈರಸ್‌ಗಿಂತ ಹೆಚ್ಚು ಶೀಘ್ರವಾಗಿ ಹರಡಬಲ್ಲವು.

(2) ಹಾಗಾಗಿ ಸೋಂಕಿತರ ಸಂಖ್ಯೆ ಹೆಚ್ಚು.

(3) ಇವುಗಳು ಚಿಕ್ಕ ಪ್ರಾಯದವರಲ್ಲಿ ಹರಡುವ ಪ್ರಮಾಣ ಹೆಚ್ಚು.

(4) ಆದರೆ ರೋಗದಿಂದ ಗುಣಮುಖರಾಗಲು ಬೇಕಾದ ಸಮಯ ಕಡಿಮೆ.

ಆದರೆ ಈ ವೈರಸ್‌ಗಳು ಸಾವಿನ ಪ್ರಮಾಣದ ಹೆಚ್ಚಳಕ್ಕೆ ಕಾರಣವೆ? ಎನ್ನುವುದಕ್ಕೆ ಸರಿಯಾದ ಮಾಹಿತಿ ಸಿಕ್ಕಿಲ್ಲ. ಆದರೆ ರೋಗಿಗಳ ಸಂಖ್ಯೆ ಏರಿದಂತೆ ಹಾಗೂ ಸರಿಯಾದ ಚಿಕಿತ್ಸೆಯ ಕೊರತೆಯಾದಾಗ ಒಟ್ಟು ಸಾವಿನ ಸಂಖ್ಯೆ ಏರುವುದು ಸಹಜ. ಈ ಅಲೆಯಲ್ಲಿ ಯಾವುದೇ ಧೀರ್ಘಕಾಲಿಕ ಕಾಯಿಲೆಗಳಿಲ್ಲದ ಕೋವಿಡ್–19 ರೋಗಿಗಳ ಸಾವಿರ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವುದು ಕಂಡು ಬಂದಿದೆ. ಇಲ್ಲಿಯ ತನಕದ ಮಾಹಿತಿಯಂತೆ ಇವುಗಳ ಲಸಿಕೆಗೆ ಪ್ರತಿರೋಧ ತೋರಿಸುತ್ತಿಲ್ಲ.

4. ಎರಡನೆಯ ಅಲೆಯಲ್ಲಿ ರೋಗಲಕ್ಷಣಗಳಲ್ಲಿ ವ್ಯತ್ಯಾಸವಿದೆಯೆ?

ಮೊದಲ ಅಲೆಯ ರೋಗಿಗಳಲ್ಲಿ ಕಂಡುಬರುವ ಎಲ್ಲಾ ಗುಣಲಕ್ಷಣಗಳು ಈ ಅಲೆಯಲ್ಲೂ ಕಂಡು ಬರುತ್ತಿವೆ. ಆದರೆ ಆ ಗುಣಲಕ್ಷಣಗಳ ತೀವ್ರತೆಯಲ್ಲಿ ಹೆಚ್ಚು ಕಡಿಮೆ ಕಂಡು ಬರುತ್ತಿದೆ. ಅದರೊಂದಿಗೆ ಇತರ ಕೆಲವು ಹೊಸ ಲಕ್ಷಣಗಳೂ ಕಾಣಿಸಿಕೊಳ್ಳುತ್ತಿದೆ.

ಅ) ಹಿಂದಿನ ಅಲೆಯಂತೆ ಈ ಅಲೆಯಲ್ಲೂ ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿದೆ. ಆದರೆ ಇದು ಹೆಚ್ಚಿನ ತೀವ್ರತೆಯೊಂದಿಗೆ, ರೋಗದ ಪ್ರಾರಂಭಿಕ ಹಂತದಲ್ಲಿ ಹೆಚ್ಚಿದ ಪ್ರಮಾಣದ ರೋಗಿಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಹಾಗಾಗಿ ರೋಗಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕದ ಕೊರತೆಗೆ ಕಾರಣವಾಗಿದೆ. ಆಮ್ಲಜನಕದ ಉಪಯೋಗದ ಅವಶ್ಯಕತೆ ಈ ಅಲೆಯಲ್ಲಿ ಏರಿಕೆಯಾಗಿದೆ.

ಆ) ಹಸಿವಿಲ್ಲದಿರುವಿಕೆ, ವಾಂತಿ, ಭೇಧಿ, ಹೊಟ್ಟೆನೋವು ಮೊದಲಾದ ಜೀರ್ಣಾಂಗದ ತೊಂದರೆಗಳ ಪ್ರಮಾಣ ಹೆಚ್ಚಿದೆ. ಭೇಧಿ ಸೋಂಕಿನ ಪ್ರಾರಂಭದ ಲಕ್ಷಣವಾಗಿರುವ ಪ್ರಮಾಣ.

ಇ) ಕಿವಿಯಲ್ಲಿ ಗುಂಯ್‌ಗುಡುವ ಸದ್ದು ಹಾಗೂ ಅಲ್ಪ, ಮಧ್ಯಮ ಮತ್ತು ತೀವ್ರತರದ ಕಿವುಡುತನ ಕಾಯಿಲೆಯ ಮೊದಲ ವಾರದಲ್ಲಿ ಧಿಢೀರನೆ ಕಾಣಿಸಿಕೊಳ್ಳಬಹುದು.





ಈ) ತುರಿಕೆ, ನೀರು ಸುರಿಯುವುದರೊಂದಿಗೆ ಕಣ್ಣು ಊದಿಕೊಂಡು ಕೆಂಬಣ್ಣಕ್ಕೆ ತಿರುಗಬಹುದು. ಒಂದೇ ಕಣ್ಣು ಹೆಚ್ಚಾಗಿ ಈ ತೊಂದರೆಗೆ ಒಳಗಾಗುವುದು ಇಲ್ಲಿ ಸಾಮಾನ್ಯ ಲಕ್ಷಣ.

ಎ) ತೀವ್ರ ಆಯಾಸ, ನಿಶ್ಯಕ್ತಿ ಕೋವಿಡ್ ಸೋಂಕಿನ ಪ್ರಥಮ ಚಿಹ್ನೆಯಾಗಿರಬಹುದು.

ಏ) ಬಾಯಿ, ನಾಲಗೆ ಒಣಗುವುದು, ನಾಲಗೆಯ ಬಣ್ಣ ಬದಲಾಗುವುದು. ಬಾಯಲ್ಲಿ ಹುಣ್ಣುಗಳಾಗುವುದು.

ಉ) ಧಿಡೀರನೆ ಕಾಣಿಸಿಕೊಂಡು ಎಡೆಬಿಡದೆ ಕಾಡುವ ನೋವು ಶಮನಕಗಳಿಂದಲೂ ಕಡಿಮೆಯಾಗದ ತಲೆನೋವು ಈ ಅಲೆಯ ಸೋಂಕಿನಲ್ಲಿ ಕಾಣಿಸಿಕೊಳ್ಳುತ್ತಿದೆ.

ಹಾಗಾಗಿ ರೋಗದ ಯಾವುದೇ ಗುಣ ಲಕ್ಷಣ ಕಾಣಿಸಿ ಒಂದೆರಡು ದಿನಗಳೊಳಗೆ ಹಾಗೂ ಯಾವುದೇ ಕೋವಿಡ್ ರೋಗಿಯ ಸಂಪರ್ಕಕ್ಕೆ ಬಂದ ನಾಲ್ಕು ದಿನಗಳ ನಂತರ ಕೋವಿಡ್–19 ರ ಪತ್ತೆಗಾಗಿ ಪರೀಕ್ಷೆಗೊಳಪಡುವುದು ಸೂಕ್ತ.

5. ಎರಡನೆಯ ಅಲೆಯಲ್ಲಿ ರೋಗಲಕ್ಷಣಗಳಿದ್ದರೂ ಟೆಸ್ಟಿಂಗ್ ನೆಗೆಟಿವ್ ಬರುತ್ತಿರುವರ ಸಂಖ್ಯೆ ಹೆಚ್ಚಾಗಿದೆಯೇ? ಏಕೆ?

ಮೂಗು ಬಾಯಿಗಳ ದ್ರವವನ್ನು ತೆಗೆದು ಪರೀಕ್ಷೆಗೊಳಪಡಿಸುವ 'ಆರ್.ಟಿ.–ಪಿಸಿಆರ್' ಕಾಯಿಲೆಯ ಇರುವಿಕೆಯನ್ನು ಶೇಕಡಾ 70 ರಿಂದ 80 ಪ್ರಮಾಣ ನಿಖರವಾಗಿ ತಿಳಿಸಿದರೆ, 'ರ್‍ಯಾಟ್' (ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್) 40–50 ಶೇಖಡಾ ನಿಖರವಾಗಿ ತಿಳಿಸಬಲ್ಲದು.

ಕೋವಿಡ್ ರೋಗಿಗಳ ಸಂಪರ್ಕಕ್ಕೆ ಬಂದು ನಾಲ್ಕು ದಿನದೊಳಗೆ ಪರೀಕ್ಷೆಯ ಮಾದರಿ (ಸ್ಯಾಂಪಲ್) ತೆಗೆದರೆ, ಮಾದರಿ ತೆಗೆಯುವ ವಿಧಾನದಲ್ಲಿ ವ್ಯತ್ಯಯವಾದರೆ ಹಾಗೂ ಮಾದರಿ ತೆಗೆದು ಅದನ್ನು ಪರೀಕ್ಷಿಸುವ ಸಮಯದ ಅಂತರ ಹೆಚ್ಚಿದ್ದು ಆ ಸಮಯದಲ್ಲಿ ಮಾದರಿಯಲ್ಲಿ ಕಾಪಾಡುವಿಕೆಯಲ್ಲಿ ವ್ಯತ್ಯಯವಾದರೆ ಈ ಪರೀಕ್ಷೆಗಳು ತಪ್ಪಾಗಿ ನೆಗೆಟಿವ್ ಫಲಿತಾಂಶ ಕೊಡಬಹುದು ಆದರೆ ರೂಪಾಂತರಿಗಳಿಂದಾಗಿ ಮಾದರಿಯ ಪರೀಕ್ಷೆಯಲ್ಲಿ ನೆಗೆಟಿವ್ ಬರುತ್ತಿರುವ ಬಗ್ಗೆ ನಿಖರವಾದ ಮಾಹಿತಿ ಸಿಕ್ಕಿಲ್ಲ.

6. ಎರಡನೆಯ ಅಲೆಯಲ್ಲಿ ರೋಗ ಚಿಕಿತ್ಸೆಯ ವಿಧಾನದಲ್ಲಿ ಬದಲಾವಣೆಯಿದೆಯೇ? ಬದಲಾವಣೆ ಬೇಕೆ?

ಯಾವುದೇ ವ್ಯಕ್ತಿ ತನ್ನ ಕೋವಿಡ್–19ರ ಪರೀಕ್ಷೆ ಫಲಿತಾಂಶ 'ಪೊಸಿಟಿವ್' ಬಂದರೆ ಗಾಬರಿಯಾಗಬೇಕಿಲ್ಲ. ರೋಗ ಖಾತರಿಯಾದ ಪ್ರತಿಶತ 94 ಜನರಲ್ಲಿ ಇದು ಬೇರೆ 'ಸೀತ ಜ್ವರ'ದಂತೆ ಹೆಚ್ಚಿನ ತೊಂದರೆ ನೀಡದೆ ಐದಾರು ದಿನಗಳಲ್ಲಿ ಗುಣವಾಗುವ ಕಾಯಿಲೆ ಜ್ವರ, ಮೈಕೈನೋವು, ಗಂಟಲು ನೋವು, ಕೆಮ್ಮು, ನೆಗಡಿಗೆ ಪ್ಯಾರಸಿಟಮೇಲ್, ಆ್ಯಂಟಿ ಅಲರ್ಜಿಯ ಮಾತ್ರೆ, ತೆಗೆದುಕೊಳ್ಳುವುದು, ಕೆಲವು ಸಿರಪುದ್ರವ, ಮನೆ ಮದ್ದುಗಳ ಉಪಯೋಗ ಸಮರ್ಪಕ.

ಈ ಕಾಯಿಲೆ ವೈರಲ್ ರೋಗಾಣುವಿನಿಂದ ಬರುವುದು. ಯಾವುದೇ ಆ್ಯಂಟಿಬಯೋಟಿಕ್ ಈ ವೈರಲ್‌ಗಳನ್ನು ನಾಶಮಾಡುವ ಗುಣವನ್ನು ಹೊಂದಿಲ್ಲ. ಹಾಗಾಗಿ ಅನಾವಶ್ಯಕಾವಾದ ಆ್ಯಂಟಿಬಯಾಟಿಕ್‌ಗಳ ಉಪಯೋಗ ರೋಗಿಯಲ್ಲಿ ಅಡ್ಡಪರಿಣಾಮಕ್ಕೆ

ಪುಟ 10 ಕ್ಕೆ

ಕೋವಿಡ್ – 19 ಎರಡನೆಯ ಅಲೆ – ಹಲವು ಪ್ರಶ್ನೆಗಳು.......

ಪುಟ 9 ರಿಂದ

ಕಾರಣವಾಗಬಹುದು. ಇಂತಹ ಉಪಯೋಗಗಳಿಂದ ಈಗಾಗಲೇ ಹಲವು ರೋಗಾಣುಗಳು ಬಹಳಷ್ಟು ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡು ಹಲವು ಕಾಯಿಲೆಗಳ ಸಮರ್ಪಕ ಚಿಕಿತ್ಸೆಗೆ ದೊಡ್ಡ ದೊಡ್ಡ ಸವಾಲು ಒಡ್ಡುತ್ತಿವೆ.

ಆದರೆ ಮನೆಯಲ್ಲಿ ಚಿಕಿತ್ಸೆ ಪಡೆಯುವ ರೋಗಿ, ಕುಟುಂಬದ ಸೋಂಕುರಹಿತ ತನ್ನಿಂದ ಸೋಂಕು ತಗಲದಂತೆ ಇತರ ಸದಸ್ಯರಿಗೆ ತನ್ನನ್ನು ಸಂಪೂರ್ಣ ಬೇರ್ಪಡಿಸಿಕೊಳ್ಳಬೇಕಾದದ್ದು, ಮಾಸ್ಕ ಧರಿಸುವುದು ಅವಶ್ಯಕ. ತಮ್ಮ ವೈದ್ಯರ ನಿರಂತರ ಸಂಪರ್ಕದಲ್ಲಿದ್ದು ಅವರ ಸಲಹೆಯಂತೆ ಚಿಕಿತ್ಸೆ ಪಡೆಯುವುದು ಸೂಕ್ತ. ಕೊನೆಯಲ್ಲಿ ಕ್ರಮಪ್ರಚಾರ ರಕ್ತದಲ್ಲಿನ ಆಮ್ಲಜನಕದ ಒತ್ತಡ (ಎಸ್.ಲು. 02 ಲೆವೆಲ್), ಜ್ವರ, ನಾಡಿ ಬಡಿತಗಳನ್ನು ಪರೀಕ್ಷಿಸಿಕೊಳ್ಳುವುದು ಅಗತ್ಯ.

(1) ಎದೆ ಬಿಗಿತ, ಎದೆ ನೋವು ಉಸಿರಾಟದ ತೊಂದರೆ ಇದ್ದರೆ, ಆಕ್ಸಿಜನ್ ಮಟ್ಟ 94 ರ ಕ್ಕಿಂತ ಕೆಳಗಿಳಿದರೆ.

(2) 6–7 ದಿನಗಳಾದರೂ ಜ್ವರ ಮುಂದುವರಿಯುತ್ತಿದ್ದರೆ.

(3) ಥರ್ಮ ಬಿಳಿಚಿಕೊಂಡುಯೂ ನೀಲಿವರ್ಣಕ್ಕೆ ತಿರುಗಿದರೆ.

(4) ಕೆಮ್ಮು ಅತೀ ಹೆಚ್ಚಾದರೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಕೊಳ್ಳುವುದು ಅವಶ್ಯಕ, ಆಮ್ಲಜನಕ (ಆಕ್ಸಿಜನ್) ದ ಅವಶ್ಯಕತೆ ಯಾವಾಗ?

ದೇಹದ ಆಮ್ಲಜನಕದ ಮಟ್ಟ ಅಳೆಯಲಿರುವ ಸಾಧನ – ಫಿಂಗರ್‌ಟಿಪ್ & ಪಲ್ಸ್ ಒಕ್ಸಿಮೀಟರ್. ಇದನ್ನು ಉಪಯೋಗಿಸಿ ಕೈಗಳ ಯಾವುದೇ ಬೆರಳಿನಿಂದಲೂ 'ಒಕ್ಸಿಜನ್'ನ ಸಾಂದ್ರತೆ ಅಳೆಯಬಹುದು. ಆದರೆ ಆ ಬೆರಳು ತಣ್ಣಗಿರಬಾರದು, 'ನೈಲ್ ಪೋಲಿಷ್' ಹಚ್ಚಿರಬಾರದು, ಬೆರಳು ಅಲುಗಾಡುತ್ತಿರಬಾರದು ಹಾಗೂ ಉಪಕರಣ 'ಬ್ಯಾಟರಿ' ಸಮರ್ಪಕವಾಗಿರಬೇಕು.

ಆರೋಗ್ಯವಂತರಲ್ಲಿ ಒಕ್ಸಿಜನ್ ಮಟ್ಟ ಸಾಮಾನ್ಯವಾಗಿ 94 ರಿಂದ 100 ರ ನಡುವೆ ಇರುತ್ತದೆ. ಈ ಮಟ್ಟ 94 ಕ್ಕಿಂತ ಕೆಳಗೆ ಬಂದರೆ ಆಸ್ಪತ್ರೆಗೆ ಸೇರುವುದು ಒಳ್ಳೆಯದು. 92 ಕ್ಕಿಂತ ಈ ಮಟ್ಟ ಕೆಳಗೆ ಬಂದರೆ ಆಗ ಒಕ್ಸಿಜನ್ ಪ್ರಾರಂಭಿಸುವುದು ಸೂಕ್ತ. ಆದರೆ ಯಾವುದೇ ಕಾರಣಕ್ಕೆ ಆಸ್ಪತ್ರೆಗೆ ಸೇರುವುದು ಧೀಘ ಕಾಲ ತೆಗೆದರೆ ರೋಗಿ ತನ್ನ ಕೆಳಹೊಟ್ಟೆ ಮತ್ತು ಮೇಲ್ತೊಡೆಯ ಮಟ್ಟಕ್ಕೆ ಎರಡು, ಕಾಲು ಪಾದಕ್ಕಿಂತ ಮೇಲ್ಮಟ್ಟದಲ್ಲಿ ಒಂದು, ಎದೆಯ ಮೇಲ್ಭಾಗದ ಮಟ್ಟಕ್ಕೆ ಬರುವಂತೆ ಒಂದು ದಿಂಬನ್ನು ಇಟ್ಟು ಅದರ ಮೇಲೆ ಕವಚಿ ಮಲಗಿ ಅರ್ಧ ಗಂಟೆಯೂ ಅದಕ್ಕೂ ಹೆಚ್ಚು ಕಾಲ ಧೀರ್ಘ ಉಸಿರಾಟ ಪ್ರಾರಂಭಿಸುವುದರಿಂದ ಒಕಿಜನ್ ಏರುತ್ತದೆ. ಇನ್ನು ತಲೆಯ ಕೆಳಗೆ ಕೆಲವು ದಿಂಬುಗಳಿಟ್ಟು ಎಡ ಯಾ ಬಲ ಪಕ್ಕದಲ್ಲಿ ಮಲಗಿ ಧೀಘ ಉಸಿರಾಟವೂ ಇಲ್ಲಿ ಪ್ರಯೋಜನಕಾರಿ.ಹಾಗೂ ಕುಳಿತು ಧೀರ್ಘ ಉಸಿರಾಟದ ವ್ಯಾಯಮಗಳೂ ಪ್ರಯೋಜನಕಾರಿ.

ಮನೆಯಲ್ಲಿ ಒಕ್ಸಿಜನ್ ನೀಡಲು ವ್ಯವಸ್ಥೆ ಇದ್ದರೆ ನೀಡಬಹುದು. ಉಸಿರಾಟದ ತೊಂದರೆ ತೀವ್ರವಾಗಿದ್ದರೆ ಆಕ್ಸಿಜನ್ ಸಾಂದ್ರಯೆ 93 ಯೂ ಅದಕ್ಕಿಂತ ಕೆಳಗಿಳಿದರೆ ವೈದ್ಯರ ಸಲಹೆ ಪಡೆದು ಸೂಕ್ತ ಪ್ರಮಾಣದಲ್ಲಿ ಸ್ಟೀರೈಡ್ ಉಪಯೋಗ ಸೂಕ್ತ.

ಆದರೆ ಸ್ಟೀರೈಡ್ ದೇಹದ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವುದು. 'ಡಿ' ಆಗ ಈ ವೈರಸ್‌ನ ಬೆಳವಣಿಗೆಗೆ ಇದು ಸಹಕಾರಿಯಾಗುವುದು. ಹಾಗಾಗಿ ಕಾಯಿಲೆಯ ಪ್ರಥಮ ಹಂತದಲ್ಲಿ ವೈರಸ್‌ಗಳು ಶೀಘ್ರ ವಂಶಾಭಿವೃದ್ಧಿ ಮಾಡಿಕೊಳ್ಳುತ್ತಿರುವಾಗ ಅನಗತ್ಯ ಸ್ಥಿತಿಯಲ್ಲಿ ಸ್ಟೀರೈಡ್ ಉಪಯೋಗ ಆಪತ್ತಿಗೆ ಆಹ್ವಾನ ಕೊಟ್ಟಂತೆ ಉಸಿರಾಟದ ತೊಂದರೆ ಕಾಣಿಸಿಕೊಂಡು ಒಕಿಜನ್ ಮಟ್ಟ 94 ಕ್ಕಿಂತ ಕೆಳಗೆ ಕುಸಿದಾಗ ಇದರ ಉಪಯೋಗ ಸೂಕ್ತ. ಆದರೆ ಹೆಚ್ಚಾಗಿ ಕಾಯಿಲೆ ಪ್ರಾರಂಭವಾದ 6–7 ದಿನಗಳ ನಂತರ ರೋಗಿಯ ಪರಿಸ್ಥಿತಿ ಹೊಂದಿಕೊಂಡು ಇದರ ಉಪಯೋಗ ಉತ್ತಮ.

ರೋಗಿಯ ಒಕ್ಸಿಜನ್ ಮಟ್ಟ 95 ರಿಂದ 96 ರ ತನಕ ಇರಲು ಬೇಕಾದ ಸಾಂದ್ರತೆಯಲ್ಲಿ ಒಕ್ಸಿಜನ್ ನೀಡಬೇಕು. (ಧೀರ್ಘಕಾಲಿಕ ಶ್ವಾಸಕೋಶದ ಕಾಯಿಲೆಯಿಂದ ಬಳಲುವ ರೋಗಿಗಳಲ್ಲಿ ಒಕ್ಸಿಜನ್ ಮಟ್ಟ 93–94 ಇರುವುದರಿಂದ ಅದೇ ಮಟ್ಟ ಕಾಪಾಡಲು ಬೇಕಾದ ಒಕ್ಸಿಜನ್ ನೀಡಿದರೆ ಸಾಕು. ನಿಮಿಷಕ್ಕೆ 5 ಲೀಟರ್ ಒಕ್ಸಿಜನ್ ನಂತೆ ನೀಡಲು ಪ್ರಾರಂಭಿಸಿ, ರೋಗಿಯ ದೇಹದ ಒಕ್ಸಿಜನ್ ಮಟ್ಟ ಸಹಜ ಸ್ಥಿತಿಗೆ ಬರುವ ತನಕ ಒಕ್ಸಿಜನ್ ಸಾಂದ್ರತೆ ಹೆಚ್ಚಿಸುತ್ತ ಹೋಗಬೇಕಾಗುತ್ತದೆ. ಆದರೆ ನಿಮಿಷಕ್ಕೆ 15 ಲೀಟರ್ ಒಕ್ಸಿಜನ್ ನೀಡಿದರು ರೋಗಿಯ ದೇಹದಲ್ಲಿ ಇದರ ಸಾಂದ್ರತೆ ನಿರೀಕ್ಷಿತ ಮಟ್ಟ ಮುಟ್ಟದಿದ್ರೆ ಆಗ ಐ.ಸಿ.ಯು (ಇಂಟೆನ್ಸಿಸ್ ಕೇರ್ ಯುನಿಟ್) ಗೆ ರೋಗಿಯನ್ನು ಸ್ಥಳಾಂತರಿಸುವುದು ಅವಶ್ಯಕವಾಗುತ್ತದೆ. ನಿಮಿಷಕ್ಕೆ 25 ಲೀಟರ್ ತನಕ ಒಕ್ಸಿಜನ್‌ನ ಸಾಂದ್ರತೆ ಹೆಚ್ಚಿಸಬಹುದು.

7. ಕೊವಿದ್ ಚಿಕಿತ್ಸೆಯಲ್ಲಿ ರೆಮೆಡೆಸ್ವಿರ್ ಪರಿಣಾಮಕಾರಿಯೇ? ಕೊವಿದ್ ರೋಗಪರೀಕ್ಷೆಯಲ್ಲಿ ಸಿ.ಟಿ. ಸ್ಕ್ಯಾನ್ ನ ಪಾತ್ರವೇನು? ಈ ಕುರಿತು ಇರುವ ವಿವಾದವೇನು?

ಕೋವಿಡ್ ಕೆ–19 ರೋಗದ ಹೆಸರಿನೊಂದಿಗೆ ಅತ್ಯಂತ ಹೆಚ್ಚು ಕೇಳಿ ಬರುವ ಸಿ.ಟಿ. ಸ್ಕ್ಯಾನ್ ಹಾಗೂ ರೆಮ್‌ಡೆಸಿವಿರ್ ತಜ್ಞರ ಅಭಿಪ್ರಾಯದಂತೆ ಹಲವು ಪ್ರಾರಂಭಿಕ ಹಂತದಲ್ಲಿರುವ ಕೋವಿಡ್–19 ರ ರೋಗಿಗಳನ್ನು ಶ್ವಾಸಕೋಸದ ಸಿ.ಟಿ. ಸ್ಕ್ಯಾನ್‌ಗೆ ಒಳಪಡಿಸಿದಾಗ, ಶ್ವಾಸಕೋಶದಲ್ಲಿ ಈ ರೋಗಕ್ಕೆ ಸಂಬಂಧಿಸಿದ ಕಲೆಗಳು ಕಾಣಿಸಿಕೊಂಡಿಸದಸರು. ಆದರೆ ಇಂತಹ ರೋಗಿಗಳು ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲದೆ ಸಂಪೂರ್ಣ ಗುಣಮುಖರಾಗಿದ್ದರು. ಹಾಗಾಗಿ ಕೋವಿಡ್ ಇದೆ ಎಂದು ಪತ್ತೆಯಾದೊಡನೆ ಸಿ.ಟಿ. ಸ್ಕ್ಯಾನ್ ಮಾಡುವುದು ಸರಿಯಲ್ಲ.

- ಇದರಿಂದ ಶರೀರ, ಅತೀ ಹೆಚ್ಚಿನ ಪ್ರಮಾಣದಲ್ಲಿ ಅಪಾಯಕರವಾದ ರೇಡಿಯೆಷನ್‌ಗೆ ಒಳಗಾಗುತ್ತದೆ.
- ಇದು ದುಬಾರಿ.
- ಚಿಕ್ಕ ಪುಟ್ಟ ಊರುಗಳಲ್ಲಿ ಇದು ಲಭ್ಯವಿಲ್ಲ.

ಸೋಂಕು ಕಾಣಿಸಿದ 5–6 ದಿನಗಳಲ್ಲಿ, ಉಸಿರಾಟದ ತೊಂದರೆ ಕಾನಿಸಿಕೊಂಡರೆ ರೋಗಿಯನ್ನು ಈ ಸ್ಕ್ಯಾನ್‌ಗೆ ಒಳಪಡುವುದು ಉತ್ತಮ. ಎಕ್ಸ್–ರೇ– ಇದು ಸಿ.ಟಿ. ಸ್ಕ್ಯಾನ್‌ನಷ್ಟು ನಿಖರವಾಗಿ ಅಲ್ಲದಿದ್ದರೂ ಶ್ವಾಸಕೋಶಗಳಲ್ಲಿನ ಸೋಂಕು ಪತ್ತೆ ಹಚ್ಚುವಲ್ಲಿ ಸಹಕಾರಿ.

- ಇಲ್ಲಿ ದೇಹಕ್ಕೆ ಸಿಗುವ ರೇಡಿಯೇಷನ್ ಪ್ರಮಾಣ ಸಿ.ಟಿ. ಸ್ಕ್ಯಾನ್‌ಗಿಂತ ಬಹಳ ಕಡಿಮೆ.
- ಬಹಳ ಅಗ್ಗ.
- ಚಿಕ್ಕ ಪುಟ್ಟ ಪ್ರದೇಶಗಳಲ್ಲೂ ಈ ಸೌಲಭ್ಯ ಲಭ್ಯ.

ಇಂದು ಜನರು ಕೋವಿಡ್ ಕಾಯಿಲೆಗೆ ರಾಮಬಾಣವೆಂದು ಭಾವಿಸುವ ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟವಾಗುತ್ತಿರುವ ರೆಮ್‌ಡೆಸಿವಿರ್, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಹಲವು ತಜ್ಞರ ಪ್ರಕಾರ ಹೆಚ್ಚಿನ ಪ್ರಯೋಜನಕಾರಿಯಲ್ಲಿ. ಇದು ವೈರಸ್‌ಗಳ ನಾಸಕ ಔಷಧವಾದರೂ ಸಾರ್ಸ್–ಕೋವ್–2 ವೈರಸ್‌ಗಳ ಸಾರದಲ್ಲಿ ಹೆಚ್ಚು ಸಫಲವಾಗಿಲ್ಲ. ಇದರ ಉಪಯೋಗದಿಂದ ಏನಾದರು ಪ್ರಯೋಜನವಿದ್ದರೆ ಅದು ಈ ವೈರಸ್ಸ್ ರೋಗಿಗಳ ದೇಹದಲ್ಲಿ ಶ್ರೀಘ್ರಾವಧಿಯಲ್ಲಿ ವಂಶಾಭಿವೃದ್ಧಿಗೊಳ್ಳುವ ಪ್ರಥಮ ಹಂತ ಹಾಗೂ ದ್ವೀತಿಯ ಹಂತದಲ್ಲಿ. ಪ್ರಾರಂಭದಲ್ಲಿ ರೋಗಿಯ ದೇಹದಿಂದ ಸಾಮಾನ್ಯವಾಗಿ ಸಾಧಾರಣಾ 10 ದಿನಗಳಲ್ಲಿ ಈ ವೈರಸ್‌ಗಳು ಮಯಾವಾಗುವ್ಯದರಿಂದ ಕಾಯಿಲೆಯ 10 ದಿನಗಳಲ್ಲಿ ಈ ವೈರಸ್‌ಗಳು ಮಾಯವಾಗುವುದರಿಂದ ಕಾಯಿಲೆಯ ಮುಂದಿನ ಹಂತಗಳಲ್ಲಿ ಇದರ ಬಳಕೆ ಅಪ್ರಯೋಜಕ. ಹಾಗೂ ಈ ಔಷಧ ಕಿಡ್ನಿ ಹಾಗೂ ಲಿವರ್‌ಗಳ ಮೇಲೆ ತೀಕ್ಷ್ಣ ಅಡ್ಡಪರಿಣಾಮ ಬೀರುವ ಸಾಧ್ಯತೆ ಇದೆ. ಮುಂದಿನ ಹಂತಗಳಲ್ಲಿ ದೇಹದಲ್ಲಿ ಕಂಡುಬರುವ ತೀವ್ರತರ ಗುಣಲಕ್ಷಣಗಳಿಗೆ ವೈರಾಣುಗಳು ಕಾರಣವಲ್ಲ. ಬದಲು ಅದಾಗಲೇ ಇವುಗಳಿಂದ ಘಾಸಿಗೊಳಗಾದ ಪ್ರಮುಖ ಅಂಗಗಳ ನಿಷ್ಕ್ರೀಯತೆ.

ಉಕ್ಕಿನ ಮಹಿಳೆ: ಕೆ.ಆರ್. ಗೌರಿ ಅಮ್ಮ



ಪುಟ 8 ರಿಂದ



ಆಚರಿಸಲು ಬದುಕುತ್ತೇನೋ ಇಲ್ಲವೋ ಗೊತ್ತಿಲ್ಲ. ಆದರೆ ಮಹಿಳೆಯರ ಸಬಲೀಕರಣಕ್ಕಾಗಿ ನನ್ನ ಕೊನೆಯ ಉಸಿರಿನವರೆಗೂ ನಾನು ಧ್ವನಿ ಎತ್ತುತ್ತೇನೆ ಮತ್ತು ಅವರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತೇನೆ" ಎಂದ ಈ ಶತಾಯುಷಿಯ ಕೆಚ್ಚನ್ನು ಕಂಡು ನಾನು ಬೆರಗಾಗಿದ್ದೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ರಾಜಕಾರಣದ ಎರಡೂ ಕ್ಷೇತ್ರಗಳಲ್ಲಿ ಮಹಿಳೆಯರನ್ನು ನಿಷೇಧಿಸಿದ್ದ ಕಾಲದಲ್ಲಿ ಅವರು ಸ್ತ್ರೀಸಮಾನತಾವಾದಿಯಾಗಿದ್ದರು. ಮಲೆಯಾಳಿ ಸಮಾಜದಲ್ಲಿನ ಪಿತೃಪ್ರಾಧಾನ್ಯವನ್ನು ವಿರೋಧಿಸುತ್ತಲೇ ಬಂದಿರುವ ಅವರು ಕೇರಳದ ವಿಧಾನಸಭೆಯಲ್ಲಿ ಮಾಡಿರುವ ಭಾಷಣಗಳು ಬೆರಗುಗೊಳಿಸುವಂತಹ ಸ್ತ್ರೀವಾದಿ ಒಳನೋಟವನ್ನು ಹೊಂದಿರುತ್ತಿದ್ದವು. ಅವರು 1960ರಲ್ಲಿ ಒಂದು ಬಾರಿ ಸದನದಲ್ಲಿ ಕೇಳುತ್ತಾರೆ: 'ಮಹಿಳೆಯರಿಗೆ ಚಾಲಕರು ಮತ್ತು ಕಂಡಕ್ಟರ್‌ಗಳಾಗಿ ಏಕೆ ತರಬೇತಿ ನೀಡುತ್ತಿಲ್ಲ?. ...... ಸಾಂಪ್ರದಾಯಿಕ ಜನನ ಮಹಿಳೆಯರನ್ನು ಅಪಮೌಲ್ಯಗೊಳಿಸಬಾರದು" ಎಂದು ಹೇಳುವ ಸ್ತ್ರೀವಾದಿ ಸೂಕ್ಷ್ಮತೆ ಅವರಲ್ಲಿತ್ತು.

ರಾಜಕೀಯ ರಂಗದಲ್ಲಿ

ತಿರುವಾಂಕೂರಿನ ದಿವಾನ್ ಸಿ.ಪಿ.ರಾಮಸ್ವಾಮಿ ಅಯ್ಯರ್ ವಿರುದ್ಧದ ಆಂದೋಲನ ಮತ್ತು ವಿಶೇಷವಾಗಿ ಪುನ್ನಪ್ರ–ವಯಲಾರ್ ಹೋರಾಟಗಳು ಅಮ್ಮನ್ನನ್ನು ಸೆಳೆದುಕೊಂಡವು. ಟ್ರೇಡ್ ಯೂನಿಯನ್ ಮತ್ತು ರೈತ ಚಳುವಳಿಗಳ ಮೂಲಕ ತನ್ನ ಸಾರ್ವಜನಿಕ ಜೀವನವನ್ನು ಅಮ್ಮ ಆರಂಬಿಸಿದ್ದ ಇವರು ತಿರುವಾಂಕೂರು–ಕೊಚ್ಚಿನ್ ವಿಧಾನಸಭೆಗೆ 1952 ಮತ್ತು 1954ರಲ್ಲಿ ಮೊದಲ ಬಾರಿಗೆ ಆಯ್ಕೆಯಾದರು. ಅನಂತರ ಕೇರಳ ರಾಜ್ಯ ರಚನೆಯಾದ ನಂತರ 1957ರಲ್ಲಿ ಅಲ್ಲಿನ ವಿಧಾನ ಸಭೆಗೆ ಆಯ್ಕೆಯಾದರು.

1957ರಲ್ಲಿ ಇ.ಎಂ.ಎಸ್.ನಂಬೂದರಿಪಾಡ್ ನೇತೃತ್ವದ ಮೊದಲ ಕಮ್ಯೂನಿಷ್ಟ್ ಮಂತ್ರಿಮಂಡಲದಲ್ಲಿ ಕಂದಾಯ ಸಚಿವರಾಗಿ ಸೇವೆ ಸಲ್ಲಿಸಿದರು. ಭೂಸುಧಾರಣೆ ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸುವಲ್ಲಿ ಅವರದ್ದು ಮಹತ್ವದ ಪಾತ್ರವಿದೆ. ಆಗಲೇ ಅವರು ಅದೇ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಟಿ.ವಿ.ಥಾಮಸ್ ಅವರನ್ನು ವಿವಾಹವಾಗುತ್ತಾರೆ. 1964ರಲ್ಲಿ ಕಮ್ಯೂನಿಷ್ಟ್ ಪಕ್ಷವು ವಿಭಜನೆಗೊಂಡು ಸಿಪಿಐ ಮತ್ತು ಸಿಪಿಐ(ಎಂ) ಆದಾಗ ಗೌರಿಯವರು ಸಿಪಿಐ(ಎಂ) ಸೇರುತ್ತಾರೆ. ಆದರೆ ಪತಿ ಟಿವಿ ಥಾಮಸ್ ರವರು ಸಿಪಿಐನಲ್ಲಿ ಉಳಿಯುತ್ತಾರೆ. ಈ ರಾಜಕೀಯ ಬಿರುಕುಗಳು ಅವರ ವೈಯಕ್ತಿಕ ಬದುಕಿನಲ್ಲಿಯೂ ಬಿರುಕು ಬಿಡತೊಡಗಿದವು. ಭಿನ್ನ ರಾಜಕೀಯ ಸಿದ್ಧಾಂತಗಳ ಕಾರಣದಿಂದಾಗಿ ಮುಂದೆ ಇಬ್ಬರೂ ಬೇರೆಯಾಗುತ್ತಾರೆ. ವಿಶೇಷವೆಂದರೆ 1977ರಲ್ಲಿ ಅವರ ಪತಿ ಥಾಮಸ್ ರವರು ನಿಧನರಾದಾಗ ಅವರ ಪಕ್ಕದಲ್ಲಿಯೇ ಗೌರಿಯಮ್ಮನವರು ಇರುತ್ತಾರೆ.

ಕೆ.ಆರ್.ಗೌರಿಯಮ್ಮನವರು ಒಬ್ಬ ಉತ್ತಮ ಮುತ್ಸದ್ದಿ. ಕೇರಳದ ಮೊದಲ ಕಂದಾಯ ಸಚಿವೆ. ಮಾರ್ಕ್ಸ್‌ವಾದಿ ಕ್ರಾಂತಿಕಾರಿ ಚಿಂತಕಿ, ವಕೀಲೆ, ಲೇಖಕಿ ಮತ್ತು ಕೇರಳದ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿದವರಲ್ಲಿ ಒಬ್ಬರಾಗಿದ್ದರು. ಕೇರಳ ಶಾಸಕಾಂಗದಲ್ಲಿ ಎರಡನೇ ಅತಿ ಹೆಚ್ಚು ಅವಧಿಯ ಶಾಸಕರಾಗಿ ಸೇವೆ ಸಲ್ಲಿಸಿದವರು. 1957ರ ನಂತರ 1960, 67, 70, 82, 87, 91, ಮತ್ತು 2001ರಲ್ಲಿ ನಿರಂತರ 17 ಚುನಾವಣೆಗಳಲ್ಲಿ ಸ್ಪರ್ಧಿಸಿ 13 ಬಾರಿ ಆಯ್ಕೆಯಾದಂತಹ, ಆರು ಸರ್ಕಾರಗಳಲ್ಲಿ ಸಚಿವೆಯಾಗಿದ್ದಂತಹ ಮಹಿಳೆ. ಇವರು ಕೇರಳದಲ್ಲಿ ಹೆಚ್ಚು ಸೇವೆ ಸಲ್ಲಿಸಿದ ರಾಜಕಾರಣಿಯಾಗಿದ್ದರು. ಕೇರಳದಲ್ಲಿ 'ಐರನ್ ಲೇಡಿ', 'ಫೈರ್ ಬ್ರಾಂಡ್' ನಾಯಕಿ ಎಂದು ಮನೆಮಾತಾದವರು.

ಪಕ್ಷದ ಶಿಸ್ತಿನ ಉಲ್ಲಂಘನೆಗಾಗಿ ಅವರನ್ನು 1994ರಲ್ಲಿ ಪಕ್ಷದಿಂದ ಉಚ್ಚಾಟಿಸಲಾಯಿತು. ನಂತರ ಅವರು ತಮ್ಮದೇ ಆದ ರಾಜಕೀಯ ಪಕ್ಷವನ್ನು ರಚಿಸಿದರು. ಆದರೂ ಅಮ್ಮನವರಿಗೆ ಸಿಪಿಐ(ಎಂ)ನ ಸೆಳೆತ ಬಿಡಲಿಲ್ಲ. ಕೇರಳದ ಮುಖ್ಯಮಂತ್ರಿ ಕೇಳಿಕೊಂಡಾಗ ಸಿಪಿಐ(ಎಂ) ಗೆ ಹಿಂತಿರುಗುವುದಾಗಿ ಹೇಳಿದ್ದರು.

ಹೀಗೆ ಹಲವಾರು ಕೆಲಸಗಳನ್ನು ಮಾಡಿ ಕೇರಳದ ಪ್ರಗತಿಗೆ ನಾಂದಿಯಾದವರು ಕೆ.ಆರ್.ಗೌರಿಯಮ್ಮ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.



ಕೇರಳದ ಮೊದಲ ಮಂತ್ರಿಮಂಡಲದಲ್ಲಿ

ಆಂತರಿಕ ತುರ್ತುಸ್ಥಿತಿಯ ಘೋಷಣೆ- ಕಾರ್ಮಿಕ ಚಳವಳಿಯ ಮೇಲೆ ಅತ್ಯುಗ್ರ ದಾಳಿ



ಆಂತರಿಕ ತುರ್ತು ಪರಿಸ್ಥಿತಿಯ ಘೋಷಣೆಯ ನಂತರ ಸರ್ಕಾರದ ಮೊದಲ ಕಾರ್ಯಗಳಲ್ಲಿ ಒಂದು, ಮಾಲಿಕರನ್ನು ನಿಜವಾಗಿಯೂ ಖುಷಿಪಡಿಸಿದ, ಅ ಕನಿಷ್ಠ ಬೋನಸ್ ಅನ್ನು 8.33 ಪ್ರತಿಶತದಿಂದ 4 ಪ್ರತಿಶತಕ್ಕೆ ಇಳಿಸಿದ ಸುಗ್ರೀವಾಜ್ಞೆ ಮತ್ತು ಇತರ ಕಾರ್ಮಿಕ ವಿರೋಧಿ ನಿಬಂಧನೆಗಳನ್ನು ಅಂಗೀಕರಿಸಿದ್ದು. ಆಂತರಿಕ ತುರ್ತುಸ್ಥಿತಿ ಮತ್ತು ಮೂಲಭೂತ ಹಕ್ಕುಗಳ ಅಮಾನತುಗೊಳಿಸುವಿಕೆಯು ನಿರಾಶೆಯ ಜೊತೆಗೆ ಕಾರ್ಮಿಕರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿತು. ಕೈಗಾರಿಕೆಗಳ ಮಾಲೀಕರು ತಮ್ಮ ಶೋಷಣೆಯನ್ನು ಮತ್ತಷ್ಟು ತೀವ್ರಗೊಳಿಸಲು ಮತ್ತು ಕಾರ್ಮಿಕರಿಗೆ ನೀಡಬೇಕಾದ ಪ್ರಯೋಜನಗಳನ್ನು ನಿಷ್ಕರುಣೆಯಿಂದ ನಿರಾಕರಿಸಲು ತುರ್ತು ಪರಿಸ್ಥಿತಿಯ ಲಾಭವನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು. ಹೀಗಾಗಿ, ತುರ್ತು ಪರಿಸ್ಥಿತಿ ಹೇರಿದ ತೀವ್ರ ನಿರ್ಬಂಧಗಳ ಹೊರತಾಗಿಯೂ ಕಾರ್ಮಿಕರು ಪ್ರತಿಭಟನೆಗೆ ಮುಂದಾದರು ಮತ್ತು ಮುಷ್ಕರಗಳನ್ನು ಸಹ ಆಯೋಜಿಸಲಾಯಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್ ಶಾನಭಾಗ

ಇಂದಿರಾ ಗಾಂಧಿ ಮತ್ತು ಅವರ ಸರ್ಕಾರವು ಜೂನ್ 26, 1975 ರಂದು ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿತು ಮತ್ತು ಎಲ್ಲಾ ಪ್ರಮುಖ ವಿರೋಧ ಪಕ್ಷಗಳ ಮತ್ತು ಟ್ರೇಡ್ ಯೂನಿಯನ್ ನಾಯಕರ ಮೇಲೆ ದಾಳಿ ಮಾಡಿ ಅವರನ್ನು ಬಂಧಿಸಲಾಯಿತು. ಆಂತರಿಕ ತುರ್ತು ಪರಿಸ್ಥಿತಿಯಲ್ಲಿ ಸಂವಿಧಾನದಲ್ಲಿ ಖಾತರಿಪಡಿಸಿದ ಎಲ್ಲಾ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಲಾಯಿತು ಮತ್ತು ಪೂರ್ಣ ಪ್ರಮಾಣದ ಸರ್ವಾಧಿಕಾರಶಾಹಿ ಆಡಳಿತವನ್ನು ಸ್ಥಾಪಿಸಲಾಯಿತು. ಹೀಗೆ ಸ್ವಾತಂತ್ರ್ಯೋತ್ತರ ರಾಜಕೀಯ ಇತಿಹಾಸದ ಕರಾಳ ಅಧ್ಯಾಯ ಪ್ರಾರಂಭವಾಯಿತು.

ಈ ಸಂಬಂಧ'ದಲ್ಲಿ ಗಮನಿಸಬೇಕಾದ ಅಂಶವೆಂದರೆ, ಇಂದಿರಾ ಗಾಂಧಿ ವಿರುದ್ಧ ಹೆಚ್ಚುತ್ತಿದ್ದ ರಾಜಕೀಯ ಪ್ರತಿರೋಧ ಮತ್ತು ಕೊನೆಯದಾಗಿ ಅಲಹಾಬಾದ್ ನ್ಯಾಯಾಲಯದ ತೀರ್ಪು ಆಕೆಗೆ ಆಂತರಿಕ ತುರ್ತುಸ್ಥಿತಿ ಘೋಷಿಸಲು ಮತ್ತು ಪ್ರಜಾಪ್ರಭುತ್ವದ ಧ್ವನಿಯನ್ನು ಎಸೆಯಲು ತಕ್ಷಣದ ಪ್ರಚೋದನೆಯಾಗಿ ಪರಿಣಮಿಸಿದರೂ, ಅವರ ಆರ್ಥಿಕ ಮತ್ತು ಕಾರ್ಮಿಕ ನೀತಿಗಳ ವಿರುದ್ಧ ಅದರ ಮುಂಚಿನ ಅವಧಿಯಲ್ಲಿ ನಡೆಯುತ್ತಿದ್ದ, ಮೇ 1974ರ ರೈಲ್ವೆ ಕಾರ್ಮಿಕರ ಮುಷ್ಕರದಲ್ಲಿ ಉನ್ನತ ಮಟ್ಟ ತಲುಪಿದ ಟ್ರೇಡ್ ಯೂನಿಯನ್ ಚಳುವಳಿ, ಆಕೆಯ ಆತುರದ ಮತ್ತು ದುಸ್ಸಾಹಸದ ನಿರ್ಧಾರಕ್ಕೆ ವೇಗವರ್ಧಕವಾಗಿ ಕಾರ್ಯನಿರ್ವಹಿಸಿತು. ಟ್ರೇಡ್ ಯೂನಿಯನ್ ನಾಯಕರ ವ್ಯಾಪಕ ಬಂಧನ, ಕಾರ್ಮಿಕ ಸಂಘಗಳ ಧ್ವನಿಗಳನ್ನು ಮತ್ತದರ ನಿಯತಕಾಲಿಕಗಳನ್ನು ನಿಗ್ರಹಿಸುವುದು, ಮತ್ತು ಕಾರ್ಮಿಕ ವರ್ಗವು ಅಲ್ಲಿಯವರೆಗೆ ಸಾಧಿಸಿದ್ದ ಆರ್ಥಿಕ ಸೌಲಭ್ಯಗಳನ್ನು ಕಸಿದುಕೊಳ್ಳುವ ಹಲವಾರು ನಿರ್ಧಾರಗಳಿಂದ ಇದು ದೃಢಪಟ್ಟಿತು.

ಈ ಹೆಚ್ಚುತ್ತಿದ್ದ ಕಾರ್ಮಿಕ-ವರ್ಗದ ಪ್ರತಿರೋಧವು ಅಧಿಕೃತ ದಾಖಲೆಗಳಲ್ಲಿಯೂ ಎದ್ದುಕಂಡಿತು. ಭಾರತದಲ್ಲಿ ಕೈಗಾರಿಕಾ ಸಂಬಂಧದ ವಿವಾದಗಳು 1974 ರಲ್ಲಿ ಹೊಸ ಮಟ್ಟವನ್ನು ಮುಟ್ಟಿದವು. ಇದರ ಪರಿಣಾಮವಾಗಿ 40.26 ದಶಲಕ್ಷಕ್ಕೂ ಹೆಚ್ಚಿನ ಮಾನವ-ದಿನಗಳ ನಷ್ಟವು 1974 ರ ಅವಧಿಯಲ್ಲಿ ಸಂಭವಿಸಿದವು. ಅದು 1973 ರ 20.62 ದಶಲಕ್ಷ ಮಾನವ ದಿನಗಳ ನಷ್ಟಕ್ಕಿಂತ ದ್ವಿಗುಣವಾಗಿತ್ತು..

1974 ರಲ್ಲಿ ವರದಿಯಾದ 2,938 ಕೈಗಾರಿಕಾ ವಿವಾದಗಳಲ್ಲಿ 428 ಪ್ರಕರಣಗಳು 145.000 ಕಾರ್ಮಿಕರನ್ನು ಒಳಗೊಂಡ ಬೀಗಮುದ್ರೆಗಳಾಗಿವೆ ಮತ್ತು ಇದರ ಪರಿಣಾಮವಾಗಿ 6.62 ದಶಲಕ್ಷ ಮಾನವ-ದಿನಗಳ ನಷ್ಟವಾಯಿತು. ಇದು ವರ್ಷದ ಒಟ್ಟು ಮಾನವ ದಿನಗಳ ನಷ್ಟದ ಶೇಕಡಾ 16.4 ರಷ್ಟಿದೆ. ಪ್ರತಿ ಲಾಕ್- ಔಟ್‌ಗೆ ಸರಾಸರಿ ನಷ್ಟವು 15.465 ಮಾನವ-ದಿನಗಳು ಮತ್ತು ಪ್ರತಿ ಮುಷ್ಕರಕ್ಕೆ 13.404 ಮಾನವ-ದಿನಗಳು ಕಳೆದುಹೋದವು, ಎನ್ನುವ ಮಾಹಿತಿ ಕಾರ್ಮಿಕರ ವಿರುದ್ಧ ಮಾಲೀಕರ ಆಕ್ರಮಣಕ್ಕೆ ಸಾಕ್ಷಿಯಾಗಿದೆ.

ಮುಷ್ಕರಗಳಲ್ಲಿ, 1974 ರಲ್ಲಿ ಎಂಟು ಅಖಿಲ ಭಾರತ ಮುಷ್ಕರಗಳು ಮತ್ತು ಲಾಕ್-ಔಟ್‌ಗಳು ನಡೆದವು, ಇದರಲ್ಲಿ 8,41,626 ಕಾರ್ಮಿಕರು ಭಾಗಿಯಾಗಿದ್ದರು ಮತ್ತು 9.69 ದಶಲಕ್ಷ ಮಾನವ-ದಿನಗಳು ನಷ್ಟವಾಗಿವೆ. ಒಟ್ಟು ಕಾರ್ಮಿಕರಲ್ಲಿ ಶೇಕಡಾ 29.5 ರಷ್ಟು ಕಾರ್ಮಿಕರು ಇವುಗಳಲ್ಲಿ ಭಾಗವಹಿಸಿದರು ಮತ್ತು 1974ರ ಅವಧಿಯಲ್ಲಿ ನಷ್ಟವಾದ ಒಟ್ಟು ಮಾನವ ದಿನಗಳಲ್ಲಿ 24.1 ಶೇಕಡಾ ರಷ್ಟಿದೆ. ಈ ಅಧಿಕೃತ ಅಂದಾಜಿನ ಪ್ರಕಾರ ಮೇ 1974 ರಲ್ಲಿ ನಡೆದ ಅಖಿಲ ಭಾರತ ರೈಲ್ವೆ ಮುಷ್ಕರವೊಂದೇ, 475.092 ಕಾರ್ಮಿಕರ ಪಾಲ್ಗೊಳ್ಳುವಿಕೆ ಮತ್ತು 9 ದಶಲಕ್ಷ ಮಾನವದಿನಗಳ ನಷ್ಟಕ್ಕೆ ಕಾರಣವಾಗಿತ್ತು ಮತ್ತು ಎಲ್ಲ ಅಖಿಲ ಭಾರತ ಮುಷ್ಕರಗಳು ಮತ್ತು ಲಾಕ್-ಔಟ್‌ಗಳಲ್ಲಿ ನಷ್ಟದ ಶೇಕಡಾ 94.9 ರಷ್ಟಿತ್ತು. ಇದರ ನಂತರ 1974 ರ ಅಕ್ಟೋಬರ್‌ನಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರ ಅಖಿಲ ಭಾರತ ಮುಷ್ಕರ ನಡೆಯಿತು. 329,459 ಕಾರ್ಮಿಕರನ್ನು ಒಳಗೊಂಡಿದ್ದು, ಇದರ ಪರಿಣಾಮವಾಗಿ 379, 378 ಮಾನವ-ದಿನಗಳ ನಷ್ಟವಾಯಿತು.

ಮೇಲಿನವುಗಳಲ್ಲದೆ, ಅಧಿಕೃತ ದಾಖಲೆಗಳು 1974 ರಲ್ಲಿ 314,000 ಕಾರ್ಮಿಕರನ್ನು ಒಳಗೊಂಡ 164 ರಾಜಕೀಯ ಮತ್ತು ಸೌಹಾರ್ದ ಮುಷ್ಕರಗಳನ್ನು ಮತ್ತು 441.000 ಮಾನವ-ದಿನಗಳ ನಷ್ಟವನ್ನು ಉಲ್ಲೇಖಿಸಿವೆ. ಈ ಮುಷ್ಕರಗಳಲ್ಲಿ, ಬಿಹಾರದಲ್ಲಿ ಮತ್ತು ನಂತರ ಮಹಾರಾಷ್ಟ್ರದಲ್ಲಿ ಕ್ರಮವಾಗಿ ಅತಿ ಹೆಚ್ಚು 199,000 ಮತ್ತು 77.000 ಮಾನವ-ದಿನಗಳ ನಷ್ಟವನ್ನು ದಾಖಲಿಸಲಾಗಿದೆ.

ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ತಡೆಯಲು ಮತ್ತು ಎಲ್ಲಾ ವಿರೋಧಿ ರಾಜಕೀಯ ಚಳುವಳಿಗಳು ಮತ್ತು ಟ್ರೇಡ್ ಯೂನಿಯನ್ ಹೋರಾಟಗಳನ್ನು ನಿಗ್ರಹಿಸಲು ವಿನ್ಯಾಸಗೊಳಿಸಲಾದ ಈ ಆಂತರಿಕ ತುರ್ತುಸ್ಥಿತಿ ಎಲ್ಲಾ ಪ್ರಜಾಪ್ರಭುತ್ವ ಮನಸ್ಸಿನ ಜನರಿಗೆ ದುರಂತವಾಗಿ ಕಾಣಿಸಿಕೊಂಡಿತು. ಆದಾಗ್ಯೂ, ಕೈಗಾರಿಕೆಗಳ ಮಾಲಿಕರು ಸ್ವಾಗತಿಸಿದರು. ಅದು ಸ್ವಾಭಾವಿಕವಾದದ್ದು.

ಆಂತರಿಕ ತುರ್ತು ಪರಿಸ್ಥಿತಿಯ ಘೋಷಣೆಯ ನಂತರ ಸರ್ಕಾರದ ಮೊದಲ ಕಾರ್ಯಗಳಲ್ಲಿ ಒಂದು, ಮಾಲಿಕರನ್ನು ನಿಜವಾಗಿಯೂ ಖುಷಿಪಡಿಸಿದ, ಅಕ್ಟೋಬರ್ 1975 ರಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ, ಕನಿಷ್ಠ ಬೋನಸ್ ಅನ್ನು 8.33 ಪ್ರತಿಶತದಿಂದ 4 ಪ್ರತಿಶತಕ್ಕೆ ಇಳಿಸಿದ್ದು ಮತ್ತು ಇತರ ಕಾರ್ಮಿಕ ವಿರೋಧಿ ನಿಬಂಧನೆಗಳನ್ನು ಅಂಗೀಕರಿಸಿದ್ದು. ಈ ಸುಗ್ರೀವಾಜ್ಞೆಯು ಸ್ವಾಭಾವಿಕವಾಗಿ ಕಾರ್ಮಿಕರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿತು, ಆದರೆ ಆಂತರಿಕ ತುರ್ತುಸ್ಥಿತಿಯು ಸುಗ್ರೀವಾಜ್ಞೆಯ ವಿರುದ್ಧ ಸಮರಶೀಲ ಹೋರಾಟವನ್ನು ನಿರ್ಮಿಸುವುದನ್ನು ತಡೆಯಿತು. ಆಗಲೂ ವಿವಿಧ ಕಾರ್ಮಿಕ ಸಂಘಗಳು ಪ್ರತಿಭಟನಾ ಸಭೆಗಳನ್ನು ನಡೆಸಿದವು ಮತ್ತು ಸುಗ್ರೀವಾಜ್ಞೆ ವಿರುದ್ಧ ಪ್ರತಿಭಟಿಸುವ ಜಂಟಿ ಹೇಳಿಕೆಯನ್ನು ಸಿಐಟಿಯು, ಯುಟಿಯುಸಿ. ಎಚ್‌ಎಂಎಸ್. ಎಚ್‌ಎಂಪಿ. ಬಿಎಂಎಸ್. ಟಿಯುಸಿಸಿ. ಪ್ರಗತಿಪರ ಕಾರ್ಮಿಕ ಒಕ್ಕೂಟ ತಮಿಳುನಾಡು ಮತ್ತು ತಮಿಳುನಾಡು ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಹ ಹೊರಡಿಸಿದವು.

ಇದು ಕೇವಲ ಈ ಪ್ರತಿಗಾಮಿ ಸುಗ್ರೀವಾಜ್ಞೆ ಮಾತ್ರವಲ್ಲ, ವಿವಿಧ ಕೈಗಾರಿಕೆಗಳಲ್ಲಿನ ಅನೇಕ ಮಾಲಿಕರು, ಈ ತುರ್ತು-ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡು, ಕಾರ್ಮಿಕರ ಮೇಲೆ ಶೋಷಣೆಯನ್ನು ತೀವ್ರಗೊಳಿಸುವ ಸಲುವಾಗಿ ಕಾರ್ಮಿಕ ವಿರೋಧಿ ಒಪ್ಪಂದಗಳನ್ನು ಹೇರಲು ಪ್ರಯತ್ನಿಸಿದರು.

ಇದಲ್ಲದೆ, ಸಾರ್ವಜನಿಕ ವಲಯದ ಕಂಪೆನಿಗಳ ವ್ಯವಸ್ಥಾಪಕರು ಸಹ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಸಡ್ಡೆ ತೋರಲು ಪ್ರಯತ್ನಿಸಿದರು ಮತ್ತು ಕೆಲಸದ ಸ್ಥಿತಿಯು ಅತ್ಯಂತ ಅಪಾಯಕಾರಿಯಾದ ಸಂದರ್ಭಗಳಲ್ಲೂ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದರು. ಈ ಸಂಪೂರ್ಣ ಉದಾಸೀನತೆ ಮತ್ತು ನಿಷ್ಠುರತೆಯು ಈಸ್ಟರ್ನ್‌ಕೋಲ್ ಫೀಲ್ಡ್‌ನ ಚಸ್ನಾಲಾ ಕಲ್ಲಿದ್ದಲು ಗಣಿಯಲ್ಲಿ ಭೀಕರ ಅಘಘಾತಕ್ಕೆ ಕಾರಣವಾಯಿತು. 27 ಡಿಸೆಂಬರ್ 1975 ರಂದು ನೆಲದಡಿಯ ಗಣಿಯಲ್ಲಿ ನೀರು ನುಗ್ಗಿ, ಭೀಕರ ದುರಂತದಲ್ಲಿ ಸುಮಾರು 400 ಗಣಿಕಾರ್ಮಿಕರು ಮುಳುಗಿ ಸಾವನ್ನಪ್ಪಿದರು.

ಚಸ್ನಾಲಾ ದುರಂತವು ಎಲ್ಲಾ ಕಾರ್ಮಿಕ ಸಂಘಗಳಲ್ಲಿ ಮತ್ತು ಸಮಾಜದ ವಿವಿಧ ಮೂಲೆಗಳಿಂದ ಬಲವಾದ ಪ್ರತಿಭಟನೆಯನ್ನು ಹುಟ್ಟುಹಾಕಿತು ಮತ್ತು ಪೂರ್ಣ-ನಿರೋಧಕ ಸುರಕ್ಷತಾ ಕ್ರಮಗಳ ಮತ್ತು ಅದರ ಕಟ್ಟುನಿಟ್ಟಾದ ಅನುಸರಣೆಯ ಬೇಡಿಕೆ ಬಲವಾದ ನೆಲೆಯನ್ನು ಪಡೆಯಿತು..

ಭಾರತದ ಸಂವಿಧಾನಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ಶಿಫಾರಸು ಮಾಡಲು ಕೇಂದ್ರ ಸರ್ಕಾರ ಸ್ವರ್ಣ ಸಿಂಗ್ ಸಮಿತಿಯನ್ನು ನೇಮಿಸಿತು. 1976 ರ ಆರಂಭದಲ್ಲಿ ಸಲ್ಲಿಸಿದ ಸಮಿತಿಯ ಶಿಫಾರಸುಗಳು ಪ್ರಜಾಪ್ರಭುತ್ವ ವಿರೋಧಿ ತುರ್ತು ನೀತಿಗೆ ಅನುಗುಣವಾಗಿದ್ದವು. ಚುನಾವಣಾ ಕಾನೂನುಗಳು, ಕೇಂದ್ರ-ರಾಜ್ಯ ಸಂಬಂಧಗಳು ಇತ್ಯಾದಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಇತರ ಶಿಫಾರಸುಗಳ ಪೈಕಿ, ಸರ್ಕಾರಿ ನೌಕರರಿಗೆ ಸಂವಿಧಾನದ 311 (2) ನೇ ವಿಧಿ ಅಡಿಯಲ್ಲಿ ನೀಡಲಾದ ಸುರಕ್ಷತೆಯನ್ನು,ಸಂವಿಧಾನದ ವ್ಯಾಪ್ತಿಯಿಂದ ಹೊರಗಿಟ್ಟು, ಅದನ್ನು ಸೇವಾ ನ್ಯಾಯಮಂಡಳಿಗಳಿಗೆ ಉಲ್ಲೇಖಿಸಲು ಪ್ರಯತ್ನಿಸಲಾಯಿತು. ಸಂವಿಧಾನದ 226 ನೇ ವಿಧಿ ಅನ್ವಯ 'ಇತರ ಉದ್ದೇಶಗಳಿಗಾಗಿ' ರಿಟ್ ಹೊರಡಿಸುವ ಹೈಕೋರ್ಟ್‌ಗಳ ಅಧಿಕಾರವನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಸಮಿತಿ ಪ್ರಸ್ತಾಪಿಸಿತು.

ಈ ಪ್ರತಿಗಾಮಿ ಪ್ರಸ್ತಾಪಗಳಿಗೆ ಸಂಸತ್ತಿನ ಒಳಗೆ ಮತ್ತು ಹೊರಗೆ ಬಲವಾದ ಪ್ರತಿಭಟನೆ ಮತ್ತು ವಿರೋಧ ವ್ಯಕ್ತವಾಯಿತು. ಸರ್ಕಾರಿ ನೌಕರರ ಕಾರ್ಮಿಕ ಸಂಘಗಳು ಸೇರಿದಂತೆ ಕಾರ್ಮಿಕ ಸಂಘಗಳು ಉದ್ದೇಶಿತ ತಿದ್ದುಪಡಿಗಳ ವಿರುದ್ಧ ತೀವ್ರವಾಗಿ ಪ್ರತಿಭಟಿಸಿದವು ಮತ್ತು ಇವುಗಳನ್ನು ಜಾರಿಮಾಡಲಾಗಲಿಲ್ಲ. ಆದರೆ ಸಂವಿಧಾನದ ನಲವತ್ತೆರಡನೆಯ ತಿದ್ದುಪಡಿಯ ಮೂಲಕ ಶಿಕ್ಷೆಯ ಕ್ರಮಗಳ ಸಂದರ್ಭದಲ್ಲಿ ಆತ್ಮರಕ್ಷಣೆಯ ಎರಡನೇ ಅವಕಾಶಕ್ಕಾಗಿ 311 (2) ನೇ ವಿಧಿ ಅಡಿಯಲ್ಲಿನ ಸರ್ಕಾರಿ ನೌಕರರ ಹಕ್ಕನ್ನು ಹಿಂಪಡೆಯಲಾಯಿತು.

ಸ್ವಾಭಾವಿಕವಾಗಿ, ಸರ್ಕಾರದ ಈ ಅಧಿಕೃತ ಮತ್ತು ಸರ್ವಾಧಿಕಾರಶಾಹೀ ಆದೇಶಗಳ ಬಗ್ಗೆ ಕಾರ್ಮಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಮತ್ತು ಇದು ಉತ್ಪಾದನಾ ಕ್ಷೇತ್ರದಲ್ಲೂ ತನ್ನದೇ ಆದ ನಿರಾಶಾದಾಯಕ ಪರಿಣಾಮವನ್ನು ಬೀರಿತು.

ಕೈಗಾರಿಕಾ ಉತ್ಪಾದನೆ ಕುಸಿತ

ದಿ ಎಕನಾಮಿಕ್ ಟೈಮ್ಸ್ ನಲ್ಲಿ ಪ್ರಕಟವಾದ ವರದಿಗಳ ಪ್ರಕಾರ, ಕೇಂದ್ರ ಕೈಗಾರಿಕಾ ಮತ್ತು ನಾಗರಿಕ ಸರಬರಾಜು ಸಚಿವಾಲಯದಿಂದ ಉತ್ಪಾದನಾ ಮಾಹಿತಿಯನ್ನು ಸ್ವೀಕರಿಸಲಾಗಿದ್ದ, 104 ಕೈಗಾರಿಕೆಗಳಲ್ಲಿ 50 ಕೈಗಾರಿಕೆಗಳಲ್ಲಿ 1975-76 ರ ಮೊದಲ ಎಂಟು ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯು ಕಡಿಮೆಯಾಗಿದೆ. ಲಘು ಮತ್ತು ಭಾರೀ ಕೈಗಾರಿಕೆಗಳೆರಡೂ ಉತ್ಪಾದನೆಯಲ್ಲಿ ಕುಸಿತವನ್ನು ದಾಖಲಿಸಿದವು.

ಅಗತ್ಯ ವಸ್ತುಗಳ ಉತ್ಪಾದನೆಯಲ್ಲಿನ ಕುಸಿತವು ಸಾಕಷ್ಟು ಗಣನೀಯವಾಗಿತ್ತು. ಹಿಂದಿನ ವರ್ಷಗಳಲ್ಲಿ ಉತ್ಪಾದನಾ ಸೂಚ್ಯಂಕ ಏರಿಕೆಯಾಗಿದ್ದ ಎಂಟು ಪ್ರಮುಖ ಕೈಗಾರಿಕೆಗಳೂ ಸಹ ಈ ಸಮಯದಲ್ಲಿ ಗಮನಾರ್ಹ ಕುಸಿತವನ್ನು ದಾಖಲಿಸಿದವು. ಉತ್ಪಾದನೆಯಲ್ಲಿ ತೀವ್ರ ಕುಸಿತವು ಅನೇಕ ಗ್ರಾಹಕ ಮತ್ತು ಇತರ ಕೈಗಾರಿಕೆಗಳಲ್ಲಿ ದಾಖಲಾಯಿತು. ಯಂತ್ರೋಪಕರಣಗಳ ಉದ್ಯಮಗಳಲ್ಲಿ, ಸಿಮೆಂಟ್ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ 43.5% ರಷ್ಟು ಕೊರತೆಯಾಯಿತು. ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಉದ್ಯಮವೂ ಗಂಭೀರ ಕುಸಿತವನ್ನು ದಾಖಲಿಸಿತು. ಇತರ ಗ್ರಾಹಕ ವಸ್ತುಗಳಲ್ಲಿ, ಸಿಗರೇಟ್ ಉತ್ಪಾದನೆಯು 12.5%, ಬೈಸಿಕಲ್ 15.2% ಮತ್ತು ಚಹಾ 2.8% ರಷ್ಟು ಕಡಿಮೆಯಾಯಿತು. ಅದೇ ರೀತಿ ಇತರ ಅನೇಕ ಕೈಗಾರಿಕೆಗಳಲ್ಲಿ ಉತ್ಪಾದನೆಯು ತೀವ್ರ ಕುಸಿತವನ್ನು ದಾಖಲಿಸಿತು.

ಆಂತರಿಕ ತುರ್ತುಸ್ಥಿತಿ ಮತ್ತು ಮೂಲಭೂತ ಹಕ್ಕುಗಳ ಅಮಾನತುಗೊಳಿಸುವಿಕೆಯು ನಿರಾಶೆಯ ಜೊತೆಗೆ ಕಾರ್ಮಿಕರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿತು. ಮೊದಲೇ ಸೂಚಿಸಿದಂತೆ, ಕೈಗಾರಿಕೆಗಳ ಮಾಲೀಕರು ತಮ್ಮ ಶೋಷಣೆಯನ್ನು ಮತ್ತಷ್ಟು ತೀವ್ರಗೊಳಿಸಲು ಮತ್ತು ಕಾರ್ಮಿಕರಿಗೆ ನೀಡಬೇಕಾದ ಪ್ರಯೋಜನಗಳನ್ನು ನಿಷ್ಕರುಣೆಯಿಂದ ನಿರಾಕರಿಸಲು ತುರ್ತು ಪರಿಸ್ಥಿತಿಯ ಲಾಭವನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು. ಹೀಗಾಗಿ, ತುರ್ತು ಪರಿಸ್ಥಿತಿ ಹೇರಿದ ತೀವ್ರ ನಿರ್ಬಂಧಗಳ ಹೊರತಾಗಿಯೂ ಕಾರ್ಮಿಕರು ಪ್ರತಿಭಟನೆಗೆ ಮುಂದಾದರು ಮತ್ತು ಮುಷ್ಕರಗಳನ್ನು ಸಹ ಆಯೋಜಿಸಲಾಯಿತು.

ತುರ್ತು ಪರಿಸ್ಥಿತಿಯ ಘೋಷಣೆಯ ಮೂರು ತಿಂಗಳಲ್ಲಿ ಗಣನೀಯ ಸಂಖ್ಯೆಯ ಮಾನವ ದಿನಗಳು 1.56 ದಶಲಕ್ಷ ನಷ್ಟವಾಗಿದ್ದವು. ಕಾರ್ಮಿಕರು ತುರ್ತು ಪರಿಸ್ಥಿತಿಯನ್ನು ನಿಷ್ಕ್ರಿಯವಾಗಿ ಒಪ್ಪಲಿಲ್ಲ, ಬದಲಾಗಿ, ಅವರು ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯ ಪ್ರತಿಭಟನೆಯಲ್ಲಿ ತೊಡಗಿದರು. ಇದಲ್ಲದೆ, ಈ ಕಾರ್ಮಿಕರ ಪ್ರತಿರೋಧದ ಇನ್ನೊಂದು ಕುತೂಹಲಕಾರಿ ಲಕ್ಷಣವೆಂದರೆ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಲ್ಲಿಯೂ ಸಹ, ಪ್ರತೀಕಾರದ ಭಯದಿಂದ ಕಾರ್ಮಿಕರು ಯಾವಾಗಲೂ ಮೌನವಾಗಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಕ್ಷೇತ್ರಗಳಲ್ಲಿನ ಕಾರ್ಮಿಕರು ಮತ್ತು ನೌಕರರು ಸಹ ಮುಷ್ಕರದಲ್ಲಿ ಪಾಲ್ಗೊಂಡರು.

ಕೈಗಾರಿಕಾ ಸಂಬಂಧಗಳನ್ನು ನಿಯಂತ್ರಿಸಲು ಸರ್ಕಾರದ ಪ್ರಯತ್ನಗಳು

ಖಾಸಗಿ ವಲಯದಲ್ಲಿನ ಕೈಗಾರಿಕಾ ಸಂಬಂಧಗಳ ಸಾಮಾನ್ಯ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಕಾರ್ಮಿಕರನ್ನು ಪ್ರೇರೇಪಿಸುವ ಜೊತೆಗೆ ತುರ್ತು-ಸಮಯದಲ್ಲಿರುವ ಇತರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರಕ್ಕೆ ಸಹಾಯ ಮಾಡುವ ಸಲುವಾಗಿ ಭಾರತ ಸರ್ಕಾರವು ಜುಲೈ 29, 1976 ರಂದು ರಾಷ್ಟ್ರೀಯ ಶೀರ್ಷಸ್ತ ಸಂಸ್ಥೆ(ನ್ಯಾಷನಲ್ ಅಪೆಕ್ಸ್ ಬೋರ್ಡ್ -ಎನ್‌ಎಬಿ)ಯನ್ನು ರಚಿಸಿತು..

ಇದರ ಜೊತೆಗೆ, ಉದ್ಯೋಗಾವಕಾಶ, ರಿಟ್ರೆಂಚಮೆಂಟ್, ಮತ್ತು ಮುಚ್ಚುವಿಕೆಯ ಪ್ರಶ್ನೆಯನ್ನು ನ್ಯಾಷನಲ್ ಅಪೆಕ್ಸ್ ಸಂಸ್ಥೆಗೆ ಉಲ್ಲೇಖಿಸುವುದನ್ನು ಪರಿಗಣಿಸಲು ಮಾಲಿಕರ ಸಂಘಟನೆಗಳು ಮತ್ತು ಮಾನ್ಯತೆ ಪಡೆದ ಕಾರ್ಮಿಕ ಸಂಘಗಳಿಂದ ತಲಾ ಮೂರು ಪ್ರತಿನಿಧಿಗಳನ್ನು ಒಳಗೊಂಡ ರಾಷ್ಟ್ರೀಯ

ಪುಟ 14 ನೋಡಿ

ದಲಿತರ ಕುಟುಂಬಗಳಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ಮೇ 15, ರಂದು ರಾಜ್ಯಾದ್ಯಾಂತ ದಲಿತ ಹಕ್ಕುಗಳ ಸಮಿತಿಯಿಂದ

ಮನೆಗಳ ಮುಂದೆಯೇ ರಾಜ್ಯಾದಾದ್ಯಂತ ಪ್ರತಿಭಟನೆ ನಡೆಸಿತು

ಕೋವಿಡ್–19 ಎರಡನೇ ಅಲೆ ಕರ್ನಾಟಕದ ಜನರು ತೀವ್ರ ವಿಪತ್ತಿಗೆ ಸಿಲುಕಿಸಿದೆ. ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ಸಾವಿನ ಸರಮಾಲೆ ಭಯ ಭೀತಿಯನ್ನು ಉಂಟು ಮಾಡಿದೆ. ಮೊದಲನೆ ಅಲೆಯಿಂದ ತತ್ತರಿಸಿ ಹೋಗಿರುವ ರಾಜ್ಯದ ಜನತೆ ಮತ್ತೊಂದು ಲಾಕ್‌ಡೌನ್‌ಗೆ ಸಿಲುಕಿದ್ದಾರೆ. ರಾಜ್ಯದ ದಲಿತರು ಮತ್ತಷ್ಟು ಸಂಕಷ್ಟ ಅನುಭವಿಸುತ್ತಿದ್ದಾರೆ.

ಜಾತಿ ವ್ಯವಸ್ಥೆ ಇರುವ ನಮ್ಮ ದೇಶದಲ್ಲಿ ದಲಿತರು ಶೋಷಿತರಾಗಿ ಅತ್ಯಂತ ಕರಾಳ ಬದುಕು ಚೇತರಿಸಿಕೊಳ್ಳಲು ಸಾಧ್ಯವಾಗದಿರುವ, ಕೃಷಿ ಕೂಲಿಗಾರರಾಗಿ, ವಲಸೆ ಕಾರ್ಮಿಕರಾಗಿ ಇತರೆ ಜನರಿಗಿಂತ ಭಿನ್ನವಾದ ಬದುಕಿನ ಯಾತನೆಯಿಂದ ಸಾವನ್ನಪುತ್ತಿದ್ದಾರೆ. ದಿನನಿತ್ಯ ಕೂಲಿ ಮಾಡಿ ಒಂದು ಹೊತ್ತಿನ ತುತ್ತಿನ ಚೀಲ ತುಂಬಿಸಿಕೊಳ್ಳುವ ದಲಿತರು ಲಾಕ್‌ಡೌನ್‌ನಿಂದ ತತ್ತರಿಸಿ ಹೋಗಿದ್ದಾರೆ. ದಲಿತರ ಈ ಸ್ಥಿತಿಯನ್ನು ಸರ್ಕಾರ ವಿಶೇಷವಾಗಿ ಗಮನಿಸದೆ ಇರುವ ಸಂಗತಿಯನ್ನು ಯಾರು ಮರೆ ಮಾಚುವಂತಿಲ್ಲ.

ಯಡಿಯೂರಪ್ಪನವರ ಸರ್ಕಾರದ ತಜ್ಞ ವೈದರು ಮುನ್ಸೂಚನೆ ನೀಡಿದ್ದರು ಎಚ್ಚರಿಕೆ ಕ್ರಮ ವಹಿಸುವಲ್ಲಿ ವಿಫಲವಾಗಿದೆ. ಬಿಯು ಸಂಖ್ಯೆ ಪಡೆದರು ಬೆಡ್ ಸಿಗದ ಅತಂತ್ರ ಸ್ಥಿತಿ. ವಾರ್ ರೂಂ ಪ್ರಕರಣ ಸರ್ಕಾರದ ಭ್ರಷ್ಟಾಚಾರ, ವೈಫಲ್ಯಗಳ ಕನ್ನಡಿಯಾಗಿದೆ. ಆಮ್ಲಜನಕ ಸಿಗದೆ ಮುಖ್ಯಮಂತ್ರಿ ಮನೆ ಮುಂದೆ ಅಂಬುಲೆನ್ಸ್‌ನಲ್ಲಿ ರೋಗಿ ನಿಂತರು. ಈ ಅವ್ಯವಸ್ಥೆಯಿಂದ ದಾರಿಯಲ್ಲೆ ಸತ್ತಾಗ ರೇಮ್‌ಡಿಸಿವರ್ (REMEDISIVIR) ವ್ಯಾಕ್ಸಿನಿನ ಔಷಧಿಯ ಕಾಳಸಂತೆ ಮಾರಾಟ, ಹೆಣ ಸುಡಲು ರೂ. 4 ಲಕ್ಷ, ಸರ್ಕಾರಿ ಆಸ್ಪತ್ರೆಗಳಲ್ಲಿ ಅವ್ಯವಸ್ಥೆ, ಖಾಸಗೀ ಆಸ್ಪತ್ರೆ ಅಮಾನವೀಯ ಭ್ರಷ್ಟಚಾರ, ಲೂಟಿ ಇವೆಲ್ಲ ಸರ್ಕಾರದ ಅಸಮರ್ಥ ಆಡಳಿತದ ಜ್ಯೋತಕವಾಗಿದೆ.



ದಲಿತರಿಗೆ ಕೋವಿಡ್ ಪರಿಹಾರದ ಪ್ಯಾಕೇಜ್‌ಗಾಗಿ ಒತ್ತಾಯಿಸಿ?

ದಲಿತರ ಬಗ್ಗೆ ಕೇಳುವವರು ಯಾರು. ಅವರ ಪರಿಸ್ಥಿತಿ ಬಗ್ಗೆ ಸರ್ಕಾರ ಒಂದೂ ಮಾತು ಆಡಲಿಲ್ಲ. 2020–21 ರಲ್ಲಿ ರೂ. 25712.22 ಕೋಟಿ ಒದಗಿಸುವುದಾಗಿ ಘೋಷಿಸಿದೆ. ಅದರೆ ಫೆಬ್ರವರಿ ತಿಂಗಳವರೆವಿಗೂ ಕೇವಲ ರೂ. 16,332.40 ಕೋಟಿ ಖರ್ಚು ಮಾಡಿದೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಫ್ ಇಲ್ಲ. ಹಾಸ್ಟೆಲ್ ವಿದ್ಯಾರ್ಥಿಗಳು ಮನೆಗೆ ಬಂದು ಸೇರಿದ್ದಾರೆ. ಅವರಿಗೆ ನೀಡಬೇಕಾದ ಸ್ಕಾಲರ್ ಶಿಫ್ ಸಿಗುತ್ತಿಲ್ಲ. ಅವರ ಹೊಟ್ಟೆ ಖಾಲಿಯಾಗಿದೆ. ದಲಿತರ ಕೋವಿಡ್ ಪರಿಹಾರ ಪ್ಯಾಕೇಜ್ ನೀಡದೆ ದಲಿತರ ಬದುಕಿನ ಬಗ್ಗೆ ಒಂದಿಷ್ಟು ಕಾಳಜಿ ಇಲ್ಲದ ಜಾತಿ ತಾರತಮ್ಯದ ಸರ್ಕಾರವಾಗಿದೆ. ದಲಿತ ಮಂತ್ರಿಗಳು, ಸರ್ಕಾರ ದಲಿತರ ಪಾಲಿಗೆ ಇಲ್ಲವಾಗಿದೆ. ಕೃಷಿ ಚಟುವಟಿಕೆಗಳು ನಿಲ್ಲಬಾರದು ಎಂದು ಹೇಳುವ ಸರ್ಕಾರ ಎಸ್.ಸಿ./ಎಸ್.ಟಿ. ಯೋಜನೆಗಳನ್ನು ಸ್ಥಗಿತಗೊಳಿಸಿ ಸವಲತ್ತುಗಳನ್ನು ಮೊಟಕುಗೊಳಿಸಲಾಗಿದೆ.

ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಉದ್ಯೋಗ ಯೋಜನೆಯಲ್ಲಿ ದಲಿತ ಯುವಕರು ಸ್ವಯಂ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿ ವರ್ಷಗಳೆ ಕಳೆದಿವೆ ಆದಾಗ್ಯೂ ಇಂತಹ ಯೋಜನೆಗಳ ಜಾರಿಯಲ್ಲಿ ಜಾತಿ ತಾರತಮ್ಯ ಮಾಡಲಾಗುತ್ತಿದೆ. ಯೋಜನೆ ಜಾರಿಗೊಳಿಸುತ್ತಿಲ್ಲ. ಇದೇ ಸಂದರ್ಭದಲ್ಲಿ ಹಾಸನ ಜಿಲ್ಲೆಯ ಜೀತ ವಿಮುಕ್ತ ದಲಿತರಿಗೆ ಭೂಮಿ ನೀಡದೆ ಅರಣ್ಯ ಅಧಿಕಾರಿಗಳನ್ನು ಬಳಸಿ ಅವರ ಮೇಲೆ ಇಂತಹ ಕಠಿಣ ಪರಿಸ್ಥಿತಿಯಲ್ಲೂ ದೌರ್ಜನ್ಯ ನಡೆಸಿರುತ್ತದೆ. ದಲಿತರು ಉದ್ಯೋಗವಿಲ್ಲ, ಊಟಕ್ಕೆ ಪರದಾಟ, ರೇಷನ್ ವ್ಯವಸ್ಥೆಯಲ್ಲಿ ಅಕ್ಕಿ ಕಡಿತ ಮಾಡಿದೆ, ದಲಿತರ ಜೀವನದ ಬಗ್ಗೆ ಕೇಳುವವರಿಲ್ಲ, ದಲಿತರು ಅಮಾನವೀಯ ಬದುಕನ್ನು ಸವೆಸುತ್ತಿದ್ದಾರೆ.

ಬೇಡಿಕೆಗಳು:

1. ಕೋವಿಡ್ 2ನೇ ಅಲೆ, 3ನೇ ಅಲೆ ಹೀಗೆ ಮುಂದುವರಿದಿದೆ. ಆದ್ದರಿಂದ ದಲಿತರ ಆಹಾರ, ಆರೋಗ್ಯ, ಬದುಕಲು ಉದ್ಯೋಗಕ್ಕಾಗಿ ದಲಿತರ ಕೋವಿಡ್ ಪರಿಹಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು.
2. ಬಿಪಿಎಲ್ ಕಾರ್ಡ್ ಇರುವ ದಲಿತರಿಗೆ ಮತ್ತು ಇತರೆ ಬಡವರಿಗೆ ರೂ. 10,000 ಪರಿಹಾರವನ್ನು ತಕ್ಷಣ ನೀಡಬೇಕು. 10 ಕೆ.ಜಿ. ಅಕ್ಕಿ ಜೊತೆ ಅಗತ್ಯ ವಸ್ತುಗಳನ್ನು ತಕ್ಷಣ ಒದಗಿಸಿ ಅವರ ಜೀವ ಉಳಿಸಬೇಕು.
3. ದಲಿತ ವಿದ್ಯಾರ್ಥಿಗಳಿಗೆ ನೀಡಬೇಕಾದ ವಿದ್ಯಾರ್ಥಿ ವೇತನ (ಸ್ಕಾಲರ್‌ಶಿಫ್) ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳ ಊಟಕ್ಕೆ ನೀಡುತ್ತಿದ್ದ ಹಣವನ್ನು ಲೆಕ್ಕಹಾಕಿ ಕೂಡಲೇ ನೀಡಬೇಕು.
4. ಪರಿಶಿಷ್ಟ ಜಾತಿ/ಪಂಗಡದ ಅಭಿವೃದ್ಧಿ ಯೋಜನೆ ಎಸ್.ಸಿ.ಪಿ./ಟಿ.ಎಸ್.ಪಿ. ಹಣವನ್ನು ನಿಗಮಗಳ ಮೂಲಕ ತ್ವರಿತವಾಗಿ ಜಾರಿ ಮಾಡಬೇಕು. ಜಾರಿ ಮಾಡದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕು.
5. ಗಂಗೂರಿನಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗಿರುವ ಅರಣ್ಯ ಅಧಿಕಾರಿಗಳ ಮೇಲೆ ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯಿದೆ ಅಡಿ ಕೇಸು ದಾಖಲುಮಾಡಿ ಅವರನ್ನು ಬಂಧಿಸಬೇಕು.
6. ಕೋವಿಡ್ ಲಸಿಕೆಯನ್ನು ದಲಿತರು ವಾಸಿಸುವ ಕಾಲೋನಿ ಪ್ರದೇಶಗಳಿಗೆ ತೆರಳಿ ಲಸಿಕೆ ಹಾಕಬೇಕು.
7. ದೇವದಾಸಿ ಮಹಿಳೆಯರಿಗೆ ಪುನರ್‌ವಸತಿ ಕಲ್ಪಿಸಬೇಕು. ಮಸಣ ಕಾರ್ಮಿಕರನ್ನು ಗಣತಿ ನಡೆಸಿ ನೌಕರರೆಂದು ಪರಿಗಣಿಸಬೇಕು.
8. ಪೌರ ಕಾರ್ಮಿಕರು ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರನ್ನ ಕಾಯಂಗೊಳಿಸಿ.
9. ನರೇಗಾ ಯೋಜನೆಯನ್ನು 200 ದಿನಗಳಿಗೆ ಏರಿಸಿ, 600 ರೂ. ಗಳಿಗೆ ಕೂಲಿ ನಿಗದಿ ಮಾಡಿ.

ಕೊಳೆತ ವ್ಯವಸ್ಥೆ ಮತ್ತು ನೆಚ್ಚಿನ ರಂಜನಾ ಸಾವು..........

ಪುಟ 16 ರಿಂದ

ಅಗತ್ಯ" ಎಂದು ಸಂದೇಶ ಕಳುಹಿಸಿದ್ದರು. ಹಾಗಿದ್ದರೆ ಪ್ರತಿಜನಕ ಪರೀಕ್ಷೆಯ ನಿರ್ಣಯ ತಪ್ಪು ಅಥವಾ ನಕಾರಾತ್ಮಕ ಬಂದರೆ, ಕೋವಿಡ್ ಇಲ್ಲ ಎಂದಾದರೆ, ಇಲ್ಲಿಯೂ ಅವರನ್ನು ದಾಖಲಿಸಿಕೊಳ್ಳಲಾಗುವುದಿಲ್ಲ ಎಂದರ್ಥವೇ!? ಒಂದು ವಾರದ ನಂತರ ಆರೋಗ್ಯ ಸಚಿವಾಲಯದ ತಜ್ಞರ ಸಮಿತಿಯು ಹೈಕೋರ್ಟ್‌ನ ಆದೇಶವನ್ನು ಗಮನದಲ್ಲಿಟ್ಟುಕೊಂಡು ಆಸ್ಪತ್ರೆಗೆ ದಾಖಲಾಗಲು ಪರೀಕ್ಷೆಯ ಧನಾತ್ಮಕ ಪರಿಣಾಮದ ಕೊರತೆ ಅಡ್ಡಿಯಾಗಬಾರದು, ಎಂದು ಅವರು ಮಾರ್ಗಸೂಚಿಗಳನ್ನು ನೀಡಿದರು. ಆದರೆ ಅದು ಕೆಳಮಟ್ಟದ ಆಡಳಿತದಲ್ಲಿ ಬದಲಾವಣೆ ತಂದಿದೆಯೇ ಎಂಬುದು ಅನುಮಾನವಿದೆ.

ಪರೀಕ್ಷೆಯು ತಪ್ಪಾಗಿ ಇಲ್ಲದಿದ್ದರೆ ಏನಾಗುತ್ತಿತ್ತು? ರಂಜನಾ ರನ್ನು ಆಸ್ಪತ್ರೆಗಳು ದಾಖಲಿಸಿಕೊಳ್ಳಲು ನಿರಾಕರಿಸದಿದ್ದರೆ ಏನಾಗುತ್ತಿತ್ತು? ದಾಖಲಿಸಿಕೊಳ್ಳಲು ತೋರಿಸಿದ ವಿಳಂಬದಿಂದ ಅವರ ದೇಹದ ಸ್ಥಿತಿಯು ಮತ್ತೆ ಗುಣಪಡಿಸಲಾಗದ ರೀತಿಯಲ್ಲಿ ಹೆಚ್ಚು ಹದಗೆಡುವಂತೆ ಮಾಡಿತೆ?

ಇದೆಲ್ಲದರ ನಡುವೆ ಸರಕಾರ ನಡೆಸುತ್ತಿರುವ 'ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆ' ನಮ್ಮ ಜೀವ ಸೆಲೆಯಾಯಿತು. ಇಲ್ಲಿ ಅತ್ಯಂತ ಮಾನವೀಯ ಮತ್ತು ಸಹಾಯ ಮನೋವೃತ್ತಿಯ ಹಿರಿಯ ವೈದ್ಯರೊಬ್ಬರು ಆಸ್ಪತ್ರೆಯಲ್ಲಿನ 'ಸಾರಿ' (SARI - Severe Acute Respiratory Illness) ವಿಭಾಗದ ಬಗ್ಗೆ ಮಾಹಿತಿ ನೀಡಿದರು. 'ಸಾರಿ' ತೀವ್ರವಾದ ಉಸಿರಾಟದ ಕಾಯಿಲೆ ಇರುವವರಿಗಾಗಿ ಇರುವ ವಿಭಾಗ. ಇಲ್ಲಿ ಕೋವಿಡ್ ಲಕ್ಷಣಗಳನ್ನು ಹೊಂದಿದ್ದು ಮತ್ತು ಕೋವಿಡ್ ಪರೀಕ್ಷೆಯ ಪೊಸಿಟಿವ್ ಇಲ್ಲದ ರೋಗಿಗಳನ್ನು ಸಹ ದಾಖಲಿಸಿಕೊಳ್ಳಲಾಗುತ್ತದೆ. ಇಲ್ಲಿ ಸೀಮಿತ ಹಾಸಿಗೆಗಳು ಇವೆ. ಇಲ್ಲಿ ನಮಗೆ ಹಾಸಿಗೆ ಸಿಕ್ಕಿದ್ದು ನಮ್ಮ ಅದೃಷ್ಟ. ಇಲ್ಲಿ ಕೆಲವೇ ಆಸ್ಪತ್ರೆಗಳಲ್ಲಿ ಇಂತಹ ವಾರ್ಡ್‌ಗಳು ಇವೆ. ಇಂತಹ ವಾರ್ಡ್‌ಗಳನ್ನು ಇನ್ನೂ ಅನೇಕ ಆಸ್ಪತ್ರೆಗಳಲ್ಲಿ ಪ್ರಾರಂಭಿಸಬೇಕು. ಇದು ಕೋವಿಡ್ ಶಂಕಿತ ರೋಗಿಗಳಿಗೆ, ಕೋವಿಡ್ ಪರೀಕ್ಷೆಯ ಧನಾತ್ಮಕ ಪರಿಣಾಮವಿಲ್ಲದವರಿಗೆ ಚಿಕಿತ್ಸೆ ನೀಡಲು ಪರಿಣಾಮಕಾರಿಯಾಗಿದೆ.

ದಾಖಲಾದ 2ರಿಂದ 3 ದಿನಗಳಲ್ಲಿ ಆಸ್ಪತ್ರೆ ಮತ್ತೊಮ್ಮೆ ರಂಜನಾವರ ಕೊವಿದ್ ಪರೀಕ್ಷೆ ಮಾಡಿತು. ಆಗ ಪರಿಣಾಮ ಧನಾತ್ಮಕ ಬಂದಿತು. ಇದಾದ ನಂತರ ರಂಜನಾ ರನ್ನು 'ಸಾರಿ' ವಿಭಾಗದಿಂದ ಕೋವಿಡ್ ವಿಭಾಗಕ್ಕೆ ಸ್ಥಳಾಂತರಿಸಲಾಯಿತು. ಕೋವಿಡ್ ರೋಗಿ ಆಸ್ಪತ್ರೆಗೆ ದಾಖಲಾದ ಮೇಲೆ ಮತ್ತು ಅವರ ಕುಟುಂಬದವರು ಎದುರಿಸುವ ಸಾಮಾನ್ಯ ಸಮಸ್ಯೆಗಳನ್ನು ನಾವು ಎದುರಿಸಿದವು. ಕೋವಿಡ್ ವಾರ್ಡ್ ಅಥವಾ ಐಸಿಯುನ ಗೋಡೆಗಳ ಆಚೆ ನಮ್ಮ ಪ್ರೀತಿಪಾತ್ರರ ಜೊತೆ ಏನಾಗುತ್ತಿದೆ ಎಂಬುದು ಹಗಲು–ರಾತ್ರಿ ಕಾಡುತ್ತಿರುತ್ತದೆ. ವೈದ್ಯಕೀಯ ಸಿಬ್ಬಂದಿಯ ಮೇಲಿನ ಅತಿಯಾದ ಹೊರೆ ಮತ್ತು ಅವರ ಕೆಲಸದ ಅವಧಿಯ ವಿಸ್ತರಣೆಯಿಂದ ರೋಗಿಯ ಅತ್ಯುತ್ತಮವಾದ ಸಿಬ್ಬಂದಿಯ ಆರೈಕೆಯಲ್ಲಿದ್ದಾಗಲೂ, ವೈಯಕ್ತಿಕವಾದ ಆರೈಕೆಯಿಂದ ವಂಚಿತರಾಗುತ್ತಿರುವುದು ಮತ್ತು ಅವರೊಂದು ಭಯಾನಕ ಒಂಟಿತನದಲ್ಲಿ ತಮ್ಮ ಸಮಯ ಕಳೆಯುತ್ತಿರುವುದು ನೆನೆದರೆ ಎದೆ ನಡುಗುತ್ತದೆ. ರೋಗಿ ತನ್ನ ಕುಟುಂಬದೊಂದಿಗೆ ಫೋನಿನಲ್ಲಿ ಮಾತಾಡುತ್ತಿದ್ದರೆ ಮಾತ್ರ ಪ್ರೀತಿಪಾತ್ರರಿಗೆ ಸ್ವಲ್ಪ ನಿರಮ್ಮಳತೆ ಇರುತ್ತದೆ. ಆದರೆ ಒಮ್ಮೆ ಆಕ್ಸಿಜನ್ ಮುಖ ಕವಚ ಹಾಕಿಕೊಂಡರೆ, ಉಸಿರಾಡಲು ಕಷ್ಟ ಪಡುವಾಗ, ನಮ್ಮವರ ಜೊತೆ ಮಾತಾಡುವ ಫೋನ್ ಎಂಬ ಕೊನೆಯ ಕೊಂಡಿಯೂ ಕಳಚಿಕೊಳ್ಳುತ್ತದೆ.

'ಸಾರಿ' ವಾರ್ಡ್ ನಲ್ಲಿ ರೋಗಿಗೆ ನೋಡಿಕೊಳ್ಳುವವರನ್ನು ಪಿಪಿಇ ಕೀಟ್ ಗಳನ್ನು ಧರಿಸಿ ಒಳಗೆ ಬಿಡಲಾಗುತ್ತಿತ್ತು. ಕೋವಿಡ್ ವಾರ್ಡ್‌ನಲ್ಲಿ ಸಂಪೂರ್ಣ ಬೇರೆ ರೀತಿಯೇ ಇದೆ. ರೋಗಿಗೆ ವೈಯಕ್ತಿಕ ಆರೈಕೆಯ ಅಗತ್ಯವಿದೆ ಎಂಬುದು ವೈದ್ಯರಿಗೆ ಗೊತ್ತಾಗುತ್ತಿದ್ದರೂ, ಅದು ನಿಯಮಕ್ಕೆ ವಿರುದ್ಧವಾದದ್ದು ಎಂದು ಅವರೂ ಅಸಹಾಯಕರಾಗಿದ್ದರು. ರೋಗಿಗಳನ್ನು ಪ್ರತ್ಯೇಕಿಸುವ ಕಟ್ಟುನಿಟ್ಟಿನ ನೀತಿ ಅವಶ್ಯಕವಾದದ್ದು ಮತ್ತು ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಪಿಪಿಇ ಕಿಟ್‌ಗಳನ್ನು ಹಾಕಿಕೊಂಡ ನರ್ಸ್‌ಗಳು ಮತ್ತು ಸಿಬ್ಬಂದಿ ವರ್ಗದವರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೆಲಸ ಮಾಡುವಂತೆಯೇ, ರೋಗಿಯ ಪರಿವಾರದವರು ತಯಾರಿದ್ದರೆ ಅವರಿಗೂ ಸಹ ಪಿಪಿಇ ಕಿಟ್‌ಗಳನ್ನು ಕೊಟ್ಟು ರೋಗಿಯು ವೇಗವಾಗಿ ಗುಣಮುಖವಾಗಲು ದಿನಕ್ಕೊಂದು ಬಾರಿಯಾದರೂ ಅವಕಾಶ ನೀಡಬಹುದಲ್ಲವೇ? ರಂಜನಾ ಅವರಿಗೆ ವೈಯಕ್ತಿಕ ಆರೈಕೆ ಸಿಕ್ಕಿತು. ಅದು ಅವರಿಗೆ ಹಾಗೂ ಕುಟುಂಬದವರಿಗೆ ಅಗಾಧ ಸಹಾಯ ಮಾಡಿತು. ಆದರೆ ಬೇರೆ ರೋಗಿಗಳ ಬಗ್ಗೆ ಏನು? ಹೇಗೆ?

ಮಗನನ್ನು ಕಳೆದುಕೊಂಡ ದುಖಿತ ತಾಯಿ "ನನ್ನನ್ನು ನಾನೇ ಶಪಿಸಿಕೊಳ್ಳುತ್ತೇನೆ. ಅವನು ಒಬ್ಬಂಟಿಯಾಗಿ ಅನಾರೋಗ್ಯದಿಂದ ಒದ್ದಾಡುವಾಗ ನನಗೆ ಅವನೊಂದಿಗೆ ಇರಲು ಆಗಲಿಲ್ಲ. ಅದಕ್ಕಾಗಿ ನನ್ನನ್ನು ನಾನು ಕ್ಷಮಿಸಲು ಸಾಧ್ಯವಿಲ್ಲ" ಎಂದು ರೋಧಿಸುತ್ತಿದ್ದಳು. ರಂಜನಾರನ್ನು ದಾಖಲಿಸಿದ ವಾರ್ಡಿನ ಹೊರಗೆ ಯುವತಿಯೊಬ್ಬಳು, ನೋವಿನಿಂದ ಬಳಲುತ್ತಿದ್ದ ತನ್ನ ತಂದೆಯ ಬಗೆಗಿನ ಸುದ್ದಿಗಾಗಿ ಕಾಯುತ್ತಿದ್ದಳು. ಅವಳು ಬೆಳಿಗ್ಗೆಯಿಂದಲೇ ತಂದೆಯ ಬಗ್ಗೆ ತಿಳಿದುಕೊಳ್ಳಲು ಮತ್ತು ಅವರಿಗೆ ಬೇಕಾದ ಕೆಲವೊಂದು ವೈಯಕ್ತಿಕ ವಸ್ತುಗಳನ್ನು ಕೊಡಲು ಕಾಯುತ್ತಿದ್ದಳು. ಅವರಿಗೆ ಶೌಚಾಲಯಕ್ಕೆ ಹೋಗಬೇಕಿದೆ, ಆದರೆ ಅಲ್ಲಿ ಅವರಿಗೆ ಸಹಾಯ ಮಾಡಲು ಯಾರು ಇಲ್ಲ, ಎಂದು ಅವರು ಕಳಿಸಿದ ಸಂದೇಶ ನೋಡಿದಾಗಿನಿಂದ ಅವಳು ತುಂಬಾ ಕಳವಳಗೊಂಡಿದ್ದು ಮತ್ತು ಗಾಬರಿಯಾಗಿದ್ದಳು. ಸಹಾಯಕ್ಕಾಗಿ ಇರುವವರಿಗೆ ಅವಳ ಸಂದೇಶವನ್ನು ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಅನೇಕ ಸಂದೇಶಗಳು ಅವರಲ್ಲಿ ಇದ್ದವು. ಅವಳಂತೆ ಅಲ್ಲಿ ಅನೇಕರು ತಮ್ಮವರ ಬಗ್ಗೆ ತಿಳಿದುಕೊಳ್ಳಲು ಮತ್ತೆ ಅವರಿಗೆ ಸಂದೇಶ ಕಳುಹಿಸಲು ಕಾದುಕುಳಿತಿದ್ದರು. ಅಲ್ಲಿ ನಿಯಮಿತವಾಗಿ ರೋಗಿಗಳ ಕುಟುಂಬಗಳಿಗೆ ಅವರ ಸ್ಥಿತಿ ತಿಳಿಸಲು ಯಾವುದೇ ರೀತಿಯ ವ್ಯವಸ್ಥೆಯೂ ಇರಲಿಲ್ಲ.

ತಮ್ಮ ಆತ್ಮೀಯರಿಗೆ ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಲಾಗಿದೆ ಎನ್ನುವ ಸುದ್ದಿಯೇ ಅವರ ಕುಟುಂಬಗಳಿಗೆ ನಿರಮ್ಮಳತೆ ನೀಡುವಂತಹ ಸ್ಥಿತಿ ಇಂದು ಬಂದಿದೆ. ಆದರೆ ಅವರು ಒಮ್ಮೆ ಒಳಗೆ ಹೋದರೆ ನಂತರ ಅವರ ಮಾಹಿತಿಗಾಗಿ ಹತಾಶೆಯಿಂದ ಕಾಯುವುದು ಅವರಲ್ಲಿ ಇನ್ನಷ್ಟು ಆತಂಕ ಹೆಚ್ಚಿಸುತ್ತದೆ. ಇವೆಲ್ಲವುಗಳಿಗೆ ವೈದ್ಯಕೀಯ ಸಿಬ್ಬಂದಿಯದೇ ತಪ್ಪು ಎಂದು ಆರೋಪಿಸಲಾಗದು. ಆದರೆ ಇದಕ್ಕೆ ಪರಿಹಾರವನ್ನು ನಾವು ಹುಡುಕಬಹುದು. ಇಂತಹ ವಿಷಯಗಳನ್ನು ನಾವು ಚರ್ಚಿಸಿ ಅವುಗಳ ಬಗ್ಗೆ ಪರಿಹಾರ ಹುಡುಕಬೇಕು. ಕೋವಿಡ್ ನ ಎರಡನೇ ಅಲೆಯಲ್ಲಿ ಯುವಸಮುದಾಯ ಹೆಚ್ಚಿನ ಕಷ್ಟ ಅನುಭವಿಸುತ್ತಿದೆ ಮತ್ತು ಅವರಿಗೆ ಹೆಚ್ಚಿನ ಆರೈಕೆಯೊಂದಿಗೆ ಕುಟುಂಬದ ಬೆಂಬಲವೂ ಬೇಕಾಗಿದೆ. ಹಾಗಾಗಿ ಈ ಕಷ್ಟಗಳಿಗೆ ಪರಿಹಾರ ಆದಷ್ಟು ಬೇಗ ಹುಡುಕಲೇಬೇಕಿದೆ.

ಅಂತ್ಯ ಸಂಸ್ಕಾರಕ್ಕಾಗಿ ಆಸ್ಪತ್ರೆಯು ಕುಟುಂಬದವರಿಗೆ ಅನುವು ಮಾಡಿ ಕೊಟ್ಟಿರುವುದಕ್ಕೆ ಜನ ಅವರಿಗೆ ಕೃತಜ್ಞರಾಗಿರುತ್ತಾರೆ. ಸ್ಮಶಾನದಲ್ಲಿನ ಭಯಾನಕ ಕಥೆಗಳು ನಮಗೆ ನೇರವಾಗಿ ತಟ್ಟಲಿಲ್ಲ, ಏಕೆಂದರೆ ಅಲ್ಲಿ ಕಟ್ಟುನಿಟ್ಟಿನ ಸಮಯವನ್ನು ಪಾಲಿಸಲಾಗುತ್ತಿದ್ದು ಒಂದು ಅವಧಿಯಲ್ಲಿ ಸಂಬಂಧಿಸಿದವರು ಮಾತ್ರ ಇರುತ್ತಿದ್ದರು. ನಮ್ಮ ಪ್ರೀತಿಯ ಸಂಗಾತಿಗೆ ಗೌರವಾನ್ವಿತ ವಿದಾಯ ನೀಡಲಾಯಿತು.

ಆಸ್ಪತ್ರೆಗೆ ದಾಖಲಾದ ನಂತರ ರಂಜನಾ ಯಾವುದೇ ರೀತಿಯ ಚಿಕಿತ್ಸೆಯಿಂದ ವಂಚಿತರಾಗಲಿಲ್ಲ. ಅವರನ್ನು ನೋಡಿಕೊಂಡ ಎಲ್ಲಾ ವೈದ್ಯರಿಗೆ ಮತ್ತು ನರ್ಸ್‌ಗಳಿಗೆ ನಾವು ಧನ್ಯವಾದ ಹೇಳಲೇಬೇಕು. ಅದೇನೇ ಇದ್ದರೂ ಒಂದು ಪ್ರಶ್ನೆ ಹಾಗೆಯೇ ಉಳಿದು ಬಿಟ್ಟಿತು. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೇ, ವೈಯಕ್ತಿಕ ಆರೈಕೆ ಇಲ್ಲದೆ ಸತ್ತ ಸಾವಿರಾರು ಜನರ ಕಥೆಯೇನು? ಅವರಿಗೆ ಚಿಕಿತ್ಸೆಯೊಂದಿಗೆ ವೈಯಕ್ತಿಕ ಆರೈಕೆ, ಪ್ರೀತಿ, ಪ್ರೋತ್ಸಾಹ ಸಿಕ್ಕಿದ್ದರೆ ಅವರೆಲ್ಲರ ಕತೆ ಬೇರೆಯೇ ಇರುತ್ತಿತ್ತು. ಇದು ಆಡಳಿತ ಮತ್ತು ಆರೋಗ್ಯ ಆರೈಕೆ ವ್ಯವಸ್ಥೆಯ ಅದ್ಭುತ ಕುಸಿತ.

ಆತ್ಮೀಯ ಒಡನಾಡಿ, ಪ್ರೀತಿಯ ಸಂಗಾತಿಗೆ ಕೆಂಪು ವಂದನೆಗಳು. ನೀವು ಸದಾ ನಮ್ಮೆಲ್ಲರ ಹೃದಯದಲ್ಲಿ ಅಮರ.

ಕೋವಿಡ್ ಲಸಿಕೆಯ ಪೂರೈಕೆಯಲ್ಲೂ 'ಉದಾರೀಕರಣ'ದ ಗೀಳು!!



ಕೋವಿಡ್-19 ಸೋಂಕಿನ ಪ್ರಸ್ತುತ ಬಿಕ್ಕಟ್ಟು ಯುದ್ಧದಂತಹ ಪರಿಸ್ಥಿತಿಗೆ ಹೋಲುತ್ತದೆ. ಯುದ್ಧವನ್ನು ಗೆಲ್ಲಲು ಅಗತ್ಯವಿರುವ ದೂರಗಾಮಿ ಕ್ರಮಗಳನ್ನು ಕೈಗೊಳ್ಳುವುದಕ್ಕಿಂತ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲದ ಕ್ರಮಗಳ ಮೂಲಕ ಕೋವಿಡ್ ಬಿಕ್ಕಟ್ಟನ್ನು ನಿಭಾಯಿಸಬೇಕಾಗಿದೆ. ಆದರೆ ಹಾಗೆ ಮಾಡುವ ಬದಲು, ಲಸಿಕೆಗಳ ಕೊರತೆಯ ಜೊತೆಗೆ ಸಾಂಕ್ರಾಮಿಕವು ರಭಸವಾಗಿ ಹರಡುತ್ತಿರುವ ಸನ್ನಿವೇಶದಲ್ಲೂ ಮೋದಿ ಸರಕಾರ ಲಸಿಕೆಗಳ ಮಾರಾಟವನ್ನು ಉದಾರೀಕರಿಸುವ ಅತ್ಯಂತ ಬುದ್ದಿಗೇಡಿ ಕ್ರಮ ಕೈಗೊಂಡಿದೆ. ಈ ಮೂಲಕ ಅದು ಜಾಗತಿಕ ಹಣಕಾಸು ಬಂಡವಾಳದ ಪ್ರತಿಕ್ರಿಯೆಯ ಬಗ್ಗೆ ಮಾತ್ರ ತಲೆ ಕೆಡಿಸಿಕೊಂಡಿರುವಂತೆ ಕಾಣುತ್ತದೆ. ಇದು ಸಂಪೂರ್ಣ ಅಮಾನವೀಯತೆಯನ್ನು ತೋರುತ್ತದೆ. ಲಕ್ಷ ಲಕ್ಷ ಜನರ ಜೀವನವೇ ಅಪಾಯದಲ್ಲಿರುವಾಗ, ಜಾಗತಿಕ ಹಣಕಾಸು ಬಂಡವಾಳದ ಪ್ರತಿಕ್ರಿಯೆಗಳ ಬಗ್ಗೆ ಚಿಂತಿಸುವುದೇ ಅಪರಾಧ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಮೋದಿ ಸರ್ಕಾರವು ತೆಗೆದುಕೊಂಡಿರುವ ನಿರ್ಣಯಗಳ ಪೈಕಿ, ಅತ್ಯಂತ ಬುದ್ಧಿಹೀನವಾದದ್ದೆಂದು ಹೇಳಬಹುದಾದ ನಿರ್ಧಾರವೆಂದರೆ, ಲಸಿಕೆಗಳ ವಿತರಣೆಗೆ ಸಂಬಂಧಿಸಿದ ಉದಾರೀಕರಣವೇ. ಆರಂಭದಲ್ಲಿ, ಕೋವಿಶೀಲ್ಡ್ ಮತ್ತು ಕೊವಾಕ್ಸಿನ್ ಲಸಿಕೆಗಳನ್ನು ಉತ್ಪಾದಿಸುವ ಸೀರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮತ್ತು ಭಾರತ್ ಬಯೋಟೆಕ್ ಈ ಎರಡೂ ಸಂಸ್ಥೆಗಳು ಉತ್ಪಾದಿಸುವ ಎಲ್ಲಾ ಲಸಿಕೆಗಳನ್ನೂ ಪ್ರತಿ ಡೋಸ್‌ಗೆ 150 ರೂ ಗಳಂತೆ ತಾನೇ ಕೊಳ್ಳುವುದಾಗಿ ಮತ್ತು ಅವುಗಳನ್ನು ರಾಜ್ಯಗಳ ಮೂಲಕ ಜನರಿಗೆ ಉಚಿತವಾಗಿ ಒದಗಿಸುವ ಸಮಯದಲ್ಲಿ ಖಾಸಗಿ ಆಸ್ಪತ್ರೆಗಳಿಗೂ ಸಹ ಒದಗಿಸುವುದಾಗಿ ಕೇಂದ್ರ ಸರ್ಕಾರ ಹೇಳಿತ್ತು. ಈ ಖಾಸಗಿ ಆಸ್ಪತ್ರೆಗಳು ಲಸಿಕೆಗಳನ್ನು ಪಡೆಯಲು ಕೇಂದ್ರ ಸರ್ಕಾರಕ್ಕೆ ಹಣ ಪಾವತಿಸುವ ಕಾರಣದ ಮೇಲೆ ಪ್ರತಿ ಡೋಸ್‌ಗೆ 250 ರೂ ಶುಲ್ಕ ವಿಧಿಸುತ್ತಿದ್ದವು. ಆದರೆ, ಇದ್ದಕ್ಕಿದ್ದಂತೆಯೇ, ಕೇಂದ್ರ ಸರ್ಕಾರವು ಲಸಿಕೆಗಳ ಮಾರಾಟವನ್ನು ಉದಾರಗೊಳಿಸಿದೆ. ಹಾಗಾಗಿ, ಕೇಂದ್ರ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳು, ತಯಾರಿಕಾ ಸಂಸ್ಥೆಗಳಿಂದಲೇ ನೇರವಾಗಿ ಲಸಿಕೆಗಳನ್ನು ಖರೀದಿ ಮಾಡಬೇಕಿದೆ.

ಲಸಿಕೆಗಳ ಕೊರತೆ ಕಾಡುತ್ತಿರುವ ಸಮಯದಲ್ಲಿ ಮತ್ತು ಸಾಂಕ್ರಾಮಿಕವು ಭೀಕರವಾಗಿ ಹರಡುತ್ತಿರುವ ಸನ್ನಿವೇಶದಲ್ಲಿ, ಕೇಂದ್ರ ಸರ್ಕಾರವು ಲಸಿಕೆಗಳ ಮಾರಾಟವನ್ನು ಉದಾರಗೊಳಿಸಿದೆ. ಈ ಕ್ರಮವನ್ನು ಲಸಿಕೆ ತಯಾರಿಕಾ ಸಂಸ್ಥೆಗಳು ಹಿಗ್ಗಿನಿಂದ ಸ್ವಾಗತಿಸಿವೆ. ಲಸಿಕೆಗಳ ಬೆಲೆಗಳನ್ನು ಉತ್ಪಾದನೆಯ ವೆಚ್ಚಕ್ಕೆ ಸಂಬಂಧವಿಲ್ಲದೆ ಮತ್ತು ಮನಸ್ಸಿಗೆ ತೋಚಿದಂತೆ ನಿಗದಿಪಡಿಸಿವೆ. ನಂತರ, ರಾಜ್ಯ ಸರ್ಕಾರಗಳಿಗೆ ಮಾರುವ ಲಸಿಕೆಗಳ ದರ ಇಳಿಸಿರುವುದಾಗಿ ಹೇಳಿವೆ.

ಅನೇಕ ರಾಜ್ಯ ಸರ್ಕಾರಗಳು ಜನರಿಗೆ ಉಚಿತವಾಗಿ ಲಸಿಕೆಯನ್ನು ಹಾಕುವ ಬಯಕೆಯನ್ನು ಘೋಷಿಸಿವೆ. ಆದರೆ, ಹಣದ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿರುವ ವಿಷಮ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರಗಳ ಈ ಬಯಕೆ ಈಡೇರುತ್ತದೆಯೇ? ಖಾಸಗಿ ಆಸ್ಪತ್ರೆಗಳು ಲಸಿಕೆಗಳನ್ನು ದುಬಾರಿ ಬೆಲೆಯಲ್ಲಿ ಕೊಂಡರೂ ಸಹ, ಅದಕ್ಕಿಂತಲೂ ಹೆಚ್ಚಿನ ಶುಲ್ಕವನ್ನು ಲಸಿಕೆ ಚುಚ್ಚಿಸಿಕೊಂಡವರಿಂದ ವಸೂಲು ಮಾಡುವುದರಿಂದ ಅವರಿಗೆ ಸಮಸ್ಯೆ ಇಲ್ಲ. ಆದರೆ, ಒಂದು ಬಹುದೊಡ್ಡ ಸಂಖ್ಯೆಯ ಜನರು ಲಸಿಕೆ ಪಡೆಯಲು ದೊಡ್ಡ ಮೊತ್ತದ ಹಣವನ್ನು ತೆರಬೇಕಾಗುತ್ತದೆ.

ಈ ಸಂಬಂಧವಾಗಿ ಅನೇಕರು ಕೇಳುವ ಪ್ರಶ್ನೆ ಎಂದರೆ, ಖಾಸಗಿ ಆಸ್ಪತ್ರೆಗಳನ್ನು ಪೋಷಿಸುವ ಕೆಲವು ಅನುಕೂಲಸ್ತರು ಲಸಿಕೆ ಪಡೆಯಲು ಹೆಚ್ಚು ಹಣ ತೆತ್ತರೆ ತಪ್ಪೇನು? ಅವರು ಪಡೆಯುವ ಲಸಿಕೆಗೆ ಸರ್ಕಾರ ಏಕೆ ಸಹಾಯ ಧನ ಕೊಡಬೇಕು? ಈ ಪ್ರಶ್ನೆಗಳಿಗೆ ಎರಡು ಸ್ತರಗಳಲ್ಲಿ ಉತ್ತರ ಕೊಡಬಹುದು.

ಮೊದಲನೆಯದಾಗಿ, ಉತ್ಪಾದನೆಯ ಅರ್ಧಭಾಗವನ್ನು ಇತರರಿಗೆ ಅವಕಾಶ ಸಿಗುವ ಮೊದಲು ಕೊಳ್ಳುವ ಹಕ್ಕನ್ನು ಕೇಂದ್ರ ಸರ್ಕಾರ ಹೊಂದಿದೆ. ಆದ್ದರಿಂದ, ಉಳಿದ ಅರ್ಧ ಭಾಗ ಲಸಿಕೆಗಳನ್ನು ಕೊಳ್ಳಲು ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಪೈಪೋಟಿ ಆರಂಭವಾಗುತ್ತದೆ. ಆಗ, ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಿನ ದರ ನಿಗದಿಪಡಿಸಿರುವುದರಿಂದ ಮತ್ತು ಈ ಮಾರಾಟದಿಂದ ಹೆಚ್ಚು ಲಾಭ ಸಿಗುವುದರಿಂದ ಹಾಗೂ ತಕ್ಷಣದಲ್ಲಿ ಲಸಿಕೆಗಳ ಕೊರತೆ ಇರುವುದರಿಂದ, ಲಸಿಕೆಗಳ ಹೆಚ್ಚಿನ ಭಾಗವನ್ನು ಖಾಸಗಿ ಆಸ್ಪತ್ರೆಗಳತ್ತ ತಿರುಗಿಸಲಾಗುತ್ತದೆ. ರಾಜ್ಯ ಸರ್ಕಾರಗಳಿಗೆ ಲಸಿಕೆಗಳ ಅಭಾವ ಎದುರಾಗುತ್ತದೆ. ಈ ಪರಿಸ್ಥಿತಿಯಲ್ಲಿ, ಸಾಕಷ್ಟು ಮಂದಿ ಬಡವರೂ ಸಹ ಲಸಿಕೆ ಪಡೆಯಲು ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೇ ಹೋಗುತ್ತಾರೆ. ಹಾಗಾಗಿ, ಲಸಿಕೆಯ ದುಬಾರಿ ಬೆಲೆಯ ಹೊರೆ ಕೇವಲ ಶ್ರೀಮಂತರ ಮೇಲೆ ಮಾತ್ರವಲ್ಲ, ಬಡ ಜನರ ಮೇಲೂ ಬೀಳುತ್ತದೆ. ರಾಜ್ಯ ಸರ್ಕಾರಗಳಿಗೆ ಎಷ್ಟು ಲಸಿಕೆಗಳು ಪೂರೈಕೆಯಾಗಲಿವೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಎಷ್ಟು ಲಸಿಕೆಗಳು ಪೂರೈಕೆಯಾಗಲಿವೆ ಎಂಬುದನ್ನು ನಿಗದಿಪಡಿಸುವ ಮೊದಲೇ ಎರಡು ಬಗೆಯ ದರಗಳನ್ನು ನಿಗದಿಪಡಿಸಿ ಪೈಪೋಟಿ ಏರ್ಪಡಿಸಿರುವುದು ಒಂದು ಸಂಪೂರ್ಣ ಬುದ್ಧಿಹೀನ ಕ್ರಮವೇ. ಮೋದಿ ಸರ್ಕಾರವು ಮಾಡಿರುವುದು ಇದನ್ನೇ.

ಎರಡನೆಯದಾಗಿ, ಮತ್ತು ಇನ್ನೂ ಮೂಲಭೂತವಾಗಿ, ಲಸಿಕೆಯನ್ನು ಉಚಿತವಾಗಿ ಒದಗಿಸಿದಾಗ ಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯ ಜೀವಿಸುವ ಹಕ್ಕನ್ನು ಮಾನ್ಯ ಮಾಡಿದಂತಾಗುತ್ತದೆ. ಜೀವಿಸುವ ಹಕ್ಕು ಒಂದು ಸಾರ್ವತ್ರಿಕ ಹಕ್ಕು. ಅದರ ಸಾರ್ವತ್ರಿಕತೆಯನ್ನು ಏಕರೂಪದ ಬೆಲೆಯ ಮೂಲಕವೇ ವ್ಯಕ್ತಪಡಿಸಬೇಕಾಗುತ್ತದೆ. ಈ ಏಕರೂಪದ ಬೆಲೆಯು ಸೊನ್ನೆಯೇ ಆಗಿರಬೇಕಾಗುತ್ತದೆ. ವಿಧಿವತ್ತಾಗಿ ನಿಗದಿಪಡಿಸಿದ ಬೆಲೆಯು, ಏಕರೂಪದ್ದೇ ಇರಲಿ ಅಥವಾ ನಾನಾ ರೂಪದ್ದೇ ಇರಲಿ, ವಿಭಿನ್ನ ವ್ಯಕ್ತಿಗಳ ಮೇಲೆ, ಅವರವರ ವರಮಾನವನ್ನು ಆಧರಿಸಿ, ವಿಭಿನ್ನ ಪರಿಣಾಮವನ್ನು ಬೀರುವುದರಿಂದ ಪ್ರಭುತ್ವವು ವಿಭಿನ್ನ ವ್ಯಕ್ತಿಗಳ ಜೀವಿಸುವ ಹಕ್ಕನ್ನು ವಿಭಿನ್ನ ಮೌಲ್ಯಗಳ ಮೂಲಕ ಗುರುತಿಸಿದಂತಾಗುತ್ತದೆ. ಆದ್ದರಿಂದ, ಪ್ರಭುತ್ವದ ದೃಷ್ಟಿಯಲ್ಲಿ ಎಲ್ಲ ಜೀವಗಳೂ ಸಮಾನ ಮೌಲ್ಯ ಹೊಂದಿವೆ ಎಂಬ ಪ್ರತಿಪಾದನೆಯನ್ನು ಅಭಿವ್ಯಕ್ತಿಗೊಳಿಸುವ ಏಕೈಕ ಮಾರ್ಗವೆಂದರೆ, ಲಸಿಕೆಗಳನ್ನು ಎಲ್ಲರಿಗೂ ಉಚಿತವಾಗಿ ಒದಗಿಸುವುದೇ.

ಒಂದು ನಿರ್ದಿಷ್ಟ ವಯಸ್ಸಿನ ಎಲ್ಲ ನಾಗರಿಕರೂ ಮತದಾನದ ಹಕ್ಕನ್ನು ಹೊಂದಿರುವ ರೀತಿಯಲ್ಲಿ, ಸಾರ್ವತ್ರಿಕ ಹಕ್ಕಾಗಿರುವ ಮತದಾನದ ಹಕ್ಕನ್ನು ಯಾವುದೇ ಪಾವತಿಯೊಂದಿಗೆ ಷರತ್ತುಬದ್ಧಗೊಳಿಸಲು ಸಾಧ್ಯವಿಲ್ಲವೋ (ಅಂತಹ ಪಾವತಿಯು ಸಮಾನತೆಯನ್ನು ಉಲ್ಲಂಘಿಸುತ್ತದೆ, ಮತ್ತು, ಮತದಾನದ ಹಕ್ಕಿನ ಸಾರ್ವತ್ರಿಕತೆಯನ್ನೂ ಉಲ್ಲಂಘಿಸುತ್ತದೆ), ಅದೇ ರೀತಿಯಲ್ಲಿ ಮತ್ತು ಪ್ರಸಕ್ತ ಪರಿಸ್ಥಿತಿಯಲ್ಲಿ, ಪ್ರತಿಯೊಬ್ಬರ ಜೀವಿಸುವ ಹಕ್ಕು ಲಸಿಕೆಯನ್ನು ಆಧರಿಸಿರುವುದರಿಂದ, ಅದನ್ನು ಉಚಿತವಾಗಿಯೇ ಪಡೆಯುವ ಹಕ್ಕನ್ನು ಎಲ್ಲರೂ ಹೊಂದಿದ್ದಾರೆ.


ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ಒದಗಿಸಲು ಬೇಕಾಗುವಷ್ಟು ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ಸರ್ಕಾರವು ಭಿನ್ನ ಭಿನ್ನ ಜನರಿಗೆ ಭಿನ್ನ ಭಿನ್ನ ತೆರಿಗೆ ವಿಧಿಸಬೇಕಾಗುತ್ತದೆ. ಅದು ಸರಿಯೂ ಹೌದು, ಅವಶ್ಯವೂ ಹೌದು. ಆದರೆ, ಲಸಿಕೆ ಪಡೆಯುವುದಕ್ಕೂ ಮತ್ತು ತೆರಿಗೆಯ ವಿಷಯಕ್ಕೂ ಯಾವುದೇ ಸಂಬಂಧವಿರಬಾರದು. ಅಂದರೆ, ಲಸಿಕೆ ಪಡೆಯುವ ಅವಕಾಶ ಸಾರ್ವತ್ರಿಕವಾಗಿರಬೇಕು ಮತ್ತು ತೆರಿಗೆಯ ವಿಷಯವನ್ನು ಪ್ರತ್ಯೇಕವಾಗಿಯೇ ನೋಡಬೇಕು. ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ಒದಗಿಸಬೇಕಾದರೆ, ಅಗತ್ಯ ಪ್ರಮಾಣದ ಲಸಿಕೆಗಳನ್ನು ಕೇಂದ್ರ ಸರ್ಕಾರವೇ ಇಡಿಯಾಗಿ ಸಂಗ್ರಹಿಸಿಕೊಂಡು ಅವುಗಳನ್ನು ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಆಸ್ಪತ್ರೆಗಳೂ ಸೇರಿದಂತೆ ವಿವಿಧ ಸಂಸ್ಥೆಗಳ ಮೂಲಕ ಜನರಿಗೆ ಒದಗಿಸಬೇಕು. ಲಸಿಕೆ ಹಾಕಲು ಖಾಸಗಿ ಆಸ್ಪತ್ರೆಗಳು ಈ ಹಿಂದೆ ವಸೂಲು ಮಾಡುತ್ತಿದ್ದ 250 ರೂ ಶುಲ್ಕವನ್ನು ನಿಲ್ಲಿಸಿ, ಇನ್ನು ಮುಂದೆ ಉಚಿತವಾಗಿ ಲಸಿಕೆಯನ್ನು ಹಾಕಬೇಕು.

ಲಸಿಕೆಗಳನ್ನು ಕೊಳ್ಳಲು ಕೇಂದ್ರ ಸರ್ಕಾರಕ್ಕೆ, ರಾಜ್ಯಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಮೂರು ಪ್ರತ್ಯೇಕ ಬೆಲೆಗಳನ್ನು ನಿಗದಿಪಡಿಸಲಾಗಿದೆ. ಅದಕ್ಕೂ ಮೊದಲು, ಕೇಂದ್ರ ಸರ್ಕಾರವು ಪ್ರತಿ ಡೋಸ್‌ಗೆ 150 ರೂ ಗಳಂತೆ ಲಸಿಕೆಗಳನ್ನು ಸಂಗ್ರಹಿಸಿತ್ತು. ಅಂದಿನಿಂದ ಇಂದಿನವರೆಗೆ ಉತ್ಪಾದನಾ ವೆಚ್ಚದಲ್ಲಿ ಯಾವ ಏರಿಕೆಯೂ ಆಗಿಲ್ಲ. ಆದ್ದರಿಂದ, ಕೇಂದ್ರ ಸರ್ಕಾರವು ಏಕೈಕ ಖರೀದಿದಾರನಾಗಿ ಅದೇ 150 ರೂ ಬೆಲೆಯಲ್ಲಿ ಲಸಿಕೆಗಳನ್ನು ಖರೀದಿಸಬೇಕು. 120 ಕೋಟಿ ಜನರಿಗೆ ಲಸಿಕೆ ಹಾಕಬೇಕಾಗುತ್ತದೆ ಎಂದು ಭಾವಿಸಿಕೊಂಡರೆ, ಪ್ರತಿಯೊಬ್ಬರಿಗೂ ಎರಡು ಡೋಸ್ ಲೆಕ್ಕದಲ್ಲಿ ತಗಲುವ ಒಟ್ಟು ವೆಚ್ಚವು 36,000 ಕೋಟಿ ರೂ. ಗಳಾಗುತ್ತದೆ.

ನರೇಂದ್ರ ಮೋದಿ ಅವರಿಗೆ ಬೇರೆ ಬೇರೆ ರಾಜಕೀಯ ಪಕ್ಷಗಳ ಹದಿಮೂರು ನಾಯಕರು ಇತ್ತೀಚೆಗೆ ಬರೆದಿರುವ ಒಂದು ಪತ್ರದಲ್ಲಿ, ಸರ್ಕಾರದ ಬಜೆಟ್ಟಿನಲ್ಲಿ ಲಸಿಕೆ ಹಾಕುವ ಉದ್ದೇಶಕ್ಕಾಗಿ ಮೀಸಲಿಟ್ಟ ಹಣವನ್ನು ಜನರಿಗೆ ಕೋವಿಡ್ ವಿರುದ್ಧ ಲಸಿಕೆ ಹಾಕುವ ಉದ್ದೇಶಕ್ಕಾಗಿಯೇ ಖರ್ಚು ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಸರ್ಕಾರವು ಒಂದು ವೇಳೆ ಅದನ್ನು ಮಾಡದಿದ್ದರೆ ಮತ್ತು ಅದಕ್ಕೆ ಬದಲಾಗಿ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಬಯಸಿದರೆ ಅದೂ ಉತ್ತಮವೇ, ವಿತ್ತೀಯ ಕೊರತೆಯನ್ನು ವಿಸ್ತರಿಸುವ ಮೂಲಕವಾದರೂ ಸರಿಯೇ, ಲಸಿಕೆ ಕಾರ್ಯಕ್ರಮವನ್ನು ತಕ್ಷಣವೇ ಕೈಗೊಳ್ಳಬೇಕು. ವಿತ್ತೀಯ ಕೊರತೆಯನ್ನು ನಿವಾರಿಸಿಕೊಳ್ಳಲು ಸಂಪನ್ಮೂಲಗಳನ್ನು ಕಾಲಾನಂತರ ಸಂಗ್ರಹಿಸಲು ಬಯಸುವುದಾದರೆ, ಅದೂ ಆಗಬಹುದು. ಅದಾಗದಿದ್ದರೆ, 36,000 ಕೋಟಿ ರೂ.ಗಳ ವಿತ್ತೀಯ ಕೊರತೆಗೆ ಅಧಿಕವಾಗಿ ಸೇರ್ಪಡೆಯಾಗುವ ಜಿಡಿಪಿಯ ಶೇಕಡಾ 0.2 ಕ್ಕಿಂತಲೂ ಕಡಿಮೆಯ ಕ್ಷುಲ್ಲಕ ಮೊತ್ತದ ಬಗ್ಗೆ ಆತಂಕಪಡುವಂತಿಲ್ಲ. ವಿತ್ತೀಯ ಕೊರತೆಯ ಸಂಬಂಧವಾಗಿ ಹಣಕಾಸು ಮಾರುಕಟ್ಟೆಗಳ ಪ್ರತಿಕ್ರಿಯೆಗಳ ಬಗ್ಗೆ ಸರ್ಕಾರ ತಲೆ ಕೆಡಿಸಿಕೊಳ್ಳುವುದು ಅನವಶ್ಯಕ. ಏಕೆಂದರೆ, ಈ ಹೆಚ್ಚಳವು ಅದೆಷ್ಟು ಸಣ್ಣದೆಂದರೆ, ಅವರ ಗಮನವನ್ನು ಆಕರ್ಷಿಸದಷ್ಟು ಸಣ್ಣದು. ಜೊತೆಗೆ, ಲಕ್ಷ ಲಕ್ಷ ಜನರ ಜೀವನವೇ ಅಪಾಯದಲ್ಲಿರುವಾಗ, ಜಾಗತಿಕ ಹಣಕಾಸು ಬಂಡವಾಳದ ಪ್ರತಿಕ್ರಿಯೆಗಳ ಬಗ್ಗೆ ಚಿಂತಿಸುವುದೇ ಅಪರಾಧ.

ಲಸಿಕೆಗಳ ಕೊರತೆಯ ಜೊತೆಗೆ ಸಾಂಕ್ರಾಮಿಕವು ರಭಸವಾಗಿ ಹರಡುತ್ತಿರುವ ಸನ್ನಿವೇಶದಲ್ಲಿ ಲಸಿಕೆಗಳ ಮಾರಾಟವನ್ನು ಉದಾರಗೊಳಿಸಿದ ಕೇಂದ್ರ ಸರ್ಕಾರ ಕ್ರಮದ ಬಗ್ಗೆ, ಅದರ ಹಿಂದಿರುವ ಸಂಪೂರ್ಣ ಅಮಾನವೀಯತೆಯನ್ನು ಹೊರತುಪಡಿಸಿ, ಒಂದು ವಿವರಣೆಯನ್ನು ಕೊಡುವುದಾದರೆ, ಜಾಗತಿಕ ಹಣಕಾಸು ಬಂಡವಾಳದ ಪ್ರತಿಕ್ರಿಯೆಯ ಬಗ್ಗೆ ಮಾತ್ರ ಅದು ತಲೆ ಕೆಡಿಸಿಕೊಂಡಿದೆ ಎಂದು ಹೇಳಬಹುದಷ್ಟೇ. ಕೋವಿಡ್ ಎರಡನೇ ಅಲೆಯು, ಮೊದಲ ಅಲೆಯು ವಯಸ್ಸಾದವರನ್ನೇ ಗುರಿಯಾಗಿಸಿಕೊಂಡಿದ್ದಕ್ಕಿಂತ ಭಿನ್ನವಾಗಿ, ವಯಸ್ಸಾದವರ ಮೇಲೆ ಅಪ್ಪಳಿಸಿದಷ್ಟೇ ಕಠಿಣವಾಗಿ ಯುವಕರ ಮೇಲೂ ಅಪ್ಪಳಿಸಿರುವುದರಿಂದ, ಲಸಿಕೆ ಹಾಕುವುದನ್ನು ಯುವಕರಿಗೂ ವಿಸ್ತರಿಸಬೇಕಾಗಿತ್ತು. ಆದರೆ, ಹಿಂದಿನ ಅಂದಾಜಿನಂತೆ ಲಸಿಕೆ ಹಾಕುವುದನ್ನು ದೊಡ್ಡ ಪ್ರಮಾಣದಲ್ಲಿ ಮುಂದುವರಿಸಿದ್ದೇ ಆಗಿದ್ದರೆ ವಿತ್ತೀಯ ಕೊರತೆಯು ಹೆಚ್ಚುತ್ತಿತ್ತು ಮತ್ತು ಅದರಿಂದಾಗಿ ಜಾಗತಿಕ ಹಣಕಾಸು ಬಂಡವಾಳವು ಮುಖ ತಿರುಗಿಸಿಕೊಳ್ಳುತ್ತಿತ್ತು ಎಂದು ಸರ್ಕಾರ ಭಯಪಟ್ಟಿದೆ ಎಂದೇ ಹೇಳಬಹುದು. ಆದರೆ, ಯಾವುದೇ ಸರ್ಕಾರವು, ಜಾಗತಿಕ ಹಣಕಾಸು

ಪುಟ 14 ನೋಡಿ




ಲಸಿಕೆ ಹಾಕಿಸುವತ್ತ- ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಕೇಂದ್ರ ಸರ್ಕಾರವು ಕೋವಿಶೀಲ್ಡ್‌ನ ಉತ್ಪಾದಕ ಎಸ್‌ಐಐಗೆ 3,000 ಕೋಟಿ ರೂ.ಗಳನ್ನು ಮತ್ತು ಕೊವಾಕ್ಸಿನ್‌ನ ಉತ್ಪಾದಕ ಭಾರತ್ ಬಯೋಟೆಕ್‌ಗೆ 1,500 ಕೋಟಿ ರೂ.ಗಳನ್ನು ಕೊಟ್ಟಿದೆ. ಸಾರ್ವಜನಿಕ ಹಣವನ್ನು ಸ್ವೀಕರಿಸಿರುವ ಎಸ್‌ಐಐ ಮತ್ತು ಭಾರತ್ ಬಯೋಟೆಕ್ ಸಂಸ್ಥೆಗಳು ಲಾಭಕೋರತನವನ್ನೇ ದಂಧೆಯಾಗಿ ಮಾಡಿಕೊಳ್ಳದಂತೆ ನೋಡಿಕೊಳ್ಳಲು, ಕೇಂದ್ರ ಸರ್ಕಾರಕ್ಕೆ ಪ್ರತಿ ಡೋಸ್‌ಗೆ 150 ರೂಗಳಂತೆ ಮಾರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪೂರೈಕೆ ವೇಳಾ-ಪಟ್ಟಿಯ ಪ್ರಕಾರ ಲಸಿಕೆ ಒದಗಿಸುವಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಈ ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಭಾರತ ಸರಕಾರದ ಪ್ರಾತಿನಿಧ್ಯವಿರಬೇಕು.

ಎರಡನೆಯದಾಗಿ, ಲಸಿಕೆಯ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರವು ಈ ಎರಡು ಸಂಸ್ಥೆಗಳ ಆಚೆಗೂ ಹೋಗಬೇಕು. ಪ್ರತಿ ಡೋಸ್ ಲಸಿಕೆಯನ್ನು 150ರೂಗಳಲ್ಲಿ ಕೊಳ್ಳಲು ಅನುವಾಗುವಂತೆ ಲೈಸೆನ್ಸ್ ಕಡ್ಡಾಯವನ್ನು ಬಳಸಿ ಹೊಸ ಉತ್ಪಾದನಾ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಸಾರ್ವಜನಿಕ ವಲಯದಲ್ಲಿಯೇ ಪ್ರಾರಂಭಿಸಬೇಕು.

ವ್ಯಂಗ್ಯಚಿತ್ರ: ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್



ಸಾಮೂಹಿಕ ಚೌಕಾಶಿ ಮಾಡದಿದ್ದರೆ "ಭಾರತ ಸಂಘ' ಎಂಬುದರಿಂದ ಪ್ರಯೋಜನವಾದರೂ ಏನು?

ಲಸಿಕೆಯ ಪೂರೈಕೆಯಲ್ಲೂ 'ಉದಾರೀಕರಣ'ದ ಗೀಳು!!

ಪುಟ 13 ರಿಂದ

ಬಂಡವಾಳದ ಪ್ರತಿಕ್ರಿಯೆಗಳಿಗೆ ಜನರ ಜೀವನಕ್ಕಿಂತಲೂ ಹೆಚ್ಚಿನ ಮಹತ್ವ ಕೊಟ್ಟರೆ, ಅದು ರಾಷ್ಟ್ರಕ್ಕೆ ಬಗೆದ ವಿಶ್ವಾಸಘಾತದ ಕೃತ್ಯವಾಗುತ್ತದೆ.

ಅಂತಿಮವಾಗಿ ಹೇಳುವುದಾದರೆ, ಲಸಿಕೆಗಳ ಪೂರೈಕೆಯ ಬಗ್ಗೆ ಪೂರಾ ನಿಗಾ ಇಡಬೇಕಾಗುತ್ತದೆ. ಲಸಿಕೆಗಳ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಕೇಂದ್ರ ಸರ್ಕಾರವು ಕೋವಿಶೀಲ್ಡ್‌ನ ಉತ್ಪಾದಕ ಎಸ್‌ಐಐಗೆ 3,000 ಕೋಟಿ ರೂ.ಗಳನ್ನು ಮತ್ತು ಕೊವಾಕ್ಸಿನ್‌ನ ಉತ್ಪಾದಕ ಭಾರತ್ ಬಯೋಟೆಕ್‌ಗೆ 1,500 ಕೋಟಿ ರೂ.ಗಳನ್ನು ಕೊಟ್ಟಿದೆ. ಆದರೆ, ಈ ಸಂಸ್ಥೆಗಳು ಎಷ್ಟು ಸಮಯದಲ್ಲಿ ಎಷ್ಟು ಲಸಿಕೆಗಳನ್ನು ಉತ್ಪಾದಿಸುತ್ತವೆ ಎಂಬುದು ಇನ್ನೂ ಸ್ಪಷ್ಟವಿಲ್ಲ. ಇಂತಹ ಒಂದು ಮಹತ್ವದ ಮತ್ತು ನಿರ್ಣಾಯಕ ವಿಷಯದ ಬಗ್ಗೆ ಸರ್ಕಾರವು ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ.

ಇದಲ್ಲದೆ, ಇನ್ನೂ ಎರಡು ಸಮಸ್ಯೆಗಳಿವೆ. ಒಂದು, ಬ್ರಿಟನ್‌ನಲ್ಲಿ ಲಸಿಕೆಗಳನ್ನು ಉತ್ಪಾದಿಸಲು240 ಮಿಲಿಯನ್ ಹೂಡಿಕೆಯ ಒಪ್ಪಂದವನ್ನು ಬ್ರಿಟಿಷ್ ಸರ್ಕಾರದೊಂದಿಗೆ ಎಸ್‌ಐಐ ಮಾಡಿಕೊಂಡಿದೆ. ಭಾರತದ ಕೋವಿಡ್–19 ಸೋಂಕಿನ ಪ್ರಸ್ತುತ ಪರಿಸ್ಥಿತಿಯು ವಿಶ್ವದಲ್ಲೇ ಅತ್ಯಂತ ಕೆಟ್ಟದಾಗಿದೆ ಎಂದು ಪರಿಗಣಿತವಾಗಿರುವಾಗ, ಭಾರತದಲ್ಲಿ ಲಸಿಕೆ ಉತ್ಪಾದನೆಯನ್ನು ಮುಂದೂಡುವುದನ್ನು ಮತ್ತು ಶ್ರಮ ಹಾಗೂ ಸಂಪನ್ಮೂಲಗಳನ್ನು ಇತರ ಮಾರುಕಟ್ಟೆಗಳತ್ತ ತಿರುಗಿಸುವುದನ್ನು ತಡೆಯಲೇಬೇಕು. ಅದಕ್ಕಾಗಿ, ಎಸ್‌ಐಐನ ಚಟುವಟಿಕೆಗಳ ಮೇಲೆ ಸರ್ಕಾರದ ಮೇಲ್ವಿಚಾರಣೆ ಅವಶ್ಯವಾಗುತ್ತದೆ ಮತ್ತು ಅದನ್ನು ಎಸ್‌ಐಐ ಆಡಳಿತದ ನಿರ್ವಹಣೆಯಲ್ಲಿ ಸರ್ಕಾರದ ಪ್ರಾತಿನಿಧ್ಯದ ಮೂಲಕ ಖಚಿತಪಡಿಸಿಕೊಳ್ಳಬಹುದು. ಇದು ಅಗತ್ಯವೂ ಹೌದು ಏಕೆಂದರೆ, ಸರ್ಕಾರವು ಎಸ್‌ಐಐಗೆ 3,000 ಕೋಟಿ ರೂ.ಗಳನ್ನು ಕೊಟ್ಟಿದೆ. ಹಾಗಾಗಿ, ಈ ಹಣವನ್ನು ಹೇಗೆ ಬಳಕೆ ಮಾಡಿಕೊಳ್ಳುತ್ತದೆ ಎಂಬುದರ ಮೇಲೆ ಸರ್ಕಾರವು ಕಣ್ಗಾವಲಿಡಬೇಕಾಗುತ್ತದೆ. ಇದೇ ರೀತಿಯ ವ್ಯವಸ್ಥೆಯನ್ನು ಭಾರತ್ ಬಯೋಟೆಕ್‌ನೊಂದಿಗೂ ಸಹ ಮಾಡಬೇಕಾಗಿದೆ.

ಕೇಂಬ್ರಿಜ್‌ನಲ್ಲಿ ತನ್ನ ಪ್ರಧಾನ ಕಾರ್ಯಾಲಯವನ್ನು ಹೊಂದಿರುವ ಆಸ್ಟ್ರಾಜೆನೆಕಾ ಎಂಬ ಸ್ವೀಡನ್–ಬ್ರಿಟನ್ ದೇಶಗಳ ಔಷದ ತಯಾರಿಸುವ ಬಹು ದೊಡ್ಡ ಮತ್ತು ಪ್ರತಿಷ್ಠಿತ ಸಂಸ್ಥೆಯೇ ಯುರೋಪಿಯನ್ ಒಕ್ಕೂಟ ದೇಶಗಳಿಗೆ ಒಪ್ಪಂದದ ಪ್ರಕಾರ ಲಸಿಕೆ ಪೂರೈಕೆಯಲ್ಲಿ ಕರ್ತವ್ಯಲೋಪ ಎಸಗಿರುವಾಗ, ಸಾರ್ವಜನಿಕ ಹಣವನ್ನು ಸ್ವೀಕರಿಸಿರುವ ಎಸ್‌ಐಐ ಮತ್ತು ಭಾರತ್ ಬಯೋಟೆಕ್ ಸಂಸ್ಥೆಗಳು ಪೂರೈಕೆ ವೇಳಾ–ಪಟ್ಟಿಯ ಪ್ರಕಾರ ಲಸಿಕೆ ಒದಗಿಸುವುದು ಅನುಮಾನವೇ. ಹಾಗಾಗಿ, ಈ ಕಂಪೆನಿಗಳು ಲಾಭಕೋರತನವನ್ನೇ ದಂಧೆಯಾಗಿ ಮಾಡಿಕೊಳ್ಳದಂತೆ ನೋಡಿಕೊಳ್ಳಲು, ಕೇಂದ್ರ ಸರ್ಕಾರಕ್ಕೆ ಪ್ರತಿ ಡೋಸ್‌ಗೆ 150 ರೂಗಳಂತೆ ಮಾರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪೂರೈಕೆ ವೇಳಾ–ಪಟ್ಟಿಯ ಪ್ರಕಾರ ಲಸಿಕೆ ಒದಗಿಸುವಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಈ ಕಂಪನಿಗಳ ಉನ್ನತ ಹುದ್ದೆಗಳಿಗೆ ಸರ್ಕಾರಿ ಅಧಿಕಾರಿಗಳನ್ನು ನೇಮಿಸುವ ಅಗತ್ಯವಿದೆ.

ಎರಡನೆಯದಾಗಿ, ಲಸಿಕೆಯ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರವು ಈ ಎರಡು ಸಂಸ್ಥೆಗಳ ಆಚೆಗೂ ಹೋಗಬೇಕು. ಪ್ರತಿ ಡೋಸ್ ಲಸಿಕೆಯನ್ನು 150ರೂಗಳಲ್ಲಿ ಕೊಳ್ಳಲು ಅನುವಾಗುವಂತೆ ಲೈಸೆನ್ಸ್ ಕಡ್ಡಾಯವನ್ನು ಬಳಸಿ ಹೊಸ ಉತ್ಪಾದನಾ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಸಾರ್ವಜನಿಕ ವಲಯದಲ್ಲಿಯೇ ಪ್ರಾರಂಭಿಸಬೇಕು.

ಕೋವಿಡ್–19 ಸೋಂಕಿನ ಪ್ರಸ್ತುತ ಬಿಕ್ಕಟ್ಟು ಯುದ್ಧದಂತಹ ಪರಿಸ್ಥಿತಿಗೆ ಹೋಲುತ್ತದೆ. ಯುದ್ಧವನ್ನು ಗೆಲ್ಲಲು ಅಗತ್ಯವಿರುವ ದೂರಗಾಮಿ ಕ್ರಮಗಳನ್ನು ಕೈಗೊಳ್ಳುವುದಕ್ಕಿಂತ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲದ ಕ್ರಮಗಳ ಮೂಲಕ ಕೋವಿಡ್ ಬಿಕ್ಕಟ್ಟನ್ನು ನಿಭಾಯಿಸಬೇಕಾಗಿದೆ.

ದಿಲ್ಲಿ ಗಡಿಗಳಲ್ಲಿ ರೈತರಿಂದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ವಾರ್ಷಿಕೋತ್ಸವ ಆಚರಣೆ

ಮೇ 10, 1857 ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ಮೊದಲ ಸ್ವಾತಂತ್ರ್ಯ ಸಂಗ್ರಾಮ ಆರಂಭವಾದ ದಿನ. ಮೇರಠ್‌ನಲ್ಲಿ ಬ್ರಿಟಿಶ್ ಸೇನಾಪಡೆಗಳ ಭಾರತೀಯ ಸೈನಿಕರು ಬ್ರಿಟಿಶ್ ಆಳರಸರ ವಿರುದ್ಧ ಬಂಡಾಯವೆದ್ದು ದಿಲ್ಲಿಯ ಕಡೆಗೆ ಹೊರಟ ದಿನವದು. ಈ ವರ್ಷ ಈ ದಿನವನ್ನು ದಿಲ್ಲಿಯ ಗಡಿಗಳಲ್ಲಿ ಮೂರು ಕೃಷಿ ಕಾಯ್ದೆಗಳ ವಿರುದ್ಧ ಆರು ತಿಂಗಳಿಂದ ಹೋರಾಟದಲ್ಲಿ ತೊಡಗಿರುವ ರೈತರು ವಿಶಿಷ್ಟ ರೀತಿಯಲ್ಲಿ ಆಚರಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ ಮೇ10ರಂದು ಒಂದು ರಾಷ್ಟ್ರೀಯ ಸಮಾವೇಶವನ್ನು ನಡೆಸಲು ನಿರ್ಧರಿಸಿತ್ತು. ಆದರೆ ದೇಶದಲ್ಲಿ ಉಂಟಾದ ಕೊವಿಡ್–19ರ ಎರಡನೇ ಅಲೆಯ ಉಬ್ಬರದಿಂದಾಗಿ ಅದನ್ನು ಮುಂದೂಡಲಾಗಿದೆ.

ಆದರೆ ದಿಲ್ಲಿಯ ಎಲ್ಲ ಪ್ರತಿಭಟನಾ ಗಡಿಗಳಲ್ಲಿ ಅಂದು ದೊಡ್ಡ ಸಾರ್ವಜನಿಕ ಸಭೆಗಳ ಮೂಲಕ ಈ ದಿನಾಚರಣೆಯನ್ನು ನಡೆಸಲಾಯಿತು. ಆ ಸ್ವಾತಂತ್ರ್ಯ ಸಮರದ ಮಂಗಲ್ ಪಾಂಡೆ ಮತ್ತಿತರ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹೋರಾಟದ ನಡುವೆಯೇ ಕೊಯ್ಲಿಗೆಂದು ತಂತಮ್ಮ ಊರುಗಳಿಗೆ ತೆರಳಿದ್ದ ಸುತ್ತಮುತ್ತಲಿನ ಹರ್ಯಾಣ ಮತ್ತು ಪಂಜಾಬಿನ ರೈತರು ಕೊಯ್ಲು ಮುಗಿಸಿ ಈಗ ಮತ್ತೆ ಪ್ರತಿಭಟನಾ ಗಡಿಗಳ ಡೇರೆಗಳಿಗೆ ಹಿಂದಿರುಗುತ್ತಿದ್ದಾರೆ.



ಈ ನಡುವೆ ಪ್ರತಿಭಟನಾ ನಿರತ ರೈತರ ಆರೋಗ್ಯ ಸಮಸ್ಯೆಗಳನ್ನು ನಿಭಾಯಿಸಲೆಂದು ಪ್ರತಿಭಟನೆಯ ಮೊದಲ ದಿನದಿಂದಲೇ ಆರಂಭವಾಗಿರುವ ಕಿಸಾನ್ ಮಜ್ದೂರ್ ಏಕತಾ ಆಸ್ಪತ್ರೆ ಈಗ ಆಕ್ಸಿಜನ್ ಕನ್ಸೆನ್ಟ್ರೇಟರ್ ಮತ್ತಿತರ ಸಾಧನ–ಸಲಕರಣೆಗಳಿಂದ ಸಜ್ಜಾಗಿದೆ. ಇಲ್ಲಿ ನೆರೆದಿರುವ ರೈತರ ಆರೋಗ್ಯದ ಬಗ್ಗೆ ಪೂರ್ಣ ಗಮನ ನೀಡಲೆಂದು ಸಂಯುಕ್ತ ಕಿಸಾನ್ ಮೋರ್ಚಾ ಇದನ್ನು ಸಜ್ಜುಗೊಳಿಸಿದೆ.

ಆಂತರಿಕ ತುರ್ತುಸ್ಥಿತಿ–ಕಾರ್ಮಿಕ ಚಳವಳಿಯ ಮೇಲೆ ದಾಳಿ

ಪುಟ 11 ರಿಂದ

ಅಪೆಕ್ಸ್ ಸಂಸ್ಥೆಯ 'ಕಾಂಪ್ಯಾಕ್ಟ್ ಬೈಪಾರ್ಟೈಟ್ ಸಮಿತಿ' ಯನ್ನು ರಚಿಸಲಾಯಿತು.

ರಾಷ್ಟ್ರೀಯ ಅಪೆಕ್ಸ್ ಸಂಸ್ಥೆ ಮತ್ತು 'ಆಡಳಿತದಲ್ಲಿ ಭಾಗವಹಿಸುವಿಕೆ' ಯೋಜನೆಯ ಅಸಮರ್ಥತೆ

ಈ ಸರ್ಕಾರ ಪ್ರಾಯೋಜಿತ ರಾಷ್ಟ್ರೀಯ ಅಪೆಕ್ಸ್ ಸಂಸ್ಥೆಯೂ ಸಹ ಈ ಆಂತರಿಕ ತುರ್ತು ಪರಿಸ್ಥಿತಿಯಲ್ಲಿ ವ್ಯಾಪಕವಾದ ವಜಾಗೊಳಿಸುವಿಕೆ, ರಿಟ್ರೆಂಚಮೆಂಟ್ ಇತ್ಯಾದಿ ನಡೆದ ಸಂಗತಿಯನ್ನು ಒಪ್ಪಿಕೊಳ್ಳಬೇಕಾಯಿತು. ವಾಸ್ತವವಾಗಿ, ಎನ್‌ಎಬಿ ಹಲವಾರು ಸಭೆಗಳನ್ನು ನಡೆಸಿದ್ದರೂ, ಈ ಮಂಡಳಿಯು ಪ್ರಾಯೋಗಿಕವಾಗಿ ರಿಟ್ರೆಂಚ್ ಆದ ಮತ್ತು ಕೆಲಸದಿಂದ ತೆಗೆದು ಹಾಕಿದ ಕಾರ್ಮಿಕರಿಗೆ ಯಾವುದೇ ಸಹಾಯವನ್ನು ನೀಡಲು ಸಾಧ್ಯವಾಗಲಿಲ್ಲ

ಈ ರಾಷ್ಟ್ರೀಯ ಅಪೆಕ್ಸ್ ಸಂಸ್ಥೆಯ ಸಂಯೋಜನೆಯಿಂದ ಇತರ ಕೇಂದ್ರ ಕಾರ್ಮಿಕ ಸಂಘಗಳನ್ನು ಹೊರಗಿಡಲು ಸರ್ಕಾರ ಕಾಳಜಿ ವಹಿಸಿತು. ಹೊರಗಿಡಲಾದ ಪ್ರಮುಖ ಕಾರ್ಮಿಕ ಸಂಘಗಳಲ್ಲಿ ಒಂದಾದ ಸಿಐಟಿಯು, ಎಲ್ಲಾ ಕಾರ್ಮಿಕ ಸಂಘಗಳ ಐಕ್ಯ ಕಾರ್ಯಾಚರಣೆ ಮಾತ್ರ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ನಿಜವಾಗಿಯೂ ಸಹಾಯ ಮಾಡುತ್ತದೆ ಎಂದು ಅಭಿಪ್ರಾಯಪಟ್ಟಿತು.

ಆದರೆ, ಆಂತರಿಕ ತುರ್ತು ಘೋಷಣೆಯ ಬಗೆಗಿನ ರಾಜಕೀಯ ಗ್ರಹಿಕೆಯಲ್ಲಿ ಕೇಂದ್ರ ಕಾರ್ಮಿಕ ಸಂಘಗಳ ನಡುವೆ ಆಳವಾದ ಬೇರೂರಿದ್ದ ಭಿನ್ನಾಭಿಪ್ರಾಯಗಳ ಕಾರಣ ಕಾರಣ ಅದು ಸಾಧ್ಯವಾಗಲಿಲ್ಲ.

ಅದೇ ಸಮಯದಲ್ಲಿ ಆಡಳಿತದಲ್ಲಿ ಕಾರ್ಮಿಕರ 'ಭಾಗವಹಿಸುವಿಕೆ' ಯೋಜನೆಯನ್ನೂ ಸರ್ಕಾರ ಘೋಷಿಸಿತು. ಸಭೆ ಮತ್ತು ಹೋರಾಟದ ಹಕ್ಕನ್ನು ನಿಗ್ರಹಿಸುವಾಗ ಕಾರ್ಮಿಕರನ್ನು ಮೋಸಗೊಳಿಸಲು ಇದು ಸರ್ಕಾರದ ಮತ್ತೊಂದು ಸಾಧನವಾಗಿತ್ತು.

ಸಿಐಟಿಯು ಮೊದಲಿನಿಂದಲೂ ಸರ್ಕಾರ ಘೋಷಿಸಿದ ರೂಪದಲ್ಲಿ 'ಆಡಳಿತದಲ್ಲಿ ಕೆಲಸಗಾರರ ಪಾಲ್ಗೊಳ್ಳುವಿಕೆ' ಯನ್ನು ಸ್ವೀಕರಿಸಲು ನಿರಾಕರಿಸಿತು ಮತ್ತು ಈ ಕೆಳಗಿನ ನಿಬಂಧನೆಗಳೊಂದಿಗೆ ಯೋಜನೆಯ ಪರಿಣಾಮಕಾರಿ ಸುಧಾರಣೆಗೆ ಒತ್ತಾಯಿಸಿತು.

1. ಎಲ್ಲಾ ಕಾರ್ಮಿಕರ ಪ್ರತಿನಿಧಿಗಳನ್ನು ರಹಸ್ಯ ಮತದಾನದ ಮೂಲಕ ಆಯ್ಕೆ ಮಾಡಬೇಕು.
2. ಕಾರ್ಮಿಕರ ಪ್ರತಿನಿಧಿಗಳು ಲೆಕ್ಕಪತ್ರಗಳ ನೈಜತೆಯನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿರಬೇಕು. ಅವರ ನಿಲುವುಗಾಗಿ ಯಾವುದೇ ಶಿಸ್ತು ಕ್ರಮದಿಂದ ಅವರನ್ನು ರಕ್ಷಿಸಬೇಕು.
3. ಉತ್ಪಾದನೆಯ ಒಪ್ಪಿತ ಪ್ರಮಾಣಗಳನ್ನು ನೀಡಲು ಒಪ್ಪುವಾಗ, ಕಾರ್ಮಿಕರ ಮೇಲಿನ ಹೊರೆಯ ಪ್ರತಿ ತೀವ್ರತೆಯನ್ನು ವಿರೋಧಿಸುವ ಹಕ್ಕನ್ನು ಕಾರ್ಮಿಕ ಸಂಘಗಳು ಹೊಂದಿರಬೇಕು.
4. ಉತ್ಪಾದನೆಯ ನಷ್ಟಕ್ಕೆ, ನಿರ್ವಹಣೆಯ ಅಸಮರ್ಥತೆ, ಹಣವನ್ನು ದುರುಪಯೋಗಪಡಿಸಿಕೊಳ್ಳುವುದು , ಸಾಮಗ್ರಿಗಳ ಕೆಟ್ಟ ಪೂರೈಕೆ ಇತ್ಯಾದಿಗಳ ಮೇಲೆ ಪ್ರಶ್ನಿಸುವ ಹಕ್ಕನ್ನು ಕಾರ್ಮಿಕರ ಪ್ರತಿನಿಧಿಗಳು ಹೊಂದಿರಬೇಕು.
5. ಸ್ಥಾವರದಲ್ಲಿ ಯಾವುದೇ ಉತ್ಪಾದನೆಯ ಏರಿಕೆಯ ಪರಿಣಾಮವಾಗಿ ರಿಟ್ರೆಂಚಮೆಂಟ್, ನಿವೃತ್ತಿ ಮತ್ತು ವಜಾಗೊಳಿಸುವಿಕೆಯನ್ನು ನಿಷೇಧಿಸಬೇಕು
6. ಫ್ಲೋರ್ ಮಟ್ಟಕ್ಕೂ ಟ್ರೇಡ್ ಯೂನಿಯನ್ ಹಕ್ಕುಗಳ ವಿಸ್ತರಣೆ ಮಾಡಬೇಕು.

ಆಂತರಿಕ ತುರ್ತು ಪರಿಸ್ಥಿತಿಯಲ್ಲಿ, ಎಲ್ಲಾ ಮೂಲಭೂತ ಹಕ್ಕುಗಳನ್ನು ನಿಗ್ರಹಿಸಿದ್ದಾಗ, ಕಾರ್ಮಿಕರ ಅಶಾಂತಿಯನ್ನು ತಗ್ಗಿಸಲು ಸರ್ಕಾರವು ಸ್ಪಷ್ಟವಾಗಿ ಘೋಷಿಸಿದ ಎನ್.ಎ.ಬಿ. ಮತ್ತು 'ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ' ಇತ್ಯಾದಿಗಳು ಹುಸಿಪಟಾಕಿಗಳು ಎಂದು ಸಾಬೀತಾಯಿತು.

ಸರ್ಕಾರದ ಕಾರ್ಮಿಕ ವಿರೋಧಿ ಕ್ರಮಗಳು ಮತ್ತು ಟ್ರೇಡ್ ಯೂನಿಯನ್ ಏಕತೆಯ ಪ್ರಶ್ನೆ

ಆಂತರಿಕ ತುರ್ತು ಪರಿಸ್ಥಿತಿಯಲ್ಲಿ ಕಾರ್ಮಿಕರ ಹೋರಾಟದ ದಮನವು ಯಾವ ಮಟ್ಟಕ್ಕೆ ಹೋಗಿತ್ತೆಂದರೆ, ಕಾರ್ಮಿಕರಿಗೆ ಅವರು ಬಯಸಿದ ರೀತಿಯಲ್ಲಿ ಸಾಂಪ್ರದಾಯಿಕ ಮೇ ದಿನದ ರಾಲಿಯನ್ನು ನಡೆಸಲು ಸಹ ಅನುಮತಿಸಲಿಲ್ಲ. ಆಗಲೂ 1976 ರಲ್ಲಿ ಮೇ ದಿನವನ್ನು ವಿವಿಧ ರೂಪಗಳಲ್ಲಿ ವ್ಯಾಪಕವಾಗಿ ಆಚರಿಸಲಾಯಿತು.

ಹೀಗೆ ವಿವಿಧ ಕಾರ್ಮಿಕ ಸಂಘಗಳ ನಡುವೆ, ವಿಶೇಷವಾಗಿ ಮುಖ್ಯ ಎರಡು ಎಡ ಕೇಂದ್ರ ಕಾರ್ಮಿಕ ಸಂಘಗಳಾದ ಸಿಐಟಿಯು ಮತ್ತು ಎಐಟಿಯುಸಿ ನಡುವೆ ಇಂದಿರಾ ಗಾಂಧಿ ಸರ್ಕಾರವು ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಪರಿಣಾಮಗಳ ಬಗೆಗಿನ ರಾಜಕೀಯ ಗ್ರಹಿಕೆಯ ವ್ಯತ್ಯಾಸ, ಭಾರತದ ರಾಜಕೀಯ ಇತಿಹಾಸದ ಈ ಅವಧಿಯಲ್ಲಿ ಕಾರ್ಮಿಕ ವರ್ಗದ ಕಾನೂನುಬದ್ಧ ಬೇಡಿಕೆಗಳನ್ನು ನಿರಾಕರಿಸುವುದರ ವಿರುದ್ಧ ಕಾರ್ಮಿಕ ವರ್ಗದ ಯಾವುದೇ ಐಕ್ಯ ಚಳುವಳಿಯ ಫಲಪ್ರದವಾಗುವ ಸಾಧ್ಯತೆಯನ್ನು ತಡೆಯಿತು.

ಇಂದಿರಾ ಸರ್ಕಾರದ ಸೋಲು

ಅಭೂತಪೂರ್ವ ದಬ್ಬಾಳಿಕೆ ಮತ್ತು ಮೂಲಭೂತ ಹಕ್ಕುಗಳನ್ನು ತಡೆಹಿಡಿಯುವದರ ಹೊರತಾಗಿಯೂ, ಆಂತರಿಕ ತುರ್ತುಸ್ಥಿತಿಯ ವಿರುದ್ಧ ಜನರ ಹೋರಾಟವು ವೇಗವನ್ನು ಪಡೆದುಕೊಂಡಿತು. ಈ ಪರಿಸ್ಥಿತಿಯಲ್ಲಿಯೇ ಭಾರತದ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಜನವರಿ 18, 1977 ರಂದು ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಭಾಷಣ ಮಾಡುತ್ತ ಸಾರ್ವತ್ರಿಕ ಚುನಾವಣೆ ನಡೆಸುವ ಉದ್ದೇಶವನ್ನು ಘೋಷಿಸಿದರು. ತನ್ನದೇ ಪಕ್ಷದೊಳಗಿನ ಘೋರ ಆಂತರಿಕ ಭಿನ್ನಾಭಿಪ್ರಾಯವು ವ್ಯಾಪಕವಾದ ಸಾಮೂಹಿಕ ಅಸಮಾಧಾನ ಮತ್ತು ಹೆಚ್ಚುತ್ತಿದ್ದ ಸಾಮೂಹಿಕ ದಂಗೆಗಳು ಸೇರಿ ಇಂದಿರಾ ಗಾಂಧಿಯನ್ನು ಮಾರ್ಚ್ 1977 ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳನ್ನು ಘೋಷಿಸಲು ಒತ್ತಾಯಿಸಿತು.

ಈ ನಿಟ್ಟಿನಲ್ಲಿ ಬಂಧಿತ ಎಲ್ಲ ವಿರೋಧ ನಾಯಕರು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಲಾಯಿತು, ಆದರೆ ಕಠಿಣವಾದ ಮೀಸಾ ಮತ್ತು ಡಿಐಆರ್ ಕಾನೂನುಗಳನ್ನು ಮತ್ತು ಆಂತರಿಕ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಲಿಲ್ಲ. ಆದರೆ ಸಾರ್ವತ್ರಿಕ ಚುನಾವಣೆಗಳ ಘೋಷಣೆಯು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಿಸಿತು, ಏಕೆಂದರೆ ಜನರು ವಿಜಯದ ಭಾವದಿಂದ ಹೆಮ್ಮೆಪಟ್ಟರು. ನಾಯಕರನ್ನು ಬಿಡುಗಡೆ ಮಾಡಿದ ಕೂಡಲೇ ತೀವ್ರವಾದ ರಾಜಕೀಯ ಚಟುವಟಿಕೆಗಳು ಪ್ರಾರಂಭವಾದವು. ಚುನಾವಣೆಯನ್ನು ಎದುರಿಸಲು ಮತ್ತು ಇಂದಿರಾ ಗಾಂಧಿ ಅವರ ಕಾಂಗ್ರೆಸ್ಸಿಗೆ ರಾಜಕೀಯ ಪರ್ಯಾಯವನ್ನು ರೂಪಿಸಲು, ಬಲಪಂಥೀಯ ಮತ್ತು ಕೋಮುವಾದಿ ಜನಸಂಘ ಸೇರಿದಂತೆ ಮಧ್ಯಮಮಾರ್ಗದ ವಿರೋಧ ಪಕ್ಷಗಳು ಒಗ್ಗೂಡಿ ಏಕೀಕೃತ ಪಕ್ಷವಾದ ಜನತಾ ಪಕ್ಷವನ್ನು ರಚಿಸಿದವು. ಇಬ್ಬರು ಪ್ರಮುಖ ಕಾಂಗ್ರೆಸ್ ನಾಯಕರಾದ ಜಗಜೀವನ ರಾಮ್ ಮತ್ತು ಎಚ್. ಎನ್. ಬಹುಗುಣ ಇಂದಿರಾ ಗಾಂಧಿಯಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡರು ಮತ್ತು ಕಾಂಗ್ರೆಸ್ ಫಾರ್ ಡೆಮಾಕ್ರಸಿ ಪಕ್ಷವನ್ನು ರಚಿಸಿದರು.. ಸಿಪಿಐ (ಎಂ) ಮತ್ತು ಇತರ ಎಡಪಕ್ಷಗಳು ಸರ್ವಾಧಿಕಾರಿ ಆಡಳಿತವನ್ನು ತೊಡೆದುಹಾಕಲು ಮತ್ತು ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಲು ಚುನಾವಣೆಗಳಲ್ಲಿ –ಜನತಾ ಪಕ್ಷಕ್ಕೆ ತಮ್ಮ ಬೆಂಬಲವನ್ನು ನೀಡಿದವು. ಈ ಐಕ್ಯತೆಯು ಜನರಿಗೆ ಸ್ಫೂರ್ತಿ ನೀಡಿತು ಮತ್ತು ಅವರು ದೊಡ್ಡ ರೀತಿಯಲ್ಲಿ ಪ್ರತಿಸ್ಪಂದಿಸಿದರು. ಆಳುವ ಪಕ್ಷವು ಆತಂಕಕ್ಕೊಳಗಾಯಿತು ಮತ್ತು ಸಾರ್ವಜನಿಕ ಬೊಕ್ಕಸದಿಂದ ಲಕ್ಷಾಂತರ ರೂಪಾಯಿಗಳ ಚುನಾವಣಾ ಮುನ್ನಾದಿನದ ರಿಯಾಯಿತಿಗಳನ್ನು ಘೋಷಿಸಿತು. ಆದರೆ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ.

ಜನರು ಬಹಳ ಉತ್ಸಾಹದಿಂದ ಚುನಾವಣೆಯಲ್ಲಿ ಭಾಗವಹಿಸಿದರು. 21 ಮಾರ್ಚ್ 1977 ರಂದು ಮಧ್ಯರಾತ್ರಿ ಬಿ.ಬಿ.ಸಿ. ಪ್ರಧಾನಿ ಇಂದಿರಾ ಗಾಂಧಿ ಚುನಾವಣೆಯಲ್ಲಿ ಸೋತಿದ್ದಾರೆ ಎಂದು ಪ್ರಕಟಿಸಿತು. ಅವರ ಕಾಂಗ್ರೆಸ್ ಪಕ್ಷವನ್ನು ಚುನಾವಣೆಯಲ್ಲಿ ಹಿಮ್ಮೆಟ್ಟಿಸಲಾಯಿತು. ಜನರು ಅವರ ಮತ್ತು ಅವರ ಪಕ್ಷದ ವಿರುದ್ಧ ಪ್ರತೀಕಾರದಿಂದ ಮತ ಚಲಾಯಿಸಿದರು. ಹೀಗೆ ಅವರ ಎಲ್ಲಾ ವಿಭಾಗದ ಜನರು, ಪ್ರತಿಪಕ್ಷದ ರಾಜಕಾರಣಿಗಳು, ಬುದ್ಧಿಜೀವಿಗಳು, ಪತ್ರಕರ್ತರು, ಕಾರ್ಮಿಕ ಸಂಘಗಳು ಮತ್ತು ಇತರ ಎಲ್ಲರ ವಿರುದ್ಧದ ದಮನ, ನಿಗ್ರಹ, ಉದ್ಧಾಮತನದ ನೀತಿ ಆಕೆಗೆ ಈ ಅವಮಾನಕರ ಸೋಲನ್ನು ತಂದಿತು.



ಜಿ-7 ವಿದೇಶ ಸಚಿವರ ಸಭೆ

ವಸಾಹತುಶಾಹಿ ಪ್ರಾಬಲ್ಯ ಮರುಸ್ಥಾಪನೆಗೆ ಮತ್ತು ರಷ್ಯಾ-ಚೀನಾ ವಿರುದ್ಧ ಅಭಿಯಾನ

ಚೀನಾ ಮತ್ತು ರಷ್ಯಾವನ್ನು ಪ್ರತ್ಯೇಕಿಸಿ, ಯುರೋಪಿಯನ್ ಒಕ್ಕೂಟವನ್ನು ಯು.ಎಸ್ ಜೊತೆ ನಿಕಟವಾಗಿ ಅಪ್ಪಿಕೊಳ್ಳಿ ಮತ್ತು ಇತರರ ಮೇಲೆ ಪಶ್ಚಿಮದ ಪ್ರಾಬಲ್ಯವನ್ನು ಪ್ರತಿಪಾದಿಸಿ ಎಂಬುದು ಬಿಡೆನ್ ರ ಕಾರ್ಯಸೂಚಿಯ ಅನುಷ್ಟಾನಕ್ಕೆ ಬದ್ದ ರಾಗುವುದೇ ಸಭೆಯ ಉದ್ದೇಶವಾಗಿತ್ತು.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜಿ-7 ದೇಶಗಳ ವಿದೇಶಾಂಗ ಮಂತ್ರಿಗಳು ಈ ವಾರ ಲಂಡನ್‌ನಲ್ಲಿ ಭೇಟಿಯಾಗಿದ್ದರು. ಜೂನ್ ತಿಂಗಳಲ್ಲಿ ನಡೆಯುವ ಜಿ-7 ಮುಖ್ಯಸ್ಥರ ಶೃಂಗ ಸಭೆಯಲ್ಲಿನ ಕಾರ್ಯಸೂಚಿಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದರು. ಆನಂತರ, ಒಂದು ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ, ಪ್ರಮುಖವಾಗಿ ರಷ್ಯಾವನ್ನು ಖಳನಾಯಕನಂತೆ ಮತ್ತು ಚೀನಾವನ್ನು ಜಗತ್ತಿನ ಪೀಡಕನಂತೆ ಚಿತ್ರಿಸಲಾಗಿದೆ. ಈ ಸಭೆಯ ಮೂಲ ಉದ್ದೇಶಗಳು, ಚೀನಾ-ವಿರೋಧಿ ಮತ್ತು ರಷ್ಯಾ-ವಿರೋಧಿ ಅಭಿಯಾನವಾಗಿದೆ. ಚೀನಾ ಮತ್ತು ರಶ್ಯಾಗಳ 'ಅಪರಾಧ ಪಟ್ಟಿ'ಯಲ್ಲಿ ಉಯಿಘರ್, ತೈವಾನ್, ಹಾಂಗ್ ಕಾಂಗ್, ಕ್ರಿಮಿಯ, ಉಕ್ರೇನ್ ಇತ್ಯಾದಿ ಪ್ರದೇಶಗಳಲ್ಲಿ ಅವುಗಳ ಕ್ರಮಗಳನ್ನು ಎಂದಿನಂತೆ ಸೇರಿಸಲಾಯಿತು ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಯ ನಿಜವಾದ ಸ್ಥಾಪಿತ ಅಂತರ್ರಾಷ್ಟ್ರೀಯ ವ್ಯವಸ್ಥೆಯನ್ನು ಬದಿಗೊತ್ತಿ, ಇಡೀ ಜಗತ್ತು ಹೇಗೆ ನಡೆಯಬೇಕೆಂದು ನಿರ್ಣಯಿಸುವ ತಮ್ಮ ಸ್ವೇಚ್ಛಾಚಾರವನ್ನು "ನಿಯಮ-ಆಧಾರಿತ ಅಂತರರಾಷ್ಟೀಯ ವ್ಯವಸ್ಥೆ" ಎಂದು ಜಗತ್ತಿನ ಮೇಲೆ ಹೊರಿಸುವ ಪ್ರಯತ್ನ ಮಾಡಲಾಯಿತು.

ಜಿ-7 ಗೆ "ಆಹ್ವಾನಿತ" ದೇಶವಾಗಲು, ಭಾರತವು ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ ಮತ್ತು ದಕ್ಷಿಣ ಆಫ್ರಿಕಾ ಗಳೊಂದಿಗೆ 'ವೈಟಿಂಗ್ ಲಿಸ್ಟ್'ನಲ್ಲಿ ಕುಳಿತಿವೆ. ಜಿ-7 ಒಂದು ಮಾಜಿ ವಸಾಹತುಶಾಹಿ ಶಕ್ತಿಗಳ ಒಂದು ಕೂಟವಾಗಿದೆ. ಪ್ರಮುಖವಾಗಿ, ಯು.ಎಸ್, ಯು.ಕೆ, ಕೆನಡಾ, ಫ್ರಾನ್ಸ್, ಇಟಲಿ, ಜರ್ಮನಿ ಮತ್ತು ಜಪಾನ್ ದೇಶಗಳು ಈ ಕೂಟದ ಭಾಗಿಗಳು. ಜಗತ್ತು ಹೇಗೆ ನಡೆಯಬೇಕೆಂದು ನಿರ್ದೇಶಿಸಲು ಇವು ನಿರ್ಧರಿಸುತ್ತವೆ.

ಭಾರತವನ್ನು ಈ ಕೂಟದ ಭಾಗವಾಗಿಸಲು ಮೋದಿ ಸರ್ಕಾರ ಶತಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ ದೇಶದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನವನ್ನು ಅಡವಿಡಲು ಸಿದ್ದವಿದೆ. ಆದಾಗ್ಯೂ, ಇನ್ನೂ ಒಂದು ಸಭೆಗೂ ಆಹ್ವಾನಿಸಲಾಗಿಲ್ಲ. ಇದು ಸಾಲದೆಂಬಂತೆ, ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಸೇರಿದಂತೆ ಭಾರತೀಯ ನಿಯೋಗದ ಇಬ್ಬರು ಸದಸ್ಯರು ಕೋವಿಡ್-19 ಪಾಸಿಟಿವ್ ಬಂದು ಸಭೆಯಿಂದ ಹೊರಗುಳಿಯುವ ಮುಜುಗರವನ್ನು ಎದುರಿಸಬೇಕಾಯಿತು.

ಭಾರತದ ಉಪಸ್ಥಿತಿಯು ಜಿ-7 ಗೆ ಗೌರವವನ್ನು ತಂದುಕೊಡುತ್ತದೆ. ಆದರೆ, ಮಾಜಿ ವಸಾಹತುಶಾಹಿ ವಿಶ್ವ ದೃಷ್ಟಿಕೋನವು ನಮಗೆ ಅಥವಾ ಜಗತ್ತಿಗೆ ಏಕೆ ಮುಖ್ಯವಾಗಬೇಕು? 1943ರ ಬಂಗಾಳದ ಭೀಕರ ಬರದಲ್ಲಿ ಅಂದಾಜು 30 ಲಕ್ಷ ಜನರ ನರಮೇಧ ಸೇರಿದಂತೆ ಹಲವು ನರಮೇಧಗಳನ್ನು, ಗುಲಾಮರ ಸಾಗಾಣಿಕೆಗಳನ್ನು ನಡೆಸಿದ, ಜೀತದಾಳುಗಳನ್ನು ದುಡಿಸಿ ಐಶ್ವರ್ಯ ಕೂಡಿಸಿದ - ಇತ್ಯಾದಿ ಮಾನವ ಹಕ್ಕುಗಳ ವಿರುದ್ಧ ಹಲವು ಅಪರಾಧಗಳನ್ನು ಮಾಡಿರುವ, ಎಂದೂ ಅದಕ್ಕೆಪರಿಹಾರ ಕೊಡುವುದು ಬಿಡಿ, ಕ್ಷಮಾಪಣೆಯನ್ನು ಕೇಳದ ಯು.ಕೆ ಮತ್ತು ಅಂತಹದೇ ಇತರ ಮಾಜಿ ವಸಾಹತುಶಾಹಿ ದೇಶಗಳ ಕೂಟಕ್ಕೆ ಜಗತ್ತನ್ನು ಹೇಗೆ ನಡೆಸಬೇಕು ಎಂದು ನಿರ್ದೇಶಿಸಲು ಅಧಿಕಾರ ಕೊಟ್ಟವರು ಯಾರು?

ಜಿ 7 ಪಾಶ್ಚಿಮಾತ್ಯ-ನ್ಯಾಟೋ ಸದಸ್ಯ ದೇಶಗಳ ಗುಂಪಾಗಿದೆ. ಇದರಲ್ಲಿ, ಯುರೋಪಿಯನ್ ಒಕ್ಕೂಟ (ಇಯು) ಆಯೋಗದ ಅಧ್ಯಕ್ಷ ಮತ್ತು ಅದರ ಪರಿಷತ್ತಿನ ಅಧ್ಯಕ್ಷರ ಮೂಲಕ ಖಾಯಂ ಅತಿಥಿಯಾಗಿ ನೆಪ ಮಾತ್ರಕ್ಕೆ ಭಾಗವಹಿಸುತ್ತಾರೆ. ಜಿ-7, 70 ರ ದಶಕದಲ್ಲಿ ರಚಿಸಲ್ಪಟ್ಟಿತು. ನ್ಯಾಟೋದ ತದ್ರೂಪಿ ಎಂದರೂ ತಪ್ಪಾಗದು. ಇದು ಮೊದಲಿಗೆ, ಕೈಗಾರಿಕಾವಾಗಿ ಮುಂದುವರಿದ ಐದು ಆರ್ಥಿಕತೆಗಳ ಕೂಟವಾಗಿತ್ತು. ಆನಂತರ ಸದಸ್ಯತ್ವ ಏಳಕ್ಕೆ ವಿಸ್ತರಿಸಿತು. ಯೆಲ್ಸಿನ್ ಆಡಳಿತದ ಕಾಲದಲ್ಲಿ ಇದು ರಷ್ಯಾವನ್ನು ಒಳಗೊಂಡಿತ್ತು. ಆದರೆ, ಬಲವಾದ ಕಾರಣವಿಲ್ಲದೆ, 2014 ರಲ್ಲಿ ರಷ್ಯಾವನ್ನು ಹೊರದಬ್ಬಲ್ಪಟ್ಟಿತ್ತು. ಜಿ 7 ನ್ಯಾಟೋದ ರಾಜಕೀಯ ಮುಖವಾಗಿ ತನ್ನ ಮೂಲ ಪಾತ್ರಕ್ಕೆ ಮರಳಿತು. ಆಗಸ್ಟ್ 2019 ರಲ್ಲಿ ದಿ ಸ್ಪೆಕ್ಟೇಟರ್ ಹೇಳಿದಂತೆ, "ಅದರ ಸಂರಚನೆ ನೋಡಿ ಸರಳವಾಗಿ ಹೇಳಬೇಕೆಂದರೆ, ಜಿ 7 ಎಂಬುದು, ಬಿಳಿಯರ ಪ್ರಾಬಲ್ಯವನ್ನು ಕಾಪಾಡಿಕೊಳ್ಳುವ ವಿಫಲ ಪ್ರಯತ್ನದಂತೆ ಕಾಣುತ್ತಿದೆ."

ಚೀನಾ ಮತ್ತು ರಷ್ಯಾವನ್ನು ಪ್ರತ್ಯೇಕಿಸಿ, ಯುರೋಪಿಯನ್ ಒಕ್ಕೂಟವನ್ನು ಯು.ಎಸ್ ಜೊತೆ ನಿಕಟವಾಗಿ ಅಪ್ಪಿಕೊಳ್ಳಿ ಮತ್ತು ಇತರರ ಮೇಲೆ ಪಶ್ಚಿಮದ ಪ್ರಾಬಲ್ಯವನ್ನು ಪ್ರತಿಪಾದಿಸಿ ಎಂಬುದು ಬಿಡೆನ್ ರ ಕಾರ್ಯಸೂಚಿಯ ಅನುಷ್ಟಾನಕ್ಕೆ ಬದ್ದ ರಾಗುವುದೇ ಸಭೆಯ ಉದ್ದೇಶವಾಗಿತ್ತು. ಯು.ಎಸ್ ಮತ್ತೆ ಅಂತರರಾಷ್ಟೀಯ ವ್ಯವಹಾರಗಳಲ್ಲಿ ಯಜಮಾನಿಕೆ ಗಳಿಸುವ ಹಂಬಲ ಬಿಡೆನ್ ರದ್ದು. ಯುರೋಪ್, ಜಪಾನ್ ಮತ್ತು ದಕ್ಷಿಣ ಕೊರಿಯಾದಲ್ಲಿ ಯು.ಎಸ್ ಸೈನ್ಯವನ್ನು ಉಳಿಸಿಕೊಳ್ಳಲು ಅವು ಶತಕೋಟಿ ಡಾಲರ್ ಗಳನ್ನು ರಕ್ಷಣೆಯ ಹಣವಾಗಿ ಪಾವತಿಸಬೇಕೆಂಬ ಟ್ರಂಪ್ ತನ್ನ 'ಅಮೇರಿಕಾ ಮೊದಲು' ನೀತಿ ಯಿಂದ ಖಾಲಿ ಮಾಡಿದ್ದ ಸ್ಥಾನವನ್ನು ಮತ್ತೆ ತುಂಬುವುದು ಬಿಡೆನ್ ಪ್ರಯತ್ನ.

ರಷ್ಯಾವು, ಶೀತಲ ಸಮರದಲ್ಲಿ ಸೋತ ದೇಶವಾಗಿದೆ. ಹಾಗಾಗಿ, ನಮ್ಮ ಅಧೀನತೆಯನ್ನು ಒಪ್ಪಿಕೊಳ್ಳಲೇ ಬೇಕು ಎಂದು ಯುಎಸ್ ಮತ್ತು ಅದರ ನ್ಯಾಟೋ ಕೂಟ ರಷ್ಯಾಕ್ಕೆ ಸ್ಪಷ್ಟಪಡಿಸಿವೆ. ಅದು ತನ್ನ ಆರ್ಥಿಕತೆಯನ್ನು ಪಾಶ್ಚಿಮಾತ್ಯ ಬಂಡವಾಳಕ್ಕೆ ತೆರೆದುಕೊಳ್ಳಬೇಕು ಮತ್ತು ಯೆಲ್ಟ್‌ಸಿನ್ ಅನುಮತಿಸಿದಂತೆ ತನ್ನ ಸಂಪನ್ಮೂಲಗಳನ್ನು ಲೂಟಿ ಮಾಡಲು ಅವಕಾಶ ನೀಡಬೇಕು. ಹೀಗಾಗಿಯೇ, ಯುರೋಪಿನಲ್ಲಿ ಸ್ವತಂತ್ರ ಅವಕಾಶ ಗಳಿಸಲು ಪುಟಿನ್ ಪದೇ ಪದೇ ಪ್ರಯತ್ನಿಸಿದರೂ ವಿಫಲವಾಗಿದ್ದು. ನ್ಯಾಟೋವನ್ನು ಜರ್ಮನಿಯಿಂದ ಮೀರಿ ವಿಸ್ತರಿಸಲಾಗುವುದಿಲ್ಲ ಎಂಬ ಸೋವಿಯತ್ ಒಕ್ಕೂಟಕ್ಕೆ ನೀಡಿದ ಭರವಸೆಯನ್ನು ಗೌರವಿಸಲಾಗಿಲ್ಲ. ಇದನ್ನು ಉಲಂಘಿಸಿ ನ್ಯಾಟೋ ಈಗ, ಬಾಲ್ಟಿಕ್ ರಾಜ್ಯಗಳು ಮತ್ತು ಪೋಲೆಂಡ್‌ನಲ್ಲಿ ಕ್ಷಿಪಣಿ ಬ್ಯಾಟರಿಗಳನ್ನು ಸ್ಥಾಪಿಸಿದೆ. ರಷ್ಯಾದ ಗಡಿಗಳ ಬಳಿ - ಬಾಲ್ಟಿಕ್ ರಾಜ್ಯಗಳು, ರೊಮೇನಿಯಾ ಮತ್ತು ಪೋಲೆಂಡ್‌ಗಳಲ್ಲಿ ಮಿಲಿಟರಿ ಕವಾಯತುಗಳನ್ನು ನಡೆಸುತ್ತದೆ. ಆದರೆ ರಷ್ಯಾದ ಅದರ ಗಡಿಯೊಳಗಿನ ಮಿಲಿಟರಿ ಕವಾಯತುಗಳಿಗೆ ಆಕ್ಷೇಪಗಳನ್ನು ಮಾಡುತ್ತದೆ.

ಯುರೋಪ್ ಮಾತ್ರವಲ್ಲದೇ, ಮಧ್ಯ ಏಷ್ಯಾ ಮತ್ತು ಪಶ್ಚಿಮ ಏಷ್ಯಾದಲ್ಲಿ ಮಿಲಿಟರಿ ಶಕ್ತಿಯಾಗಿ ರಷ್ಯಾ ಪುನಃ ಹೊರ ಹೊಮ್ಮುತಿರುವುದು ನ್ಯಾಟೋಗೆ ಬಹು ದೊಡ್ಡ ಸವಾಲನ್ನು ಒಡ್ಡುತ್ತದೆ. ಹಾಗಾಗಿ, ರಷ್ಯಾವು ತನ್ನ ಮಿಲಿಟರಿ ಪಡೆಗಳು ಮತ್ತು ವ್ಯೂಹಾತ್ಮಕ ಪರಮಾಣು ಶಸ್ತ್ರಾಸ್ತ್ರಗಳೊಂದಿಗೆ ನ್ಯಾಟೋ ಗೆ ಬೆದರಿಕೆಯಾಗಿವೆ. ಯುರೋಪಿಯನ್ ದೇಶಗಳಿಗೆ ರಷ್ಯಾದಲ್ಲಿರುವ ಅನಿಲ ಮತ್ತು ತೈಲ ಬೇಕಾಗಿದೆ. ಇದರಿಂದಾಗಿ ಯುರೋಪಿಯನ್ ಒಕ್ಕೂಟವು ರಷ್ಯಾವನ್ನು ಅವಲಂಬಿಸುತ್ತವೆ. ಆದರೆ, ಯುರೋಪ್ ರಷ್ಯಾವನ್ನು ಆರ್ಥಿಕವಾಗಿ ಬಹಿಷ್ಕರಿಸಬೇಕೆಂದು ಯುಎಸ್ ಬಯಸುತ್ತದೆ. ಈ ಹಿನ್ನೆಲೆಯಲ್ಲಿ, ಸಾಗರೋತ್ತರ ಪೈಪ್ ಲೈನ್ ನಾರ್ಡ್ ಸ್ಟ್ರೀಮ್-2 ಗೆ ನಿರ್ಬಂಧ ಹೇರಿ ತನ್ನ ಮಿತ್ರ ಜರ್ಮನಿಗೇನೇ ಯು,ಎಸ್ ಬೆದರಿಕೆ ಹಾಕಿದೆ. ರಷ್ಯಾ ವಿರುದ್ಧದ ಈ ಸಮರದಲ್ಲಿ ಯುರೋಪಿಯನ್ ಒಕ್ಕೂಟ ದೇಶಗಳನ್ನು ಸೆಳೆಯಲು ಯು.ಎಸ್ ಜಿ-7 ಅನ್ನು ಬಳಸಿಕೊಳ್ಳುವ ಪ್ರಯತ್ನದಲ್ಲಿದೆ. ಯೆಲ್ಸಿನ್ ಕಾಲದಲ್ಲಿ ಆದಂತೆ ರಷ್ಯಾ ಕುಸಿಯುತ್ತಲೇ ಹೋಗುತ್ತದೆ ಎಂಬ ಯುಎಸ್ ನಂಬಿಕೆಯು ಹುಸಿಯಾಗಿದೆ.

ಪ್ರಸ್ತುತ ರಷ್ಯಾ ವು ಆರ್ಥಿಕವಾಗಿ ಮತ್ತು ಮಿಲಿಟರಿ ದೃಷ್ಟಿಯಿಂದ ತನ್ನನ್ನು ಬಲಪಡಿಸಿಕೊಂಡಿದೆ ಮತ್ತು ಸಿರಿಯಾದಲ್ಲಿ ತನ್ನ ಮಿಲಿಟರಿ ಶಕ್ತಿಯನ್ನು ಸಹ ತೋರಿಸಿ ಗಮನ ಸೆಳೆದಿದೆ. ನಾಟೋ ಪಡೆಗಳು ಕುಮ್ಮಕ್ಕು ಇದ್ದ ಅಲ್ ಖೈದಾ-ಇಸ್ಲಾಮಿಕ್ ಸ್ಟೇಟ್, ಟರ್ಕಿ ಮತ್ತು ಇಸ್ರೇಲಿನ - ಈ ಮೂರು ಮುಖಗಳ ದಾಳಿಯಿಂದ ಬದುಕುಳಿಯಲು ಅಸ್ಸಾದ್ ಸರ್ಕಾರಕ್ಕೆ ಸಹಾಯ ಮಾಡಿ ತನ್ನ ಮಿಲಿಟರಿ ಪ್ರಾಬಲ್ಯವನ್ನು ಮೆರೆಸಿದ್ದು ಯುಎಸ್ ಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ನ್ಯಾಟೋ ದಾಳಿಯ ಎರಡನೇ ಅಕ್ಷವು ಚೀನಾದ ವಿರುದ್ಧವಾಗಿದೆ. ಏಷ್ಯಾದಲ್ಲಿ ಆಗ್ನೇಯ ಏಷ್ಯಾ ಮತ್ತು ಪೂರ್ವ ಏಷ್ಯಾದ ಮೇಲೆ ನಿಯಂತ್ರಣ ಸಾಧಿಸಲು ಸಮರ ಹೂಡಿದೆ. ಯು.ಎಸ್ ತನ್ನ ಸಾಗರಗಳ ಮೇಲಿನ ನಿಯಂತ್ರಣದಿಂದ, ಚೀನಾವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದೆ. ಇದೀಗ ಅದು ಇಂಡೋ-ಪೆಸಿಫಿಕ್ ಆಗಿ ಮಾರ್ಪಟ್ಟಿದೆ. ಚೀನಾವು 2028 ರ ವೇಳೆಗೆ ಯುಎಸ್ ಅನ್ನು ಆರ್ಥಿಕವಾಗಿ ಹಿಂದಿಕ್ಕಿ ವಿಶ್ವದ ಅತಿದೊಡ್ಡ ಆರ್ಥಿಕತೆಯಾಗಲಿದೆ. ಹೀಗಾಗಿಯೇ, ಅಮೆರಿಕಾದ ಕೆಂಗಣ್ಣಿಗೆ ಚೀನಾ ಬಿದ್ದಿದೆ. ಚೀನಾದ ಈ ಮುನ್ನಡೆಯನ್ನು ಹಿಮ್ಮೆಟ್ಟಿಸಲು ಇಂಡೋ-ಪೆಸಿಫಿಕ್ ಸಹಾಯ ಮಾಡುತ್ತದೆ ಎಂಬ ನಂಬಿಕೆಯಿಂದ, ಚೀನಾದ ಅನೇಕ ಹೈಟೆಕ್ ಕಂಪನಿಗಳ ವಿರುದ್ಧ ಯುಎಸ್ ನಿರ್ಬಂಧಗಳನ್ನು ವಿಧಿಸಿದೆ. ಇದು ದಕ್ಷಿಣ ಚೀನಾ ಸಮುದ್ರದಲ್ಲಿ ತನ್ನ ನೌಕಾ ಶಕ್ತಿಯನ್ನು ಫ್ರೀಡಂ ಆಫ್ ನ್ಯಾವಿಗೇಷನ್ ಆಪರೇಶನ್ಸ್ (FONOPs) ಸೋಗಿನಲ್ಲಿ ಬಳಸುತ್ತಿದೆ. ಇದು ಇತ್ತೀಚೆಗೆ ಲಕ್ಷದ್ವೀಪದಲ್ಲಿನ ಭಾರತದ ವಿಶೇಷ ಆರ್ಥಿಕ ವಲಯದಲ್ಲಿ ನಡೆಸಿದಂತಹ ರೀತಿಯಲ್ಲಿಯೇ ಇರುತ್ತದೆ.

ಜಿ-7, ಸರ್ಕಾರಗಳ ಮುಖ್ಯಸ್ಥರ ಜೂನ್‌ನಲ್ಲಿ ನಡೆಯಲಿರುವ ಶೃಂಗ ಸಭೆಯಲ್ಲಿ ರಷ್ಯಾ ಮತ್ತು ಚೀನಾ ವಿರುದ್ಧ ಜಾಗತಿಕ ಅಕ್ಷವನ್ನು ಗಟ್ಟಿ ಮಾಡುವುದೇ ವಿದೇಶ ಮಂತ್ರಿಗಳ ಶೃಂಗಸಭೆಯ ಗುರಿಯಾಗಿದೆ. ರಷ್ಯಾ ವಿರುದ್ಧದ ಆರ್ಥಿಕ ದಿಗ್ಬಂಧನಗಳು, ಚೀನಾದ ವಿರುದ್ಧ ತಂತ್ರಜ್ಞಾನ ದಿಗ್ಬಂಧನಗಳನ್ನು ಹೇರಲಾಗಿದೆ. ರಷ್ಯಾ ಮತ್ತು ಚೀನಾವನ್ನು ಜಾಗತಿಕ ಆರ್ಥಿಕತೆಯಿಂದ ಪ್ರತ್ಯೇಕಿಸಲು ವಿಶ್ವದ ಹಣಕಾಸು ವ್ಯವಸ್ಥೆಯ ಮೇಲಿನ ನಿಯಂತ್ರಣವನ್ನು ಯು.ಎಸ್ ಬಳಸಿಕೊಳ್ಳುತ್ತದೆ. ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗ ಹೊರಟ ಚೀನಾದ ನಡೆಯನ್ನು ತಡೆಹಿಡಿಯಲು ಅಥವಾ ಹಿಮ್ಮುಖಗೊಳಿಸುವ ಆಶಯವನ್ನು ಅದು ಹೊಂದಿದೆ.

ಇದಕ್ಕೆ ರಷ್ಯಾ ಮತ್ತು ಚೀನಾದ ಪ್ರತಿಕ್ರಿಯೆ ಎರಡು ರೀತಿಯದ್ದಾಗಿದೆ. ಒಂದನೆಯದಾಗಿ, ಈ ಎರಡು ದೇಶಗಳು ಪರಸ್ಪರ ಪೂರಕವಾಗಿರುವುದರಿಂದ ಹೆಚ್ಚು ಹತ್ತಿರ ಬರುತ್ತಿವೆ. ರಷ್ಯಾ ಇನ್ನೂ ಪ್ರಮುಖ ಮಿಲಿಟರಿ ಶಕ್ತಿಯಾಗಿ ಮುಂದುವರೆಯುತ್ತಿರುವುದರಿಂದ ಯುಎಸ್ ಬೆದರಿಕೆಗಳಿಗೆ ಅದು ಬಗ್ಗುವುವುದಿಲ್ಲ. ಚೀನಾ ಈಗಾಗಲೇ ವಿಶ್ವದ ಸಾಮೂಹಿಕ ಉತ್ಪಾದನಾ ಕೇಂದ್ರವಾಗಿದ್ದು, ಬಲವಾದ ಕೈಗಾರಿಕಾ ಮತ್ತು ತಂತ್ರಜ್ಞಾನದ ನೆಲೆಯನ್ನು ನಿರ್ಮಿಸಿಕೊಂಡಿದೆ. ಚಿಪ್ ತಯಾರಿಕೆಯಲ್ಲಿ ಮಾತ್ರ ಇದರ ಏಕೈಕ ದೌರ್ಬಲ್ಯವಿದೆ ಎಂಬ ಅರಿವು ಅದಕ್ಕಿದೆ. ಈ ಪ್ರಕ್ರಿಯೆಯಲ್ಲಿ ಚೀನಾ ಯು.ಎಸ್ ಗಿಂತ 3-4 ವರ್ಷಗಳು ಹಿಂದೆ ಬಿದ್ದಿದೆ. ಆದರೆ ಇನ್ನುಳಿದ ಅನೇಕ ಕ್ಷೇತ್ರದಲ್ಲಿ ಮತ್ತು ಪ್ರದೇಶದಲ್ಲಿ ಅದು ಯು.ಎಸ್ ಗಿಂತ ಮುಂದಿದೆ. ಉದಾಹರಣೆಗೆ, 5 ಜಿ, ಬ್ಯಾಟರಿಗಳಿಗೆ ಬೇಕಾದ ಅಪರೂಪದ ಸಾಮಗ್ರಿಗಳ ಉತ್ಪಾದನೆಯಲ್ಲಿ.

ವ್ಯೂಹಾತ್ಮಕ ಸ್ಪರ್ಧೆಯಲ್ಲಿ ಅಮೆರಿಕದ ದೌರ್ಬಲ್ಯವೆಂದರೆ ಅದರ ಬಲ ಕಡಲ ಶಕ್ತಿಯಾಗಿ ಮಾತ್ರ. ರಷ್ಯಾ ಮತ್ತು ಚೀನಾ ಎರಡೂ ಭೂ-ಆಧಾರಿತವಾದ ಪ್ರಬಲ ಶಕ್ತಿಗಳಾಗಿ ಹೊರಹೊಮ್ಮುತ್ತಿವೆ. ಅದಕ್ಕಾಗಿಯೇ ಚೀನಾದ ಬೆಲ್ಟ್-ರೋಡ್ ಇನಿಶಿಯೇಟಿವ್ (ಬಿ.ಆರ್.ಐ) ಯುರೇಷಿಯನ್ ಆರ್ಥಿಕತೆಯನ್ನು ಮರು ರೂಪಿಸುತ್ತಿದೆ. ಭೂ-ಆಧಾರಿತ ವ್ಯಾಪಾರವು ಮಧ್ಯ ಏಷ್ಯಾ ಮತ್ತು ಪೂರ್ವ ಯುರೋಪಿಯನ್ ದೇಶಗಳನ್ನು ಅಭಿವೃದ್ಧಿ ಪಡಿಸುವ ಚಾಲಕ ಶಕ್ತಿ ಆಗಿದೆ. ಜರ್ಮನಿ ಮತ್ತು ಪಶ್ಚಿಮ ಯುರೋಪಿಯನ್ ದೇಶಗಳಿಗೆ ಅದರ ವಿಸ್ತರಣೆಯು ಯುರೇಷಿಯನ್ ದೇಶಗಳಿಗೆ ಪರ್ಯಾಯ ಸಾಧ್ಯತೆಯನ್ನು ಒದಗಿಸುತ್ತದೆ. ಇಂಡೋ- ಪೆಸಿಫಿಕ್ ವಿಚಾರದಲ್ಲಿ ಯುಎಸ್ ದೃಷ್ಟಿ ಕೋನಕ್ಕೆ ಯುಕೆ ಸಂಪೂರ್ಣವಾಗಿ ಬದ್ಧವಾಗಿದ್ದು, ಯುರೋಪಿಯನ್ ರಾಷ್ಟಗಳಾದ ಜರ್ಮನಿ ಮತ್ತು ಫ್ರಾನ್ಸ್ ಇನ್ನೂ ಉದಯೋನ್ಮುಖ ಯುರೇಷಿಯನ್ ಮಾರುಕಟ್ಟೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿವೆ. ಉಕ್ರೇನಿಯನ್ ಬಿಕ್ಕಟ್ಟಿನಲ್ಲಿ ಯುರೋಪಿಯನ್ ಒಕ್ಕೂಟ ವಹಿಸುತ್ತಿರುವ ಪಾತ್ರವನ್ನು ನೋಡಿದರೆ, ಅದು ಅವರ ಆರ್ಥಿಕ ಹಿತಾಸಕ್ತಿಯಲ್ಲದಿದ್ದರೂ ಸಹ, ಯುಎಸ್ ಒತ್ತಡಕ್ಕೆ ಪ್ರತಿರೋಧ ಒಡ್ಡುವ ಇಚ್ಛಾಶಕ್ತಿ ಇದ್ದಂತಿಲ್ಲ.

ಯು.ಎಸ್ ಮತ್ತು ನ್ಯಾಟೋದ ಇಂಡೋ-ಪೆಸಿಫಿಕ್ ದೃಷ್ಟಿಕೋನದೊಂದಿಗೆ ಭಾರತವು ಜೊತೆ ಏಕಿದೆ? ಯುಎಸ್ ನ, ಯಾವ ಸಾಗರದಲ್ಲೂ ಹೋಗಬಹುದಾದ ನೌಕಾಸಾಗಾಣಿಕೆ ಸ್ವಾತಂತ್ರ್ಯ ಮತ್ತು ದಕ್ಷಿಣ ಚೀನಾ ಸಮುದ್ರವು ಎಲ್ಲರಿಗೂ ಮುಕ್ತ ಪ್ರದೇಶ ಎಂಬ ಇತರ ದೇಶಗಳ ಸಾರ್ವಭೌಮತೆಯನ್ನು ಧಿಕ್ಕರಿಸುವುದನ್ನು ಏಕೆ ಅನುಮೋದಿಸುತ್ತಿದೆ? ಭಾರತವು ತನ್ನ ಉತ್ತರದ ಗಡಿಗಳ ಬಗ್ಗೆ ಚೀನಾದೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದೆ ಎಂಬುದು ನಿಜ. ಆದರೆ ಅದು ಭಾರತದ ಗಾತ್ರ ಮತ್ತು ನಿಲುವಿನ ವ್ಯೂಹಾತ್ಮಕ ಸ್ವಾಯತ್ತತೆಯ ಅಗತ್ಯವನ್ನು ಕುರುಡಾಗಿಸಬಾರದು ಅಲ್ಲವೇ? ಆಸ್ಟೇಲಿಯಾ, ದಕ್ಷಿಣ ಕೊರಿಯಾ ಮತ್ತು ದಕ್ಷಿಣ ಆಫ್ರಿಕಾದ ಜೊತೆಗೂಡಿ ಜಿ-7 ಗೆ ಬಾಲಂಗೋಚಿಯಾಗುವುದು ಸರಿಯಲ್ಲ. ಅದು ಹಿಂದೆ ಆಲಿಪ್ತ ಚಳವಳಿಯಲ್ಲಿ ಮತ್ತು ಜಾಗತಿಕ ವೇದಿಕೆಯಲ್ಲಿ ವಹಿಸಿದ ಪ್ರಮುಖ ಪಾತ್ರಕ್ಕೆ ಹೋಲಿಸಿದರೆ ಇದು ಅವನತಿ. ಮೋದಿ ಸರ್ಕಾರಕ್ಕೆ ಸ್ವತಂತ್ರ ವಿದೇಶಾಂಗ ನೀತಿಯ ಬಗ್ಗೆ ವ್ಯೂಹಾತ್ಮಕ ದೃಷ್ಟಿಕೋನವಿಲ್ಲ ಮತ್ತು ಭಾರತದ ಹಿತಾಸಕ್ತಿ ಏನು ಎಂಬುದರ ಕನಿಷ್ಟ ಪ್ರಜ್ಞೆಯೂ ಇಲ್ಲ. ಬದಲಾಗಿ, ಯುಎಸ್ ಒಂದು ದಿನ ಉನ್ನತ ಆಸನವನ್ನು ಕೊಡಬಹುದು ಎಂಬ ಭರವಸೆಯಿಂದಾಗಿ, ಯುಎಸ್‌ಗೆ ಅಧೀನನಾಗಿ ತನ್ನ ಸ್ವಾಭಿಮಾನ ತೊರೆಯಲು ಬಯಸುತ್ತಿದೆ.



JANASHAKTHI KANNADA VARA PATRIKE May 17-23, 2021 Price: Rs. 10/- Date of Publication: 14 May 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಕೊಳೆತ ವ್ಯವಸ್ಥೆ ಮತ್ತು ನೆಚ್ಚಿನ ರಂಜನಾ ಸಾವು

ಬೃಂದಾ ಕಾರಟ್



1980 ರ ಮೇ ತಿಂಗಳ ಕಡು ಬಿಸಿಲಿನ ದಿನದಲ್ಲಿ, ಮಹಿಳೆಯರ ಗುಂಪೊಂದು ಫರೀದಾಬಾದ್ ನ ಕಾರ್ಮಿಕರ ಧೂಳುಭರಿತ ಬಡಾವಣೆಯ ಕಿರಿದಾದ ದಾರಿಯಲ್ಲಿ, ವರದಕ್ಷಿಣೆ ವಿರುದ್ಧದ ಅಭಿಯಾನದ ಭಾಗವಾಗಿ ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಮಾಡುತ್ತಿದ್ದರು. ಬಿಸಿಲಿನ ಶಾಖ ತಪ್ಪಿಸಲು ಮುಚ್ಚಿದ ಎಲ್ಲ ಕಿಟಕಿಗಳ ಮಧ್ಯೆ, ಆಗೊಮ್ಮೆ ಈಗೊಮ್ಮೆ ಏನದು ಗಲಾಟೆ ಎಂದು ಕಿಟಕಿಯಿಂದ ಇಣುಕಿದ್ದು ಬಿಟ್ಟರೆ ಒಂದು ನರಪಿಳ್ಳೆಯೂ ಕಾಣಿಸದಿದ್ದರೂ, ಅವರು ಧೃತಿಗೆಡಲಿಲ್ಲ, ರಂಜನ ಮತ್ತು ನಾನು ಇದೆಲ್ಲದರ ಮಧ್ಯೆ ಸ್ವಲ್ಪ ನಿಂತು, ಒಬ್ಬರ ಮುಖ ಇನ್ನೊಬ್ಬರು ನೋಡುತ್ತಾ ಇಬ್ಬರ ಮನಸ್ಸಿನಲ್ಲಿ ಬಂದ ಒಂದೇ ಯೋಚನೆಯನ್ನು ನೆನೆದು ಜೋರಾಗಿ ನಕ್ಕಿದ್ದೆವು. ಅದನ್ನು ರಂಜನಾ ಹೀಗೆ ಹೇಳಿಬಿಟ್ಟಿದ್ದರು, "ಈ ನಡುಮಧ್ಯಾಹ್ನದ ಸುಡುಬಿಸಿಲಲ್ಲಿ ರಸ್ತೆಗೆ ಇಳಿಯುವವರು ಹುಚ್ಚರು ಮತ್ತು ಕಮ್ಯುನಿಸ್ಟರು ಮಾತ್ರ"

ರಂಜನ ನಿರುಲಾ. ವಯಸ್ಸು 75. ಮಾರ್ಕ್ಸ್‌ವಾದಿ. ಟ್ರೇಡ್ ಯೂನಿಯನ್ ಮತ್ತು ಮಹಿಳಾ ಹಕ್ಕುಗಳ ಕಾರ್ಯಕರ್ತೆ. ಭಾರತ ಆಶಾ ಕಾರ್ಯಕರ್ತೆಯರ ಸಂಘಟನೆಯ ಸಂಚಾಲಕಿ. "ವಾಯ್ಸ್ ಆಫ್ ದಿ ವರ್ಕಿಂಗ್ ವುಮನ್" ಪತ್ರಿಕೆಯ ಸಂಪಾದಕಿ. ನೂರಾರು ಯುವಜನರಿಗೆ ಸಲಹೆಗಾರ್ತಿ, ಸಂಗಾತಿ. ನ್ಯಾಯಕ್ಕಾಗಿ ಸತತ 50 ವರ್ಷಗಳು ಹೋರಾಡಿದ ಗಟ್ಟಿಗಿತ್ತಿ. ಎಂತಹ ಕಠಿಣ ಸಂಕಷ್ಟಗಳ ಸಮಯದಲ್ಲೂ ಆಶಾವಾದಿ, ಸದಾ ನಗುಮುಖ ಹೊಂದಿದ ಎಲ್ಲರನ್ನೂ ನಗಿಸುವ ಹೃದಯವಂತ ಮಹಿಳೆ. ಇಂತಹ ಹೃದಯವಂತಿಕೆ ಇರುವ ರಂಜನಾಳನ್ನು ಮೇ ಹತ್ತರ ರಾತ್ರಿ ಕೊರೋನಾದಿಂದ ಕಳೆದುಕೊಂಡೆವು. ವಿಶ್ವದಲ್ಲಿ ಕೊವಿದ್ ಗೆ ಅತಿ ಹೆಚ್ಚು ಬಲಿಯಾಗುತ್ತಿರುವ ಭಾರತದ ಪ್ರತಿದಿನದ ಸರಾಸರಿ 4000 ಜನರಲ್ಲಿ ಅಂದು ಅವಳೂ ಒಬ್ಬಳು.

ಭಾರತದ ಲಕ್ಷಾಂತರ ಕುಟುಂಬಗಳ ಮೇಲೆ ಕೋವಿಡ್ ನ ಕ್ರೂರ ನೆರಳು ಬಿದ್ದಿದೆ. ಮಗ, ಮಗಳು, ಪಾಲಕರು, ಸಹೋದರ, ಸಹೋದರಿ, ಗೆಳೆಯ, ಗೆಳತಿಯರು, ಸಂಗಾತಿ, ಸಹೋದ್ಯೋಗಿ, ಪಕ್ಕದ ಊರಿನ ಪರಿಚಯದವರು, ಸಂಬಂಧಿಕರು – ಹೀಗೆ ಅನೇಕರನ್ನು ಕೆಲವೇ ದಿನಗಳಲ್ಲಿ ಕಳೆದುಕೊಂಡರು ಮತ್ತು ಕಳೆದುಕೊಳ್ಳುತ್ತಿದ್ದಾರೆ. ಇದು ಭಾರತದಾದ್ಯಂತ ಸಾಮೂಹಿಕ ಶೋಕವನ್ನು ಹರಡಿದೆ. ವೈಯಕ್ತಿಕ ದುರಂತದ ಭೀಕರ ಅನುಭವವನ್ನು ಮತ್ತು ಅದರ ಜೊತೆಗೆ ಹೆಣೆದುಕೊಂಡಿರುವ ಸರಕಾರದ ನೀತಿಗಳ ಬಗ್ಗೆ ತಮ್ಮ ವಿಚಾರಗಳನ್ನು, ಅನೇಕರು ಹಂಚಿಕೊಂಡಿದ್ದಾರೆ. ರಂಜನ ಅವರೊಂದಿಗೂ ಸಹ ಅನೇಕ ಅನುಭವಗಳಿವೆ ಮತ್ತು ಪ್ರಶ್ನೆಗಳು ಸಹ ಇವೆ. ಇತರ ಪೀಡಿತರ ದುಃಖವನ್ನು ಕಡಿಮೆ ಮಾಡಲು, ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಪರಿಹಾರಗಳನ್ನು ಹುಡುಕಲೇ ಬೇಕಿದೆ.

ಒಬ್ಬ ರೋಗಿಗೆ ಕೋವಿಡ್ ನ ಸಾಮಾನ್ಯ ಲಕ್ಷಣಗಳಿದ್ದು ಆದರೆ ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯಲ್ಲಿ ಋಣಾತ್ಮಕ(ನೆಗೆಟಿವ್) ಬಂದರೆ ಏನು? ಈ ಪ್ರಶ್ನೆಯನ್ನು ನಾವು ಅನೇಕ ಬಾರಿ ಎದುರಿಸಿದ್ದೇವೆ. ಕೋವಿಡ್ ನ ರೋಗಲಕ್ಷಣಗಳ ಹೆಚ್ಚಾದಾಗ ರಂಜನಾ ಅವರು ಶ್ವಾಸಕೋಶದ ಸಿಟಿ ಸ್ಕ್ಯಾನ್ ಮಾಡಿದಾಗ ಪರಿಣಾಮ 12/25 ಸ್ಕೋರ್ ತೋರಿಸುತ್ತದೆ. ಇತರ ಗಂಭೀರ (ಕೊ–ಮೋರ್ಬಿಡಿಟಿ) ಗಳಿಂದಾಗಿ ವೈದ್ಯರು ರಂಜನಾ ಅವರನ್ನು ಆಸ್ಪತ್ರೆಗೆ ದಾಖಲಾಗಲು ಸಲಹೆ ನೀಡುತ್ತಾರೆ. ಆದರೆ ಅವರ ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯ ನಿರ್ಣಯ ನಕಾರಾತ್ಮಕ ವಾಗಿರುವುದರಿಂದ ಯಾವುದೇ ಕೋವಿಡ್ ಗಾಗಿ ಗೊತ್ತುಪಡಿಸಿದ ಆಸ್ಪತ್ರೆಯು ಅವರನ್ನು ದಾಖಲಿಸಿ ಕೊಳ್ಳಲಿಲ್ಲ. ಈ ಹಿಂದೆ ಅವರು ಇತರ ಕಾಯಿಲೆಗಳಿಗಾಗಿ ಚಿಕಿತ್ಸೆ ಪಡೆದ ಖಾಸಗಿ ಆಸ್ಪತ್ರೆ ಈಗ ಕೋವಿಡ್ ಆಸ್ಪತ್ರೆ ಆಗಿರಲಿಲ್ಲ. ಪರೀಕ್ಷೆ ಋಣಾತ್ಮಕ ಇದ್ದರೂ ಸಿಟಿ ಸ್ಕ್ಯಾನ್ ನಲ್ಲಿ ತೋರಿಸಿದ ಪ್ರಕಾರ ಅವರ ಶ್ವಾಸಕೋಶವು ಕೋವಿಡ್ ನಿಂದ

> **ಪರೀಕ್ಷೆಯು ತಪ್ಪಾಗಿ ಇಲ್ಲದಿದ್ದರೆ ಏನಾಗುತ್ತಿತ್ತು? ರಂಜನಾ ರನ್ನು ಆಸ್ಪತ್ರೆಗಳು ದಾಖಲಿಸಿಕೊಳ್ಳಲು ನಿರಾಕರಿಸದಿದ್ದರೆ ಏನಾಗುತ್ತಿತ್ತು? ದಾಖಲಿಸಿಕೊಳ್ಳಲು ತೋರಿಸಿದ ವಿಳಂಬದಿಂದ ಅವರ ದೇಹದ ಸ್ಥಿತಿಯು ಮತ್ತೆ ಗುಣಪಡಿಸಲಾಗದ ರೀತಿಯಲ್ಲಿ ಹೆಚ್ಚು ಹದಗೆಡುವಂತೆ ಮಾಡಿತೆ? ಭಾರತದಾದ್ಯಂತ ಸಾಮೂಹಿಕ ಶೋಕವು ಹರಡಿದೆ. ವೈಯಕ್ತಿಕ ದುರಂತದ ಭೀಕರ ಅನುಭವವನ್ನು ಮತ್ತು ಅದರ ಜೊತೆಗೆ ಹೆಣೆದುಕೊಂಡಿರುವ ಸರಕಾರದ ನೀತಿಗಳ ಬಗ್ಗೆ ತಮ್ಮ ವಿಚಾರಗಳನ್ನು, ಅನೇಕರು ಹಂಚಿಕೊಂಡಿದ್ದಾರೆ. ರಂಜನ ಅವರೊಂದಿಗೂ ಸಹ ಅನೇಕ ಅನುಭವಗಳು ಮತ್ತು ಪ್ರಶ್ನೆಗಳು ಇವೆ. ಇತರ ಪೀಡಿತರ ದುಃಖವನ್ನು ಕಡಿಮೆ ಮಾಡಲು, ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಪರಿಹಾರಗಳನ್ನು ಹುಡುಕಲೇ ಬೇಕಿದೆ.**

ಆಗುವ ರೀತಿಯಲ್ಲಿ 30% ಹಾನಿಗೊಂಡಿರುವ ಕಾರಣ ಅವರು ರಂಜನಾಳನ್ನು ತಮ್ಮ ಆಸ್ಪತ್ರೆಯಲ್ಲಿಯೂ ದಾಖಲಿಸಿಕೊಳ್ಳಲಿಲ್ಲ. ಆದ್ದರಿಂದ ಯಾವುದೇ – ಕೋವಿಡ್ ಅಥವಾ ಕೋವಿಡೇತರ ಆಸ್ಪತ್ರೆಗಳು – ಅವರನ್ನು ದಾಖಲಿಸಿಕೊಳ್ಳಲಿಲ್ಲ. ಪರೀಕ್ಷೆಯ ಅಸಮರ್ಪಕ ಫಲಿತಾಂಶಗಳಿಂದ ಅನೇಕ ರೋಗಿಗಳು ಇದೇ ರೀತಿಯ ಸಮಸ್ಯೆಯನ್ನು ಎದುರಿಸಿದ್ದಾರೆ ಮತ್ತು ಎದುರಿಸುತ್ತಿದ್ದಾರೆ. ಇವೆಲ್ಲವುಗಳ ಮಧ್ಯ ರೋಗಿಗಳು ಮಾತ್ರ ಹೈರಾಣಾಗುತ್ತಿದ್ದಾರೆ. ಟೆಲಿ–ಸಮಾಲೋಚನೆ ಮತ್ತು ಆಮ್ಲಜನಕದ ಪೂರೈಕೆಯ ಮೂಲಕ ಅನೇಕ ರೋಗಿಗಳಿಗೆ ಮನೆಯಲ್ಲೇ ಚಿಕಿತ್ಸೆ ನೀಡಬಹುದು. ರಾಷ್ಟ್ರೀಯ ದೂರದರ್ಶನದಲ್ಲಿ ಅನೇಕ ತಜ್ಞರು ಅದನ್ನೇ ನಿರಂತರವಾಗಿ ಹೇಳುತ್ತಿದ್ದಾರೆ. ಹೆದರಿಕೊಳ್ಳುವುದು ಬೇಡ. ನಿಜ. ಆದರೆ ರಂಜನಾರಂತಹ ಅನೇಕ ರೋಗಿಗಳಿಗೆ ತುರ್ತು ಆಸ್ಪತ್ರೆಯ ಅಗತ್ಯವಿರುವ ಬಗ್ಗೆ ಏನು? ಎರಡನೆಯದು ರಂಜನಾರಿಗೆ ಆರ್.ಟಿ.ಪಿ.ಸಿ.ಆರ್ ಪರೀಕ್ಷೆ ಮಾಡಲಾಗುತ್ತದೆ ಆದರೆ ಅದರ ಪರಿಣಾಮ ಬರುವುದು ತಡವಾಗುತ್ತದೆ. ಇದೆಲ್ಲದರ ನಡುವೆ ಅವರಿಗೆ ಕೋವಿಡ್ ಲಕ್ಷಣಗಳು ಉಲ್ಬಣಗೊಂಡು, ಆಮ್ಲಜನಕದ ಮಟ್ಟ ಕುಸಿಯಿತು.

ಕಾಕತಾಳಿಯವಾಗಿ, ಆಸ್ಪತ್ರೆಗಾಗಿ ನಮ್ಮ ಹುಡುಕಾಟದ ಅದೇ ಸಮಯದಲ್ಲಿ ದೆಹಲಿ ಹೈಕೋರ್ಟ್ ಇದೇ ವಿಷಯದ ಬಗೆಗಿನ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿತ್ತು. ರೋಗಿಗೆ ಕೋವಿಡ್ ಲಕ್ಷಣಗಳಿದ್ದರೆ ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯ ಪರಿಣಾಮ ಇಲ್ಲದೆಯೂ ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಬೇಕು ಎಂದು ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಿತು. ಆದರೆ ಈ ನಿರ್ದೇಶನ ಆಸ್ಪತ್ರೆಗೆ ದಾಖಲಿಸಿಕೊಳ್ಳುವ ಮೂಲ ನಿಯಮಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ ಎನ್ನುವುದು ನಮ್ಮ ನಿರಾಶೆ. ಹೈ ಕೋರ್ಟ್ ನ ಆದೇಶದ ನಂತರ ಏಮ್ಸ್ ನ ಹಿರಿಯ ವೈದ್ಯರೊಬ್ಬರು "ಸಹಾಯಕ್ಕಾಗಿ ರೋಗಿಯನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ಕರೆತನ್ನಿ. ಆದರೆ ಪ್ರವೇಶಕ್ಕಾಗಿ ಪ್ರತಿಜನಕ(ಆಂಟಿಜನ) ಪರೀಕ್ಷೆಯು

ಪುಟ 12 ನೋಡಿ

ಮನರೇಗಾ ಕಾಯ್ದೆ ಹಾಗೂ ಗ್ರಾಮೀಣ ಯೋಜನೆಗಳ ಅನುದಾನ ತಡೆ ಹಿಡಿದಿರುವುದನ್ನು ಖಂಡಿಸಿ ಮತ್ತು ಪರಿಹಾರಕ್ಕೆ ಆಗ್ರಹ

ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಜನರು ಕೈಯಲ್ಲಿ ಹಣವಿಲ್ಲದೆ ಇನ್ನಷ್ಟು ಸಂಕಟದಿಂದ ಹಸಿವಿನಿಂದ ನರಳುತ್ತಿದ್ದಾರೆ. ನಗರಗಳಲ್ಲಿ ಜನರು ಆಕ್ಸಿಜನ್‌ಗಾಗಿ ಕ್ಯೂನಲ್ಲಿದ್ದರೆ ಗ್ರಾಮಗಳಲ್ಲಿ ಜನರು ಹೊಟ್ಟೆಗೆ ಹಿಟ್ಟಿಲ್ಲ ಕೆಲಸ ಕೊಡಿ ಎಂದು ಕ್ಯೂ ನಿಲ್ಲುತ್ತಿದ್ದಾರೆ. ಈಗಾಗಲೇ ನಗರ ಪ್ರದೇಶಗಳಿಂದ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಮರಳಿದ್ದಾರೆ. ಅವರಿಗೂ ಕೆಲಸ ಬೇಕಿದೆ. ಗ್ರಾಮೀಣ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಇಲಾಖೆಗಳು ಕೋವಿಡ್ ನೆಪದಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈಗಾಗಲೇ ಅನುದಾನ ಮತ್ತು ಕಾರ್ಯಯೋಜನೆಗಳ ಜಾರಿ ತಡೆಹಿಡಿದಿವೆ. ಗ್ರಾಮೀಣ ಜನರ ಆರೋಗ್ಯದ ಪ್ರಶ್ನೆಯ ಹಿನ್ನೆಲೆಯಲ್ಲಿ ಸರಕಾರ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಇದರಲ್ಲಿ ಸತ್ಯಾಂಶವೇ ಆಗಿದ್ದರೆ ನಗರಗಳಲ್ಲಿನ – ಯೋಜನೆಗಳು ತಡೆ ಹಿಡಿದಿವೆಯೇ? ರಿಯಲ್ ಎಸ್ಟೇಟ್ ಕಾಮಗಾರಿಗಳು, ಬೆಂಗಳೂರಿನ ಮೆಟ್ರೋ ಯೋಜನೆ ಸೇರಿದಂತೆ ಮುಂದುವರೆಸಲು ಸರಕಾರವು ಅವಕಾಶ ಕೊಟ್ಟಿದೆ.

ಸರಕಾರದ ಈ ದ್ವಂದ್ವ ಮತ್ತು ಪಕ್ಷಪಾತಿ ಧೋರಣೆಯು ಅತ್ಯಂತ ಅಮಾನವೀಯತೆಯಿಂದ ಕೂಡಿದೆ. ಗ್ರಾಮಗಳಲ್ಲಿನ ನಿರುದ್ಯೋಗ ಮತ್ತು ಬಡತನವು ಜನರನ್ನು ಕಂಗೆಡಿಸಿದ ಈ ಹೊತ್ತಿನಲ್ಲಿ ಪರಿಹಾರದ ದಾರಿ ಕಂಡುಕೊಳ್ಳಬೇಕಾದದ್ದು ಸರಕಾರದ ಕರ್ತವ್ಯವಾಗಿತ್ತು. ಆದರೆ ಕೋವಿಡ್ ನೆಪ ಮುಂದೆ ಮಾಡಿ ಜನರನ್ನು ಹಸಿವಿನಿಂದ ನರಳುವಂತೆ ಮಾಡಲಾಗುತ್ತಿದೆ. ಕೃಷಿ ಕೂಲಿಕಾರ್ಮಿಕರಿಗಾಗಿ ಪರಿಹಾರಧನ ಕೊಡಬೇಕಾದದ್ದು ಸರಕಾರದ ಕರ್ತವ್ಯವಾಗಿದೆ.

ಸರಕಾರದ ಇಂತಹ ಅಮಾನವೀಯ ತೀರ್ಮಾನವನ್ನು ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ. ಹಾಗೂ ಈ ಕೆಳಕಂಡಂತೆ ಹಕ್ಕೊತ್ತಾಯಗಳನ್ನು ಜಾರಿ ಮಾಡಬೇಕೆಂದು ಆಗ್ರಹಿಸಿದೆ.

1. ಗ್ರಾಮೀಣ ಪ್ರದೇಶದ ಎಲ್ಲ ಕುಟುಂಬಗಳಿಗೆ ಆರು ತಿಂಗಳವರೆಗೆ ರೂ. 10,000 ದಂತೆ ಪರಿಹಾರ ಧನವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.
2. ಎಷ್ಟು ದಿನಗಳವರೆಗೆ ಲಾಕ್ ಡೌನ್ ನೆಪದಲ್ಲಿ ಮನರೇಗಾ ಕೆಲಸ ಸ್ಥಗಿತ ಮಾಡುವರೊ ಅಲ್ಲಿವರೆಗೆ ಪ್ರತಿ ದಿನದ ಕೂಲಿಯನ್ನು ಅವರ ಖಾತೆಗೆ ಜಮಾ ಮಾಡಬೇಕು.
3. ಪ್ರತಿ ಕುಟುಂಬಕ್ಕೆ ಹತ್ತು ಕೇಜಿ ಅಕ್ಕಿ, ಬೇಳೆ, ದ್ವಿದಳ ಧಾನ್ಯ ಮುಂತಾದ ಜೀವನಾವಶ್ಯಕ ವಸ್ತುಗಳನ್ನು ಉಚಿತವಾಗಿ ಗ್ರಾಮೀಣ ಪ್ರದೇಶದ ಎಲ್ಲ ಕುಟುಂಬಗಳಿಗೆ ವಿತರಣೆ ಮಾಡಬೇಕು.
4. ಮನರೇಗಾ ಕೆಲಸ ಬಯಸಿ ಅರ್ಜಿ ಸಲ್ಲಿಸಿದಲ್ಲಿ ಸಾಮುದಾಯಿಕ ಕಾಮಗಾರಿಯ ಬದಲಿಗೆ ವೈಯಕ್ತಿಕ ಹೊಲಗಳಲ್ಲಿ ಕೆಲಸ ಕೊಡಲು ನಿರ್ದೇಶಿಸಬೇಕು. ವ್ಯಕ್ತಿಗಳ ನಡುವಿಗೆ ಅಂತರ ಕಾಪಾಡಿಕೊಂಡು ಕೋವಿಡ್ ನಿಯಮ ಪಾಲಿಸಿ ಕೆಲಸ ಮಾಡಲು ಅನುವು ಕಲ್ಪಿಸಬೇಕು. ಇದಾಗದಿದ್ದರೆ ಕಡ್ಡಾಯವಾಗಿ ಪ್ರತಿ ಕುಟುಂಬಕ್ಕೆ ರೂ.10,000 ದಂತೆ ಆರು ತಿಂಗಳವರೆಗೆ ಪರಿಹಾರ ಕೊಡಬೇಕು.
5. ಮನರೇಗಾ ಕಾರ್ಮಿಕರಿಗಾಗಿ ಪ್ರತಿ ಗ್ರಾಮಗಳಲ್ಲಿ ಕೋವಿಡ್ ಉಚಿತ ಚಿಕಿತ್ಸಾ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಬೇಕು. ಇದಕ್ಕಾಗಿ ವಿಶೇಷ ಅನುದಾನ ಬಿಡುಗಡೆ ಮಾಡಬೇಕು.
6. ಈಗಾಗಲೇ ಮಾಡಿದ ಕೆಲಸದ ಬಾಕಿ ಕೂಲಿಯನ್ನು ಕೂಡಲೇ ಬಿಡುಗಡೆ ಮಾಡಬೇಕು.



ಮೇಲಿನ ಹಕ್ಕೊತ್ತಾಯಗಳ ಜಾರಿಗಾಗಿ ಮೂರೂ ಸಂಘಟನೆಗಳು 13 ಮೇ 2021 ರಂದು ಎಲ್ಲ ಗ್ರಾಮಗಳಲ್ಲಿ ತಮ್ಮ ತಮ್ಮ ನಿವಾಸದ ಮುಂದೆ ಪ್ರತಿಭಟನೆ ನಡೆಸಿತು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**